ವಯಸ್ಸು 4 ರಿಂದ 5 ವರ್ಷಗಳು

ಕರ್ನಾಟಕ ಸರ್ಕಾರ




# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

### ಪುಸ್ತಕ 2

- ನನ್ನ ನೆರೆಹೊರೆ ಮತ್ತು ನನ್ನ ಊರು
- ಬಣ್ಣಗಳೊಂದಿಗೆ ಆಡೋಣ

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ
ಸಮಗ್ರ ಶಿಕ್ಷಣ ಕರ್ನಾಟಕ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ



# ಪರಿವಿಡಿ

## ವಿಷಯ 2: ನನ್ನ ನೆರೆಹೊರೆ ಮತ್ತು ನನ್ನ ಊರು

### ಉಪವಿಷಯ 2.1: ನನ್ನ ನೆರೆಹೊರೆ


ಸಂಭಾಷಣೆ . . . . . . . . . . . . . . . . . . . . . . . . . . . 2
ಯೋಜನಾ ಕಾರ್ಯಗಳು . . . . . . . . . . . . . . . . . . . . 7
ಶಿಶುಗೀತೆಗಳು . . . . . . . . . . . . . . . . . . . . . . . . . 8
ಕಥೆ . . . . . . . . . . . . . . . . . . . . . . . . . . . . . .10
ಒಳಾಂಗಣ ಆಟಗಳು . . . . . . . . . . . . . . . . . . . . . 12
ಹೊರಾಂಗಣ ಆಟಗಳು . . . . . . . . . . . . . . . . . . . . 14


### ಉಪವಿಷಯ 2.2: ನಮಗೆ ಸಹಾಯ ಮಾಡುವ ಜನರು


ಸಂಭಾಷಣೆ . . . . . . . . . . . . . . . . . . . . . . . . . .18
ಯೋಜನಾ ಕಾರ್ಯಗಳು . . . . . . . . . . . . . . . . . . . . 22
ಶಿಶುಗೀತೆಗಳು . . . . . . . . . . . . . . . . . . . . . . . . 23
ಕಥೆ . . . . . . . . . . . . . . . . . . . . . . . . . . . . . 25
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . 27
ಒಳಾಂಗಣ ಆಟಗಳು . . . . . . . . . . . . . . . . . . . . . 29
ಹೊರಾಂಗಣ ಆಟಗಳು . . . . . . . . . . . . . . . . . . . . 31


### ಉಪವಿಷಯ 2.3: ನನ್ನ ಊರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು


ಸಂಭಾಷಣೆ . . . . . . . . . . . . . . . . . . . . . . . . . .36
ಯೋಜನಾ ಕಾರ್ಯಗಳು . . . . . . . . . . . . . . . . . . . . 39
ಶಿಶುಗೀತೆಗಳು . . . . . . . . . . . . . . . . . . . . . . . . 40
ಕಥೆ . . . . . . . . . . . . . . . . . . . . . . . . . . . . . 42
ಸೃಜನಾತ್ಮಕ ಚಟುವಟಿಕೆಗಳು . . . . . . . . . . . . . . . . . 44
ಒಳಾಂಗಣ ಆಟಗಳು . . . . . . . . . . . . . . . . . . . . . 46
ಹೊರಾಂಗಣ ಆಟಗಳು . . . . . . . . . . . . . . . . . . . . 48





## ಬಣ್ಣಗಳೊಂದಿಗೆ ಆಡೋಣ


ಸಿದ್ಧತಾ ಚಟುವಟಿಕೆಗಳು . . . . . . . . . . . . . . . . . . 52
ಅನ್ವೇಷಣಾ ಚಟುವಟಿಕೆ . . . . . . . . . . . . . . . . . . . .53
ವಿಸ್ತರಣಾ ಚಟುವಟಿಕೆ . . . . . . . . . . . . . . . . . . . . 55




ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ


ಸಂಭಾಷಣೆ


ಯೋಜನಾ ಕಾರ್ಯಗಳು



ಶಿಶುಗೀತೆಗಳು


ಕಥೆ



Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ–ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ


ಒಳಾಂಗಣ ಆಟಗಳು



ಹೊರಾಂಗಣ ಆಟಗಳು



ಸೃಜನಾತ್ಮಕ ಚಟುವಟಿಕೆಗಳು


---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ


ಸಿದ್ಧತಾ ಚಟುವಟಿಕೆಗಳು


ಪರಿಶೋಧನಾತ್ಮಕ ಚಟುವಟಿಕೆಗಳು


ವಿಸ್ತರಣಾ ಚಟುವಟಿಕೆ


ಅನ್ವಯಿಸುವಿಕೆ

# ಕೃತಜ್ಞತೆಗಳು

2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ದಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweavers.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**(ಡಾ. ಎಂ.ಟಿ. ರೇಜು, ಭಾ.ಆ.ಸೇ.)**
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು







# ನನ್ನ ನೆರೆಹೊರೆ ಮತ್ತು ನನ್ನ ಊರು

## ನನ್ನ ನೆರೆಹೊರೆ



# ಕಲಿಕಾ ಫಲಿತಗಳು

## ಉಪವಿಷಯ 2.1: ನನ್ನ ನೆರೆಹೊರೆ

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಊರಿನಲ್ಲಿ ಹೆಚ್ಚಾಗಿ ಕಾಣಿಸುವ ಸಾಮಾನ್ಯ ದೃಶ್ಯಗಳು, ಮುಖ್ಯ ಜಾಗ/ಸ್ಥಳ ಗುರುತುಗಳು ಮತ್ತು ವಿವಿಧ ಬಗೆಯ ಮನೆಗಳನ್ನು ಗುರುತಿಸಿ, ಹೆಸರಿಸುವುದು. | 1 ಪ್ರಮುಖ ಸಾಂಸ್ಥಿಕ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸುವುದು (ಉದಾ. ಅಂಗನವಾಡಿ ಕೇಂದ್ರ, ಶಾಲೆ, ಪಂಚಾಯಿತಿ, ಅಂಚೆ ಪೆಟ್ಟಿಗೆ/ಕಚೇರಿ) | 1 ಮಕ್ಕಳು ಮುಖ್ಯ ಜಾಗ/ಸ್ಥಳ ಗುರುತುಗಳ ಪರಿಕಲ್ಪನೆಯನ್ನು ಅರಿಯುವುದು ಮತ್ತು ಮುಖ್ಯ ಜಾಗ/ಸ್ಥಳ ಗುರುತುಗಳ ಸಹಾಯದಿಂದ ದಾರಿಯನ್ನು ಗಮನಿಸಿ, ಪತ್ತೆ ಹಚ್ಚುವುದು ಮತ್ತು ತಮ್ಮ ಪ್ರಯಾಣವನ್ನು ವಿವರಿಸುವುದು. |
| 2 'ನೆರೆಹೊರೆ' ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ತಮ್ಮ ಅಕ್ಕಪಕ್ಕದಲ್ಲಿರುವುದನ್ನು ಮತ್ತು ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸುವುದು. | 2 ದೂರ ಮತ್ತು ಹತ್ತಿರ ಎಂಬ ಅಂತರ ಸೂಚಕ ಪದಗಳನ್ನು ಬಳಸಿಕೊಂಡು ಮುಖ್ಯ ಜಾಗ/ಸ್ಥಳ ಗುರುತುಗಳ ಸಹಾಯದೊಂದಿಗೆ ತಮ್ಮ ಅಕ್ಕಪಕ್ಕದಲ್ಲಿರುವುದನ್ನು ವಿವರಿಸುವುದು. | 2 ದೂರ, ಹತ್ತಿರ, ಅದರ ಪಕ್ಕ, ನನ್ನ ಬಲಕ್ಕೆ, ಎಡಕ್ಕೆ ಮತ್ತು 'ಮೊದಲು/ಪಕ್ಕ/ಅದಾದ ನಂತರ' ಇಂತಹ ಕ್ರಮಾನುಗತ ಪದಗಳನ್ನು ಬಳಸಿಕೊಂಡು ಮುಖ್ಯ ಜಾಗಗಳು/ ಸ್ಥಳ ಗುರುತುಗಳ ಸಹಾಯದಿಂದ ಅಂಗನವಾಡಿ ಕೇಂದ್ರದಿಂದ ತಮ್ಮ ಮನೆಯವರೆಗಿನ ದಾರಿಯನ್ನು ವಿವರಿಸುವುದು. |
| 3 ಅವರ ನೆರೆಹೊರೆಯಲ್ಲಿರುವ ಪ್ರಮುಖ ವ್ಯಕ್ತಿಗಳ ಹೆಸರುಗಳನ್ನು ಹೇಳುವುದು (ಉದಾ: ಅಕ್ಕಪಕ್ಕದ ಮೆನಯಲ್ಲಿರುವವರ ಹೆಸರುಗಳು, ಅವರು ಇರುವ ಜಾಗ ಅಥವಾ ಸ್ಥಳ) ಮತ್ತು ತಮ್ಮ ಕುರಿತು ಮುಖ್ಯವಾದ ಮಾಹಿತಿಯನ್ನು ಕೊಡುವುದು. | 3 ಅವರ ನಿವಾಸದ ಕುರಿತು ಮಾಹಿತಿಯನ್ನು ಒದಗಿಸುವುದು (ಅವರಿರುವ ಸ್ಥಳ/ಊರು/ಗ್ರಾಮ ಪಂಚಾಯಿತಿ ಅಥವಾ ಸ್ಥಳ/ಕಾಲೋನಿಯ ಓಣಿ ಅಥವಾ ಬೀದಿಮತ್ತು ಅವರ ನೆರೆಹೊರೆಯಲ್ಲಿರುವ ಪ್ರಮುಖ ವ್ಯಕ್ತಿಗಳ ಹೆಸರುಗಳು/ಗ್ರಾ.ಪಂ. ಅಧ್ಯಕ್ಷ, ಇತ್ಯಾದಿ ಮಾಹಿತಿ) | 3 ದಾರಿಯಲ್ಲಿ ಅವರು ಎಲ್ಲಿಯಾದರೂ ಕಳೆದುಹೋದರೆ ಅನುಸರಿಸಬೇಕಾದ 3–4 ಸರಳ ನಿಯಮಗಳನ್ನು ಅರಿಯುವುದು ಮತ್ತು ವಿವರಿಸುವುದು. |

ಉಪವಿಷಯ 2.1

# ನನ್ನ ನೆರೆಹೊರೆ



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಪ್ರಮುಖ ಸಾಂಸ್ಥಿಕ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸುವುದು (ಉದಾ. ಅಂಗನವಾಡಿ ಕೇಂದ್ರ, ಶಾಲೆ, ಪಂಚಾಯಿತಿ, ಅಂಚೆ ಪೆಟ್ಟಿಗೆ/ಕಚೇರಿ)
- ದೂರ ಮತ್ತು ಹತ್ತಿರ ಎಂಬ ಅಂತರ ಸೂಚಕ ಪದಗಳನ್ನು ಬಳಸಿಕೊಂಡು ಮುಖ್ಯ ಜಾಗ/ಸ್ಥಳ ಗುರುತುಗಳ ಸಹಾಯದೊಂದಿಗೆ ತಮ್ಮ ಅಕ್ಕಪಕ್ಕದಲ್ಲಿರುವುದನ್ನು ವಿವರಿಸುವುದು
- ಅವರ ನಿವಾಸದ ಕುರಿತು ಮಾಹಿತಿಯನ್ನು ಒದಗಿಸುವುದು (ಅವರಿರುವ ಸ್ಥಳ/ಊರು/ಗ್ರಾಮ ಪಂಚಾಯಿತಿ ಅಥವಾ ಸ್ಥಳ/ಕಾಲೋನಿಯ ಓಣಿ ಅಥವಾ ಬೀದಿಮತ್ತು ಅವರ ನೆರೆಹೊರೆಯಲ್ಲಿರುವ ಪ್ರಮುಖ ವ್ಯಕ್ತಿಗಳ ಹೆಸರುಗಳು/ಗ್ರಾ.ಪಂ. ಅಧ್ಯಕ್ಷ, ಇತ್ಯಾದಿ ಮಾಹಿತಿ)

ಸಂಭಾಷಣೆ 1


# ನನ್ನ ಊರಿನಲ್ಲಿರುವ ಮುಖ್ಯ ಜಾಗ/ಸ್ಥಳ ಗುರುತುಗಳು ಮತ್ತು ಸಂಸ್ಥೆಗಳು

## ಕಲಿಕಾ ಫಲಿತಗಳು

ಅವರ ಊರಿನಲ್ಲಿರುವ ಪ್ರಮುಖ ಸಾಂಸ್ಥಿಕ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ಗುರುತಿಸಿ, ವಿವರಿಸಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

ಪೋಸ್ಟರ್ **P2.1.1** – ವಿವಿಧ ಬಗೆಯ ಮನೆಗಳು, (ಮರಗಳು, ಕೆರೆ, ಬಾವಿ, ಕೈಪಂಪು ಇತ್ಯಾದಿ) ಸ್ವಾಭಾವಿಕ ಸ್ಥಳಗಳು ಸೇರಿದಂತೆ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ತೋರಿಸುತ್ತಿರುವ ಪೋಸ್ಟರ್ (ಮುಖ್ಯ ರಸ್ತೆಗಳು ಹಾಗೂ ಮಣ್ಣಿನ ರಸ್ತೆಗಳು, ದೊಡ್ಡ ಹಾಗೂ ಚಿಕ್ಕ ಅಂಗಡಿಗಳು, ಕಸದ ರಾಶಿ/ಗುಪ್ಪೆ, ಚರಂಡಿ, ಹೆಂಚಿನ ಹಾಗೂ ಪಕ್ಕಾ ಮನೆಗಳು, ಕಾಂಪೌಂಡ್ ಇರುವ ಹಾಗೂ ಇಲ್ಲದ ಮನೆಗಳು, ಧಾರ್ಮಿಕ ಸಂಸ್ಥೆಗಳು (ದೇವಸ್ಥಾನ, ಮಸೀದಿ ಮತ್ತು ಚರ್ಚು), ಸರ್ಕಾರಿ ಕಟ್ಟಡಗಳು (ಅಂಚೆಕಚೇರಿ, ಪೋಲೀಸ್ ಠಾಣೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆ, ಅಂಗನವಾಡಿಕೇಂದ್ರ ಮತ್ತು ಪಂಚಾಯಿತಿ ಕಚೇರಿ). ತಮ್ಮ ಮನೆಯ ಪಕ್ಕದಲ್ಲಿ ನಿಂತಿರುವ ಐದು ಮಕ್ಕಳ ಮಿಂಚುಪಟ್ಟಿಯನ್ನು ಪ್ರತ್ಯೇಕವಾಗಿ ತೋರಿಸುವುದು.





## ಶಿಕ್ಷಕರ ಪೂರ್ವಸಿದ್ಧತೆ

1. ಮಕ್ಕಳು ಕೆಲವು ಮುಖ್ಯ ಜಾಗ/ಸ್ಥಳ ಗುರುತುಗಳನ್ನು ನೋಡುವ ಹಾಗೆ ಒಮ್ಮೆ ಮಾರ್ಗವನ್ನು ಪರಿಶೀಲಿಸಿ, ಪ್ರಯಾಣದ ಮಾರ್ಗವನ್ನು ಅಂತಿಮಗೊಳಿಸುವುದು, ಮಕ್ಕಳಿಗೆ ತೋರಿಸಬೇಕಾದ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ನಿರ್ಧರಿಸಿ, ಮಾರ್ಗವು ಸುರಕ್ಷಿತವಾಗಿದೆ ಎಂದು ಖಾತ್ರಿಪಡಿಸಿಕೊಳ್ಳುವುದು.
2. ಎಲ್ಲ ಮಕ್ಕಳನ್ನೂ ಏಕಕಾಲಕ್ಕೆ ಕರೆದುಕೊಂಡು ಹೋಗುವುದು ಬೇಡ. ಅಗತ್ಯಬಿದ್ದರೆ, ಈ ಚಟುವಟಿಕೆಯನ್ನು ಎರಡು ಭಾಗ ಮಾಡುವುದು, ಒಂದು ಗುಂಪು ಹೊರಗೆ ಹೋಗುವಾಗ ನಿಮ್ಮೊಂದಿಗೆ ಬರಲಿ, ಇನ್ನೊಂದು ಗುಂಪು ಏನಾದರೂ ಆಟ/ಚಟುವಟಿಕೆಯಲ್ಲಿ ತೊಡಗಿಕೊಂಡು, ಶಾಲೆಯಲ್ಲಿರುವುದು. ನಂತರ ಆಟದಲ್ಲಿ ತೊಡಗಿದ್ದ ಗುಂಪನ್ನು ನಿಮ್ಮೊಂದಿಗೆ ಹೊರಗೆ ಕರೆದುಕೊಂಡು ಹೋಗುವುದು, ಈಗಾಗಲೇ ಹೋಗಿ ಬಂದ ಗುಂಪು ಆಟ/ಚಟುವಟಿಕೆಯಲ್ಲಿ ತೊಡಗುವುದು.

## ಸೂಚನೆಗಳು

ಹಂತ 1: **ಊರು/ಕಾಲೋನಿ ಸುತ್ತಾಟ/ಸುತ್ತಾಡುವುದು**

1. ಊರು/ಕಾಲೋನಿಯಲ್ಲಿರುವ ಹಲವಾರು ಸ್ಥಳ/ಸಂಗತಿಗಳನ್ನು ನೋಡಲು ಅವರನ್ನು ಒಂದು ಸುತ್ತಾಟಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳುವುದು.
2. ಮಕ್ಕಳಿಗೆ ಅವರು ಎಲ್ಲಿಂದ ಬರುತ್ತಿದ್ದಾರೆ, ಆ ಸ್ಥಳದ ಹೆಸರು, ಅದು ಎಷ್ಟು ದೂರವಿದೆ? ನೀನೇ ಬರ್ತೀಯಾ? ನೀನು ದಾರಿಯಲ್ಲಿ ಏನೇನು ನೋಡಿದೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು.
3. ಶಾಲೆಯ ಸುತ್ತಮುತ್ತ ಇರುವುದನ್ನು ನೋಡಲು ಒಂದು ಸುತ್ತಾಟಕ್ಕೆ ಹೋಗುವುದಾಗಿ ಹೇಳುವುದು.
4. ಮಕ್ಕಳಿಗೆ ಕಾಣುವ ಕೆಲವು ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸುವುದು? ಮತ್ತು ನಡೆಯುವಾಗ ಅನುಸರಿಸಬೇಕಾದ ನಿಯಮಗಳನ್ನು ಮಕ್ಕಳಿಗೆ ಹೇಳುವುದು.



5. ಮಕ್ಕಳು ರಸ್ತೆಯ ಒಂದು ಬದಿಯಲ್ಲೇ ನಡೆಯುವಂತೆ ತಿಳಿಸುವುದರೊಂದಿಗೆ ಹಾಗೆ ಹೋಗುವಾಗ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ಬೆರಳು ಮಾಡಿ ತೋರಿಸಿ – ಅಂಗಡಿ ಇನ್ನಿತರ ಸೌಲಭ್ಯಗಳು, ಸ್ವಾಭಾವಿಕ ಸ್ಥಳಗಳಾದ ಮರಗಳು, ದಾರಿಯಲ್ಲಿ ಕಾಣುವ ನೀರಿನ ಮೂಲಗಳು ಇತ್ಯಾದಿ. ಶಾಲೆ, ಅಂಚೆ ಕಚೇರಿ ಅಥವಾ ಪಂಚಾಯಿತಿ ಕಚೇರಿ, ಇಂತಹ ಸಂಸ್ಥೆಗಳನ್ನು ತೋರಿಸುವುದು.
6. ಎರಡು ಮುಖ್ಯ ಜಾಗ/ಸ್ಥಳ ಗುರುತುಗಳ ನಡುವಣ ದೂರವನ್ನು ಹತ್ತಿರ, ದೂರ ಪದವನ್ನು ಬಳಸಿಕೊಂಡು ಒತ್ತಿ ಹೇಳುವುದು. ಅವು ಶಾಲೆಯಿಂದ ದೂರವಿದೆಯಾ ಅಥವಾ ಹತ್ತಿರವಿದೆಯಾ ಎಂದು ಮಕ್ಕಳಿಗೆ ಕೇಳುವುದು. ದೂರ ಮತ್ತು ಹತ್ತಿರ ಎನ್ನುವುದರ ಕುರಿತು ಮಕ್ಕಳ ಕಲ್ಪನೆಗಳು ಭಿನ್ನವಾಗಿರುತ್ತವೆ ಎಂಬುದನ್ನು ಗಮನಿಸುವುದು.

### ಹಂತ 2: ಸುತ್ತಾಟದ ನಂತರದ ಸಂಭಾಷಣೆ


1. ಮಕ್ಕಳಿಗೆ ನಡೆಯುವಾಗ ಅವರು ನೋಡಿದ್ದನ್ನು ವಿವರಿಸಲು ಹೇಳುವುದು. ಪ್ರತಿಯೊಂದು ಮಗುವೂ ತಾನು ನೋಡಿದ ಒಂದು ಅಥವಾ ಎರಡು ಸಂಗತಿಗಳನ್ನು ವಿವರಿಸಲು ಅವಕಾಶ ನೀಡುವುದು.

### ಹಂತ 2: ಮುಖ್ಯ ಜಾಗ/ಸ್ಥಳ ಗುರುತುಗಳ ಕುರಿತು ತಿಳಿದುಕೊಳ್ಳುವುದು

1. ಪೋಸ್ಟರ್ ತೆಗೆದುಕೊಂಡು ವೃತ್ತಾಕಾರವಾಗಿ ಕುಳಿತಿರುವ ಮಕ್ಕಳ ಮಧ್ಯೆ ಓಡಾಡುತ್ತ, ಪೋಸ್ಟರನ್ನು ತೋರಿಸುತ್ತ, ಹಿಂದಿನ ದಿನ ಅವರು ನೋಡಿದ ಸ್ಥಳಗಳನ್ನು ಗುರುತಿಸಲು ಹೇಳುವುದು; ಉದಾ: ಅಂಗಡಿಗಳು, ನೀರಿನ ಟ್ಯಾಂಕ್ ಸ್ವಾಭಾವಿಕ ಸ್ಥಳಗಳಾದ ಭಾವಿ, ಕೆರೆ, ಮರ ಇತ್ಯಾದಿಗಳನ್ನು ಚಿತ್ರದಲ್ಲಿ ಗುರುತಿಸಲು ಹೇಳುವುದು.
2. ಪ್ರತಿಯೊಂದು ಮಗುವಿಗೂ ಅವರು ನೋಡಿದ ಒಂದಾದರೂ ಸಂಗತಿಯನ್ನು ಹೆಸರಿಸಲು ಅವಕಾಶ ನೀಡುವುದು.
3. ಮಕ್ಕಳು ಹೇಳದೇ ಉಳಿದಿರುವ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು.
4. ಮಕ್ಕಳು ಹೇಳಿ ಮುಗಿಸಿದ ನಂತರ, ಇನ್ನೇನೂ ಉತ್ತರಗಳು ಬಾರದಿದ್ದಾಗ, ಹೇಳದೇ ಉಳಿದಿರುವ ಮುಖ್ಯ ಜಾಗ/ಸ್ಥಳ ಗುರುತುಗಳು ಮತ್ತು ಸಂಸ್ಥೆಗಳ ಹೆಸರುಗಳನ್ನು ಜೋರಾಗಿ ಹೇಳಿ, ಅವುಗಳನ್ನು ಪೋಸ್ಟರಿನಲ್ಲಿ ಗುರುತಿಸಿ, ಬೆರಳು ಮಾಡಿ, ತೋರಿಸಲು ಮಕ್ಕಳಿಗೆ ಅವಕಾಶ ನೀಡುವುದು.
5. ಮಕ್ಕಳು ಹೇಳಿದ್ದನ್ನು ಪೂರ್ಣ ವಾಕ್ಯದಲ್ಲಿ ಪುನರಾವರ್ತಿಸವುದು ಮತ್ತು ಮಕ್ಕಳಿಗೂ ಪುನರಾವರ್ತಿಸಲು ಹೇಳುವುದು.
6. ಮಕ್ಕಳಿಗೆ ಈಗಾಗಲೇ ಗೊತ್ತಿರುವ ಪದಗಳನ್ನು ಬಳಸಿಕೊಂಡು ಪ್ರತಿಯೊಂದು ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸುವಂತೆ ಹೇಳುವುದು – ದೊಡ್ಡ, ಚಿಕ್ಕ, ಎತ್ತರ, ಹಸಿರು, ಹಳದಿ, ನೀಲಿ, ಕೆಂಪು ಇತ್ಯಾದಿ.
7. ಗಾತ್ರ ಮತ್ತು ಬಣ್ಣ ಪದಗಳನ್ನು ಬಳಸಿಕೊಂಡು ಎರಡು ಬೇರೆ ಬೇರೆ ಮನೆಗಳನ್ನು ವಿವರಿಸಿ, ಹೋಲಿಸುವಂತೆ ತಿಳಿಸುವುದು.
8. ದೊಡ್ಡದು, ಚಿಕ್ಕದು ಇತ್ಯಾದಿ ವಿವರಣಾತ್ಮಕ ಪದಗಳನ್ನು ಬಳಸಿಕೊಂಡು ಮೇಲ್ಛಾವಣಿ, ಗೋಡೆಗಳು ಇತ್ಯಾದಿ ಮನೆಯ ವಿಶಿಷ್ಟ ಲಕ್ಷಣಗಳತ್ತ ಮಕ್ಕಳ ಗಮನ ಸೆಳೆಯುವುದು.
9. ಚಿತ್ರದಲ್ಲಿ ತೋರಿಸಿರುವ ಆಸ್ಪತ್ರೆ, ಪ್ರಾಥಮಿಕ ಶಾಲೆ, ಪೋಲೀಸ್ ಸ್ಟೇಶನ್, ಪಂಚಾಯಿತಿ ಕಚೇರಿ, ಅಂಚೆ ಕಚೇರಿ, ಅಂಗನವಾಡಿ ಕೇಂದ್ರ, ಇಂತಹ ಸಂಸ್ಥೆಗಳನ್ನು ತೋರಿಸಲು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಅವರ ಊರಿನಲ್ಲಿ ಇವು ಇವೆಯೇ, ಇದ್ದರೆ ಎಲ್ಲಿ ಇವೆ ಎಂದು ಕೇಳುವುದು. ಅವರಿಗೆ ಪೂರ್ಣ ವಾಕ್ಯದಲ್ಲಿ ಮಾತನಾಡಲು ಮತ್ತು ಕೆಲವು ಸ್ಥಳಗಳನ್ನು ಹಾಗೂ ಅವುಗಳ ನಡುವಣ ದೂರವನ್ನು ಹತ್ತಿರ, ದೂರ ಇತ್ಯಾದಿ ವಿವರಣಾತ್ಮಕ ಪದಗಳನ್ನು ಬಳಸಿಕೊಂಡು ತೋರಿಸಲು ಸಹಾಯ ಮಾಡುವುದು.
10. ಆಸ್ಪತ್ರೆಗೆ ಯಾರು ಹೋಗುತ್ತಾರೆ? ನಾವು ಅಂಚೆ ಕಚೇರಿಗೆ ಯಾಕೆ ಹೋಗುತ್ತೇವೆ? ಜನರು ಯಾಕೆ ಪೋಲೀಸ್ ಸ್ಟೇಶನ್ನಿಗೆ ಹೋಗುತ್ತಾರೆ? ನಾವು ಯಾಕೆ ಶಾಲೆಗೆ ಬರುತ್ತೇವೆ? ಅಂಗನವಾಡಿ ಕೇಂದ್ರಕ್ಕೆ ಯಾರು ಮತ್ತು ಯಾಕೆ ಹೋಗುತ್ತಾರೆ? ಈ ಪ್ರಶ್ನೆಗಳನ್ನು ಕೇಳುತ್ತ ಪ್ರತಿಯೊಂದು ಸಂಸ್ಥೆಯು ಒದಗಿಸುವ ಸೇವೆಯನ್ನು ವಿವರಿಸುವುದು.

## ಸಂಭಾಷಣೆ 2

## ನೆರೆಹೊರೆಯಲ್ಲಿ ನನ್ನ ದಾರಿ/ಮಾರ್ಗವನ್ನು ತಿಳಿಯುವುದು






### ಕಲಿಕಾ ಫಲಿತಗಳು

ದೂರ ಮತ್ತು ಹತ್ತಿರ ಎಂಬ ಅಂತರಸೂಚಕ ಪದಗಳನ್ನು ಬಳಸಿಕೊಂಡು, ಮುಖ್ಯ ಜಾಗ/ಸ್ಥಳ ಗುರುತುಗಳ ಸಹಾಯದೊಂದಿಗೆ ತಮ್ಮ ಅಕ್ಕಪಕ್ಕದಲ್ಲಿರುವುದನ್ನು ವಿವರಿಸಲು ಸಮರ್ಥರಾಗುವುದು

### ಕಲಿಕಾ ಸಾಮಗ್ರಿಗಳು

**P2.1.1** ಊರಿನ ಪೋಸ್ಟರ್

**F2.1.1** ಮಿಂಚುಪಟ್ಟಿ ಸರಣಿಗಳು 1–5 ಕೆಳಗೆ ದೊಡ್ಡಕ್ಷರದಲ್ಲಿ ಬರೆದಿರುವ ಹೆಸರುಗಳನ್ನು ಹೊಂದಿರುವ, ವಿಭಿನ್ನವಾಗಿ ಕಾಣುತ್ತಿರುವ 5 ಮಕ್ಕಳ ಮಿಂಚುಪಟ್ಟಿಗಳು (ಉದಾ: ರಾಮು, ಸೀತಾ, ಗಣೇಶ, ದಿನೇಶ ಮತ್ತು ಲಕ್ಷ್ಮಿ)

**F2.1.2** ಅವೇ ಮಕ್ಕಳ ಮಿಂಚುಪಟ್ಟಿಗಳು 1–4 (ಕೈಯಲ್ಲಿ ಒಂದು ಪತ್ರ ಹಿಡಿದಿರುವ ಮಗು, ಶಾಲೆಯ ಚೀಲ ಹಿಡಿದಿರುವ ಒಂದು ಮಗು, ಅಂಗನವಾಡಿ ಕೇಂದ್ರಕ್ಕೆ ತಾಯಿಯ ಕೈ ಹಿಡಿದು ಹೋಗುತ್ತಿರುವ ಒಂದು ಮಗು, ಕೈಗೆ ಬ್ಯಾಂಡೇಜ್ ಹಾಕಿರುವ ಒಂದು ಮಗು)





### ಶಿಕ್ಷಕರ ಪೂರ್ವಸಿದ್ಧತೆ

1. ತರಗತಿ ಪ್ರಾರಂಭಕ್ಕೆ ಮೊದಲೇ ಮಿಂಚು ಪಟ್ಟಿಗಳು ಮತ್ತು ಅಗತ್ಯವಿರುವ ಇನ್ನಿತರ ಸಾಮಗ್ರಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.
2. ಮಕ್ಕಳಿಗೆ ಮನೆಗಳನ್ನು ಮತ್ತು ಸ್ಥಳಗಳನ್ನು ಗಮನಿಸಲು ಹಾಗೂ ಅವುಗಳನ್ನು ವಿವರಿಸಲು ಸಹಾಯವಾಗುವಂತೆ ಕೇಳಬೇಕಿರುವ ಹಲವಾರು ಪ್ರಶ್ನೆಗಳನ್ನು ಸಿದ್ಧ ಮಾಡಿಕೊಳ್ಳುವುದು

### ಸೂಚನೆಗಳು


**ಹಂತ 1: ಮಿಂಚುಪಟ್ಟಿಯಲ್ಲಿ ತೋರಿಸಿರುವ ಮಕ್ಕಳನ್ನು ಪರಿಚಯಿಸುವುದು**

1. ಮಿಂಚುಪಟ್ಟಿಗಳನ್ನು ತೋರಿಸಿ, ಅದರಲ್ಲಿರುವ ಮಕ್ಕಳನ್ನು ಅವರ ಹೆಸರುಗಳೊಡನೆ ಗುಂಪಿಗೆ ಪರಿಚಯ ಮಾಡುವುದು. ಈ ಮಕ್ಕಳು ಊರಿನಲ್ಲಿ ವಾಸಿಸುತ್ತಾರೆ ಎಂದು ವಿವರಿಸುವುದು ಮತ್ತು ಮಕ್ಕಳಿಗೆ ಅವರ ಮನೆಗಳನ್ನು ಬೆರಳು ಮಾಡಿ ತೋರಿಸಲು ತಿಳಿಸುವುದು.
2. ಚಿತ್ರದಲ್ಲಿರುವ ಮಕ್ಕಳ ಹೆಸರುಗಳನ್ನು ಮಕ್ಕಳು ನೆನಪಿಡುವುದನ್ನು ಮತ್ತು ಅವರ ಹೆಸರುಗಳನ್ನು ಹೇಳುವುದನ್ನು ಖಾತ್ರಿಪಡಿಸಿಕೊಳ್ಳಲು ಮತ್ತೊಮ್ಮೆ ಅವರ ಹೆಸರುಗಳನ್ನು ಹೇಳುವುದು.
3. ಅವರಿಗೆ ಹುಡುಗಿಯರು ಮತ್ತು ಹುಡುಗರನ್ನು ತೋರಿಸಲು ಹೇಳುವುದು; ಜೊತೆಗೆ ಮಕ್ಕಳು ಹಾಗೂ ಅವರು ಹಾಕಿರುವ ಬಟ್ಟೆಗಳನ್ನು ಗಾತ್ರ ಹಾಗೂ ಬಣ್ಣದ ಪದಗಳನ್ನು ಬಳಸಿಕೊಂಡು ವಿವರಿಸುವಂತೆ ತಿಳಿಸುವುದು.









## ನೆರೆಹೊರೆಯಲ್ಲಿ ನನ್ನ ದಾರಿ/ಮಾರ್ಗವನ್ನು ತಿಳಿಯುವುದು

**ಹಂತ 2**

ಪೋಸ್ಟರ್ ಒಂದನ್ನು ತೋರಿಸುವುದು ಮತ್ತು ಮಕ್ಕಳಿಗೆ ಪ್ರತಿಯೊಂದು ಮಗುವಿನ ಮನೆಗಳನ್ನು ತೋರಿಸಲು ಹೇಳುವುದು. ಮಕ್ಕಳಿಗೆ ಆ ಮನೆಗಳನ್ನು ಗಮನವಿಟ್ಟು ನೋಡಿ, ವಿವರಿಸುವಂತೆ ತಿಳಿಸುವುದು. ಯಾರು ದೊಡ್ಡ ಮನೆಯಲ್ಲಿ ವಾಸಿಸುತ್ತಾರೆ? ಯಾರು ಸಣ್ಣ ಮನೆಯಲ್ಲಿ ವಾಸಿಸುತ್ತಾರೆ? ಮೇಲ್ಛಾವಣಿಯ ಬಣ್ಣ ಯಾವುದು? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು.

ಮಕ್ಕಳಿಗೆ ಈಗ ಒಂದು ಆಟವನ್ನು ಆಡೋಣ ಎಂದು ಹೇಳುವುದು. ಶಿಕ್ಷಕರು ಒಂದು ವಾಕ್ಯವನ್ನು ಜೋರಾಗಿ ಹೇಳುತ್ತಿದ್ದಂತೆ, ಮಕ್ಕಳು ಆ ಮನೆಗಳನ್ನು ತೋರಿಸಲು ಸಮರ್ಥರಾಗುವುದು.







1. ಸೋಗೆ/ ಹೆಂಚು/ ಆರ್‌ಸಿಸಿ ಛಾವಣಿ/ ತಾರಸಿ ಇರುವ ಮನೆ.
2. ಕಾಂಪೌಂಡ್ ಇರುವ ಮನೆ.
3. ಗೇಟ್ ಇರುವ ಮನೆ.
4. ಚಿಕ್ಕ ಮಗು ಹೊರಗೆ ಇರುವ ಮನೆ.
5. ತಂದೆ ಮತ್ತು ತಾಯಿ ಹೊರಗೆ ಕೂತಿರುವ ಮನೆ.
6. ಕೆಂಪು/ ನೀಲಿ/ ಹಳದಿ ಛಾವಣಿ ಇರುವ ಮನೆ.
7. ದೊಡ್ಡ ಮರ/ ಸಣ್ಣ ಮರ ಇರುವ ಮನೆ.
8. ಹಸಿರು/ ಕಪ್ಪು ಪರದೆ ಇರುವ ಮನೆ.
9. ಕಪ್ಪು ನಾಯಿ ಇರುವ ಮನೆ.

### ಹಂತ 3: ಸೂಕ್ತ ಪದಗಳನ್ನು ಬಳಸಿಕೊಂಡು ಮನೆಗಳನ್ನು ವಿವರಿಸುವುದು

ಪ್ರತಿ ಮಗುವಿನ ಮನೆಯನ್ನು ಗಮನವಿಟ್ಟು ನೋಡಿ, ವಿವರಿಸುವಂತೆ ಮಕ್ಕಳಿಗೆ ಹೇಳುವುದು. ಮಕ್ಕಳು ಹೇಳಿದ ವಾಕ್ಯಗಳನ್ನು ಪೂರ್ಣಗೊಳಿಸುತ್ತ, ಅವರಿಗೆ ಪೂರ್ಣ ವಾಕ್ಯಗಳಲ್ಲಿ ಮಾತನಾಡಲು ಸಹಾಯ ಮಾಡುವುದು ಮತ್ತು ನೀವು ಹೇಳಿದ ನಂತರ ಅವರಿಗೆ ಪುನರಾವರ್ತಿಸಲು ಹೇಳುವುದು.

### ಹಂತ 4: ಹತ್ತಿರ ಮತ್ತು ದೂರ ಎಂಬುದನ್ನು ಪರಿಚಯಿಸುವುದು

ಮಕ್ಕಳಿಗೆ ಪೋಸ್ಟರಿನಲ್ಲಿ ಪರಸ್ಪರ ಹತ್ತಿರ ವಾಸಿಸುತ್ತಿರುವ ಇಬ್ಬರು ಮಕ್ಕಳನ್ನು ಮತ್ತು ಪರಸ್ಪರ ದೂರ ವಾಸಿಸುತ್ತಿರುವ ಇಬ್ಬರು ಮಕ್ಕಳನ್ನು ಹೆಸರಿಸಲು ಹೇಳುವುದು. ಇದನ್ನೇ ಅನುಸರಿಸಿ, ತರಗತಿಯಲ್ಲಿ ಅವರ ಮನೆಗೆ ಸಮೀಪದಲ್ಲಿ ವಾಸಿಸುತ್ತಿರುವ ಇನ್ನೊಂದು ಮಗುವನ್ನು ಹೆಸರಿಸುವಂತೆ ತಿಳಿಸುವುದು. ಈಗ ಒಂದು ಆಟ ಆಡುವುದಾಗಿ, ಅದಕ್ಕಾಗಿ ಪೋಸ್ಟರನ್ನು ತುಂಬ ಗಮನವಿಟ್ಟು ನೋಡಬೇಕೆಂದು ಮಕ್ಕಳಿಗೆ ಹೇಳುವುದು.

ನೀವು ಸುತ್ತಲೂ ಓಡಾಡುತ್ತ, ಪ್ರಶ್ನೆಗಳನ್ನು ಕೇಳುವುದಾಗಿ, ಮಕ್ಕಳು ಪದಗಳಲ್ಲಿ ಅಥವಾ ಪದಗುಚ್ಛಗಳಲ್ಲಿ ಉತ್ತರಿಸಬೇಕೆಂದು ಹೇಳುವುದು. ದೂರ ಮತ್ತು ಸ್ಥಾನಗಳನ್ನು ಆಧರಿಸಿ ವಿವರಣೆಗಳು ಇರಬೇಕು ಮತ್ತು ಇಂತಹ ಕೆಲವು ಪ್ರಶ್ನೆಗಳನ್ನು ಕೇಳುವುದು: ಉದಾ: 1) ಈ ಮನೆಯು ಶಾಲೆಗೆ ಹತ್ತಿರವಿದೆಯಾ ?2) ಈ ಮನೆಯು ಶಾಲೆ/ಅಂಚೆಕಚೇರಿ/ತರಕಾರಿ ಅಂಗಡಿ/ಕ್ಷೌರಿಕರ ಅಂಗಡಿಯಿಂದ ದೂರ ಇದೆಯಾ? (ನೀವು ಮೊದಲೇ ಕನಿಷ್ಠ 10 ಪ್ರಶ್ನೆಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು). ಮಕ್ಕಳಿಗೆ ಪೂರ್ಣ ವಾಕ್ಯಗಳಲ್ಲಿ ಉತ್ತರಿಸಲು ಸಹಾಯ ಮಾಡುವುದು.

ಮಕ್ಕಳು ಈ ಪ್ರಶ್ನೆಗಳನ್ನು ಉತ್ತರಿಸಲು ಸಮರ್ಥರಾಗುತ್ತಿದ್ದಂತೆ, ಗಮನಿಸುವಿಕೆ ಮತ್ತು ಇಲ್ಲಿ ತೋರಿಸಿದಂತೆ ಸಂಬಂಧಿಸುವುದು ಅಗತ್ಯವಿರುವ ಸಂಕೀರ್ಣ ಪ್ರಶ್ನೆಗಳನ್ನು ಕೇಳುವುದು. ಉದಾ: 1) ಶಾಲೆಯಿಂದ ಮನೆ ತಲುಪಲಿಕ್ಕೆ ಯಾರು ಹೆಚ್ಚು ದೂರ ನಡೆಯುತ್ತಾರೆ? 2) ಮುಖ್ಯ ರಸ್ತೆಗೆ ಹೋಗಲು ಯಾವ ಮಗು ತುಂಬ ಹೆಚ್ಚು ನಡೆಯಬೇಕಾಗುತ್ತದೆ? ಇತ್ಯಾದಿ. ಮಕ್ಕಳಿಗೆ 'ಯಾಕೆ' ಎಂದು ಕೇಳುವ ಮೂಲಕ ಅವರು ತಮ್ಮ ಉತ್ತರಗಳಿಗೆ ಕಾರಣಗಳನ್ನು ಕೊಡುವುದನ್ನು ಖಾತ್ರಿಪಡಿಸಿಕೊಳ್ಳುವುದು ಮತ್ತು ಅವರಿಗೆ ಕಾರಣ ನೀಡಲು ಆಸ್ಪದ ಕಲ್ಪಿಸುವುದು. ಕಾರಣದ ಸಂಬಂಧವನ್ನು ವಾಕ್ಯಗಳಲ್ಲಿ ವಿವರಿಸಲು ಸಹಾಯ ಮಾಡುವುದು, ಉದಾ: ರಾಮುವಿನ ಮನೆ ಮುಖ್ಯ ರಸ್ತೆಗೆ ಹತ್ತಿರ ಇದೆ, ಹೀಗಾಗಿ ಅವನು ಮುಖ್ಯ ರಸ್ತೆಗೆ ಬರಲಿಕ್ಕೆ ಹೆಚ್ಚು ನಡೆಯುವುದು ಬೇಡ.

ಸಂಭಾಷಣೆ 3

## ನನ್ನ ಮನೆ ತಲುಪುವ ದಾರಿಯನ್ನು ಹುಡುಕುವುದು



### ಕಲಿಕಾ ಫಲಿತಗಳು

ಮಕ್ಕಳು ಅವರ ಮನೆ/ನಿವಾಸದ ಕುರಿತು ಮಾಹಿತಿಯನ್ನು ಒದಗಿಸಲು ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

**P2.1.1** ಊರಿನ ಪೋಸ್ಟರ್

ಕಥೆ – ಜಾತ್ರೆಯಲ್ಲಿ ಕಳೆದು ಹೋದ ಮಕ್ಕಳು

### ಶಿಕ್ಷಕರ ಪೂರ್ವಸಿದ್ಧತೆ

ಆರಂಭ ಮಾಡುವುದಕ್ಕಿಂತ ಮೊದಲು ಊರು, ಪಂಚಾಯಿತಿ ಅಥವಾ ಕಾಲೋನಿ ಕುರಿತು ಎಲ್ಲ ಅಗತ್ಯ ಮಾಹಿತಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1**

ಈ ದಿನ ನಮಗೆಲ್ಲ ಗೊತ್ತಿರಲೇಬೇಕಾದ ಮತ್ತು ತುಂಬ ಮುಖ್ಯವಾಗಿರುವ ಸಂಗತಿಯನ್ನು ನಾವು ಕಲಿಯೋಣ ಎಂದು ಹೇಳುತ್ತ ವಿಷಯವನ್ನು ಪರಿಚಯಿಸುವುದು. ಮಕ್ಕಳಿಗೆ ಅವರ ತಂದೆ, ತಾಯಿಯ ಹೆಸರು ಅವರ ಹಳ್ಳಿಯ ಮತ್ತು ಗ್ರಾಮ ಪಂಚಾಯಿತಿಯ ಹೆಸರು ತಿಳಿದಿರಬೇಕಾಗಿರುವುದು ತುಂಬ ಮುಖ್ಯ ಎಂದು ಹೇಳುವುದು. ಊರು/ಹಳ್ಳಿ ಮತ್ತು ಪಂಚಾಯಿತಿ/ಕಾಲೋನಿ ಅಥವಾ ಬಡಾವಣೆಯ ಹೆಸರನ್ನು ಪರಿಚಯಿಸುವುದು ಮತ್ತು ಮಕ್ಕಳು ಇದನ್ನು ಪುನರಾವರ್ತಿಸುವಂತೆ ಮಾಡುವುದು. ಎಲ್ಲ ಮಕ್ಕಳಿಗೂ ಈ ಮಾಹಿತಿ ಗೊತ್ತಾಗುವುದನ್ನು ಖಚಿತಪಡಿಸಿಕೊಳ್ಳುವುದು.

**ಹಂತ 2: ನಾವು ಕಳೆದುಹೋದರೆ ಏನು ಮಾಡಬೇಕು?**

ಪೋಸ್ಟರ್ 2ನ್ನು ಹೊರತೆಗೆದು, ಅಳುತ್ತಿರುವ ಚಿಕ್ಕ ಹುಡುಗನ ಚಿತ್ರ ತೋರಿಸುವುದು. ಈ ಹುಡುಗ ಯಾಕೆ ಅಳುತ್ತಿದ್ದಾನೆ ಎಂದರೆ ಅವನು ಕಳೆದುಹೋಗಿದ್ದಾನೆ. ಜನರು ಈ ಹುಡುಗನನ್ನು ಅವನ ಮನೆಗೆ ತಲುಪಿಸಬೇಕು ಎಂದಾದರೆ ಅವನಿಗೆ ಯಾವ ಮಾಹಿತಿ ಗೊತ್ತಿರಬೇಕು ಅಂತ ನೀವು ಯೋಚಿಸುತ್ತೀರಿ?

ಈಗ ನೀವು ಕಳೆದುಹೋಗಿದ್ದೀರಿ ಎಂದು ಊಹೆ ಮಾಡಿ. ಆಗ ನಿಮಗೆ ಏನು ಅನ್ನಿಸುತ್ತೆ? ನಿಮಗೆ ಏನು ನೆನಪಿರಬೇಕು? ಈ ಮಾಹಿತಿ ಏನು? (ಮಗುವಿನ ಹೆಸರು, ತಂದೆ, ತಾಯಿಯ ಹೆಸರು ಮತ್ತು ಮನೆಯ ಸುತ್ತಮುತ್ತಲಿನ ಮುಖ್ಯ ಜಾಗಗಳು ಅಥವಾ ಸ್ಥಳ ಗುರುತುಗಳು). ಅವರು ಇಂತಹ ಶಾಲೆಗೆ ಹೋಗುತ್ತೇವೆ ಎಂದು ಶಾಲೆಯ ಹೆಸರನ್ನೂ ಹೇಳಬಹುದು. ಅವರ ತಂದೆ ಅಥವಾ ತಾಯಿ ಎಲ್ಲಿ ಕೆಲಸ ಮಾಡುತ್ತಾರೆ ಎಂದು ಅವರಿಗೆ ಗೊತ್ತೆ? ಇದು ಕೂಡ ಮಕ್ಕಳ ಮನೆಯನ್ನು ಕಂಡುಹಿಡಿಯಲು ಜನರಿಗೆ ಸಹಾಯ ಮಾಡಬಹುದು. ಮಕ್ಕಳು ಜನನಿಬಿಡ ಸ್ಥಳಗಳಿಗೆ ಪೋಷಕರ ಜೊತೆಗೆ ಹೊದಾಗ, ಅವರು ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿಗಳ ಕುರಿತು ಕೇಳುವುದು.

ಸಾಮಾನ್ಯ ಎಚ್ಚರಿಕೆಗಳನ್ನು ಚರ್ಚಿಸುವುದು ಉದಾ:– ಪೋಷಕರ ಹತ್ತಿರದಲ್ಲಿಯೇ ಇರುವುದು, ಕಣ್ಣಿಗೆ ಕಂಡ ಸಂಗತಿಗಳ ಹಿಂದೆ ಓಡಬಾರದು. ಸಂತೆಯಲ್ಲಿ ಅಥವಾ ಮಾರುಕಟ್ಟೆಯ ಜನಜಂಗುಳಿಯಲ್ಲಿ ಅವರು ಕಳೆದು ಹೋದರೆ ಏನಾಗುತ್ತದೆ? ಅವರು ಏನು ಮಾಡಬೇಕು? ಎಂದು ತಿಳಿಸುವುದರೊಂದಿಗೆ ಮಕ್ಕಳು ಒಂದು ಸ್ಥಳದಲ್ಲಿ ಇರಬೇಕಾದ ಅಗತ್ಯವನ್ನು ಒತ್ತಿ ಹೇಳುವುದು. ಅವರು ಪೋಷಕರ ಜೊತೆ ಕೊನೆಯ ಸಲ ನಿಂತಿದ್ದು ಎಲ್ಲಿ ಎಂದು ಗೊತ್ತಿದ್ದರೆ, ಅಲ್ಲಿಗೇ ಹೋಗಿ, ನಿಂತು ಕಾಯುವುದು. ಅವರ ಪೋಷಕರು ಹುಡುಕಿಕೊಂಡು ಅಲ್ಲಿಗೆ ಬರುತ್ತಾರೆ. ಮಕ್ಕಳೇ ಪೋಷಕರನ್ನು ಹುಡುಕಿಕೊಂಡು ಹೋಗಬಾರದು ಎಂಬುದನ್ನು ಒತ್ತಿ ಹೇಳುವುದು.

ಮಕ್ಕಳು ತಮ್ಮ ಕುರಿತು, ಪೋಷಕರು, ಹಳ್ಳಿ, ಗ್ರಾಮ ಪಂಚಾಯಿತಿ ಅಥವಾ ಅವರಿರುವ ಕಾಲೋನಿ, ಬಡಾವಣೆ, ಪೋಷಕರ ದೂರವಾಣಿ ಸಂಖ್ಯೆ, ಪೋಷಕರ ಬಳಿ ಫೋನ್ ಇರದಿದ್ದರೆ, ಅಕ್ಕಪಕ್ಕದ ಮನೆಯಲ್ಲಿರುವ ಯಾರಾದರೂ ದೂರವಾಣಿ ಸಂಖ್ಯೆಯನ್ನು ಹೊಂದಿರಬೇಕು ಎಂಬುದನ್ನು ಒತ್ತಿ ಹೇಳುವುದು. ಮಕ್ಕಳಿಗೆ ತಾವು ಹೋಗುವ ಶಾಲೆಯ ಹೆಸರು ಗೊತ್ತಿರುವುದೂ ಕೂಡ ಸಹಾಯ ಮಾಡುತ್ತದೆ – ಹೀಗಾಗಿ ಮಕ್ಕಳಿಗೆ ಶಾಲೆಯ ಹೆಸರನ್ನು ಹೇಳಿ, ಅವರು ನೆನಪಿಟ್ಟುಕೊಳ್ಳುವಂತೆ ಮಾಡುವುದು.

# ಮನೆಯ ದಾರಿ ಕಂಡುಹಿಡಿಯುವುದು

## ಕಲಿಕಾ ಫಲಿತಗಳು

ಮಕ್ಕಳು ಶಾಲೆಯಿಂದ ತಮ್ಮ ಮನೆಗೆ ಹೋಗುವ ದಾರಿಯನ್ನು ಕಂಡುಹಿಡಿಯಲು ಸಹಾಯವಾಗುವ ಮುಖ್ಯ ಜಾಗಗಳು/ಸ್ಥಳ ಗುರುತುಗಳನ್ನು ಅರಿಯಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

ಕಾಗದ, ಪೆನ್ಸಿಲ್ ಮತ್ತು ಕ್ರೆಯಾನ್‌ಗಳು

## ಸೂಚನೆಗಳು

1. ಮಕ್ಕಳಿಗೆ ಅವರ ಮನೆಯ ದಾರಿಯಲ್ಲಿರುವ ಒಂದು ಅಥವಾ ಎರಡು ಮುಖ್ಯ ಜಾಗಗಳು/ಸ್ಥಳಗಳ ಗುರುತುಗಳನ್ನು ಟಿಪ್ಪಣಿ ಮಾಡಲು ಹೇಳುವುದು. ಉದಾ: – ಅವರ ಮನೆಯಿಂದ ಹತ್ತಿರವಿರುವುದು ಒಂದು ಮತ್ತು ದೂರವಿರುವುದು ಇನ್ನೊಂದು. ತಾವು ನೋಡಿರುವ ಮುಖ್ಯ ಜಾಗ/ಸ್ಥಳ ಗುರುತುಗಳನ್ನು ವಿವರಿಸಲು ರೂಢಿ ಮಾಡಿಸುವುದು. ಅವರ ಮನೆಯ ಸಮೀಪ ಇರುವ ಒಂದು ದೊಡ್ಡ ಮುಖ್ಯ ಜಾಗ/ಸ್ಥಳಗುರುತನ್ನು ಮತ್ತು ಶಾಲೆಯ ಸಮೀಪವೇ ಇರುವ ಇನ್ನೊಂದು ಮುಖ್ಯ ಜಾಗ/ಸ್ಥಳ ಗುರುತನ್ನು ಗಾತ್ರ, ಬಣ್ಣ ಹೆಸರುಗಳ ಆಧಾರದಲ್ಲಿ ಗಮನಿಸಲು ಹೇಳುವುದು. (ಇವು ಸ್ವಾಭಾವಿಕ ಸ್ಥಳ ಗುರುತುಗಳು ಆಗಿರಬಹುದು ಅಥವಾ ಅಂಗಡಿಗಳು, ಮನೆ ಇತ್ಯಾದಿ ಆಗಿರಬಹುದು.
2. ಮನೆಯ ಚಿತ್ರವನ್ನು ಒಂದು ತುದಿಯಲ್ಲಿ ಬಿಡಿಸಿ, ಇನ್ನೊಂದು ತುದಿಯಲ್ಲಿ ಶಾಲೆಯ ಚಿತ್ರವನ್ನು ಬಿಡಿಸಿ, ಒಂದು ಮುಖ್ಯ ಜಾಗ/ಸ್ಥಳ ಗುರುತು ಮನೆಯ ಸಮೀಪ ಇರುವಂತೆ ಮತ್ತು ಇನ್ನೊಂದು ಶಾಲೆಯ ಸಮೀಪ ಇರುವಂತೆಚಿತ್ರವನ್ನು ಬಿಡಿಸಲು ಮಕ್ಕಳಿಗೆ ಹೇಳುವುದು.
3. ತರಗತಿ ಕೋಣೆಯಲ್ಲಿ ಓಡಾಡುತ್ತ, ಮಕ್ಕಳಿಗೆ ಅವರು ಬಿಡಿಸಿರುವ ಚಿತ್ರವನ್ನು ವಿವರಿಸುವಂತೆ ಹೇಳುವುದು ಮತ್ತು ಅವರ ಚಿತ್ರಗಳಿಗೆ ಶೀರ್ಷಿಕೆ ನೀಡಿ, ಅವುಗಳನ್ನು ಮಕ್ಕಳ ಕಡತದಲ್ಲಿ ಇಡುವ ಮುಂಚೆ ತರಗತಿಕೋಣೆಯಲ್ಲಿ ಪ್ರದರ್ಶಿಸುವುದು.

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು **'ನೆರೆಹೊರೆ'** ಕವನವನ್ನು ಸರಿಯಾದ ಉಚ್ಚಾರಣೆ, ಹಾವಭಾವ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವರು.

### ಕಲಿಕಾ ಸಾಮಗ್ರಿಗಳು

ಕೈಪಿಡಿಯಲ್ಲಿ ಕೊಟ್ಟಿರುವ ಶಿಶುಗೀತೆಯನ್ನು ಬಳಸುವುದು

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದರ ಜೊತೆಗೆ ಮಾಡಬೇಕಿರುವ ಅಭಿನಯ, ಹಾವಭಾವದ ಕುರಿತು ತಿಳಿದುಕೊಳ್ಳುವುದು.

### ಸೂಚನೆಗಳು

1. **"ನೆರೆಹೊರೆ'** ಶಿಶುಗೀತೆಯನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿ ಇದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಪೂರ್ಣವಾಗಿ ಲಯಬದ್ಧವಾದ ಅಭಿನಯದೊಂದಿಗೆ ಧ್ವನಿಯ ಏರಿಳಿತದೊಂದಿಗೆ ಹೇಳುವುದು.
3. ಪ್ರತಿಯೊಂದೂ ಸಾಲನ್ನು ಮಕ್ಕಳಿಗೆ ಪುನರಾವರ್ತನೆ ಮಾಡಲು ಹೇಳಿ, ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಶಿಶುಗೀತೆಯ ಜೊತೆಗೆ ಅಭಿನಯವನ್ನು ತೋರಿಸಿ, ನಿಮ್ಮನ್ನು ಅನುಕರಿಸಲು ಮಕ್ಕಳಿಗೆ ಹೇಳುವುದು.
5. ಮಕ್ಕಳಿಗೆ ಗುಂಪುಗಳಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

# ನೆರೆಹೊರೆ

ಸುತ್ತ ಮುತ್ತ ಎಲ್ಲಾ ಉಂಟು
ಅಂಗನವಾಡಿಗೆ ಬಹಳ ನಂಟು
ಮುಂದೆ ಹೋದರೆ ಪೋಸ್ಟಾಫೀಸು
ಹಿಂದೆ ಬಂದರೆ ಶಾಲೆಯು ಉಂಟು
ಬಲಗಡೆ ಬಂದರೆ ಅಂಗಡಿ ಮನೆ
ಎಡಗಡೆ ಹೋದರೆ ಕುಂಬಾರನ ಮನೆ

ಆ ಕಡೆ ಹೋದರೆ ಆಸ್ಪತ್ರೆ
ಈ ಕಡೆ ಬಂದರೆ ದೇವರ ಗುಡಿ
ಅಲ್ಲಿ ಇರುವುದು ನಮ್ಮ ಮನೆ
ಇಲ್ಲಿ ಇರುವುದು ನಿಮ್ಮ ಮನೆ
ಸುತ್ತ ಮುತ್ತಾ ಎಲ್ಲಾ ಉಂಟು
ಅಂಗನವಾಡಿಗೆ ಬಹಳ ನಂಟು

**ಟಿಪ್ಪಣಿ:** ಅಂಗನವಾಡಿಯ ಸುತ್ತಮುತ್ತ ಏನೇನಿದೆ ಎಂಬುದನ್ನು ಗಮನಿಸಿ ಶಬ್ದ ಸೇರಿಸಿ ಹಾಡು ಹೇಳಿ ಕೊಡುವುದು



ಶಿಶುಗೀತೆ ೨

# The more we get together

## The more we get together

The more we get together, together, together
The happier we will be
For your friends are my friends and
my friends are your friends
The more we get together, together, together
The happier we will be.

The more we sing together, together, together
The happier we will be
For your friends are my friends,
and my friends are your friends
The more we sing together, together, together
The happier we will be.



# ಜಾತ್ರೆಯಲ್ಲಿ ಕಳೆದುಹೋದ ಮಕ್ಕಳು




## ಕಲಿಕಾ ಫಲಿತಗಳು

**'ಜಾತ್ರೆಯಲ್ಲಿ ಕಳೆದುಹೋದ ಮಕ್ಕಳು'** ಕಥೆಯನ್ನು ಅರ್ಥ ಮಾಡಿಕೊಳ್ಳುವರು ಮತ್ತು ಕೆಲವು ಸರಳ ಪ್ರಶ್ನೆಗಳನ್ನು ಉತ್ತರಿಸುವರು – ನೆನಪಿಸಿಕೊಳ್ಳುವುದು ಮತ್ತು ಅರ್ಥೈಸಿಕೊಳ್ಳುವಿಕೆಗೆ ಅಗತ್ಯವಿರುವ ಏನು? ಏಕೆ? ಹೇಗೆ? ಮತ್ತು ಯಾವಾಗ? ಪ್ರಶ್ನೆಗಳಿಗೆ ಉತ್ತರಿಸುವರು.

## ಕಲಿಕಾ ಸಾಮಗ್ರಿಗಳು

ಕಥೆಯ ಚಿತ್ರದ ಕಾರ್ಡ್




## ಕಥೆ

**ಜಾತ್ರೆಯಲ್ಲಿ ಕಳೆದುಹೋದ ಮಕ್ಕಳು**

ಗೆಳೆಯರಾದ ರಾಮು, ಸೀತಾ, ಗಣೇಶ್, ದಿನೇಶ್ ಮತ್ತು ಲಕ್ಷ್ಮಿ, ಚಿಕ್ಕಪ್ಪನ ಜೊತೆ ದಸರಾ ಜಾತ್ರೆಯನ್ನು ನೋಡಲು ಹೋದರು. ಅವರು ಅಲ್ಲಿ ತೊಟ್ಟಿಲು (ಅಥವಾ ರಾಟೆ) ಇನ್ನಿತರ ಆಟಗಳನ್ನು ಆಡಿದರು, ಅಂಗಡಿಯೊಂದರಲ್ಲಿ ಮಿಠಾಯಿ ತೆಗೆದುಕೊಂಡು ತಿಂದರು. ಹಾಗೆಯೇ ಸುತ್ತಾಡುತ್ತ ಬೇರೆ ಬೇರೆಬಗೆಯ ಅಂಗಡಿಗಳನ್ನು ನೋಡಿದರು.

ಇದ್ದಕ್ಕಿದ್ದಂತೆ ಸುತ್ತಲೂ ನೋಡಿದ ರಾಮುವಿಗೆ ಆ ಜನಜಂಗುಳಿಯಲ್ಲಿ ತಮ್ಮ ಚಿಕ್ಕಪ್ಪನನ್ನು ಎಲ್ಲೋ ಕಳೆದುಕೊಂಡಿದ್ದೇವೆ ಎಂಬುದು ಅರಿವಾಯಿತು. ಪುಟಾಣಿ ಲಕ್ಷ್ಮಿಗೆ ತುಂಬ ಹೆದರಿಕೆಯಾಗಿ, ಅಳಲು ಶುರು ಮಾಡಿದಳು.

'ಅಯ್ಯೋ... ಈಗೇನು ಮಾಡೋದು? ಕತ್ತಲಾಗ್ತಿದೆ, ಈ ಜನರ ಗಲಾಟೆಯಲ್ಲಿ ಚಿಕ್ಕಪ್ಪನನ್ನು ಹುಡುಕೋದಕ್ಕೆ ಆಗಲ್ಲ' ಎಂದು ಸೀತಾ ಹೇಳಿದರು.

ಪ್ರತಿಯೊಬ್ಬರೂ ಅವರದೇ ಸಲಹೆಗಳನ್ನು ಹೇಳತೊಡಗಿದರು:

ನಾವೆಲ್ಲ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋಗಿ, ಚಿಕ್ಕಪ್ಪನನ್ನು ಹುಡುಕೋಣವಾ?

ನಾವು ಕೊನೇ ಸಲ ಚಿಕ್ಕಪ್ಪನನ್ನು ನೋಡಿದ್ದ ಸ್ಥಳಕ್ಕೆ ಹೋಗಿ ನಿಲ್ಲೋಣವಾ?

ನಾವೇ ಮನೆಗೆ ಹೋಗಲಿಕ್ಕೆ ಪ್ರಯತ್ನ ಮಾಡೋಣವಾ?

ನಮ್ಮನ್ನು ಮನೆಗೆ ಕರ್ಕೊಂಡು ಹೋಗಿ ಯಾರಿಗಾದರೂ ಅಂತ ಕೇಳೋಣವಾ?

ಪೊಲೀಸಿನವರನ್ನು ಹುಡುಕೋಣವಾ? ಆದರೆ ಈ ಜನಜಂಗುಳಿಯಲ್ಲಿ ಪೊಲೀಸ್‌ನವರನ್ನು ಹ್ಯಾಗೆ ಹುಡುಕೋದು?

**ಅವರಿಗೆ ಇದ್ದಕ್ಕಿದ್ದಂತೆ ಒಂದು ವಿಚಾರ ಹೊಳೆಯಿತು! ಅವರು ಏನು ಮಾಡಿದರು ಅಂತ ನೀವು ಯೋಚಿಸ್ತೀರಿ?**

**ಮಕ್ಕಳು ಒಟ್ಟಿಗೇ ನಿಂತು, ಸಾಧ್ಯವಿದ್ದಷ್ಟು ಜೋರು ಧ್ವನಿ ತೆಗೆದು ಅಳತೊಡಗಿದರು. ಅವರ ಸುತ್ತ ಒಂದಿಷ್ಟು ಜನರು ಸೇರಿದರು, ಏನಾಯಿತು ಎಂದು ಕೇಳತೊಡಗಿದರು. ಯಾರೋ ಒಬ್ಬರು, 'ಪೊಲೀಸಿನವರಿಗೆ ಕರೆಯಿರಿ' ಎಂದು ಹೇಳಿದರು.**

ತಕ್ಷಣವೇ ಒಬ್ಬರು ಪೊಲೀಸಿನವರು ಅಲ್ಲಿಗೆ ಬಂದರು, ಅವರು ಮಕ್ಕಳನ್ನು ತಮ್ಮ ಜೊತೆಗೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು, ಅಲ್ಲಿಂದ ಅವರು ಧ್ವನಿವರ್ಧಕದಲ್ಲಿ ಜೋರಾಗಿ ಮಕ್ಕಳ ಹೆಸರುಗಳನ್ನು ಹೇಳಿ, ಪ್ರಕಟಿಸತೊಡಗಿದರು. "ರಾಂಪುರ ಹಳ್ಳಿಯ ರಾಮು, ಸೀತಾ, ಗಣೇಶ್, ದಿನೇಶ್ ಮತ್ತು ಲಕ್ಷ್ಮಿ ನಮ್ಮ ಜೊತೆಗೆ ಇದ್ದಾರೆ. ಮಕ್ಕಳು ಅವರ ಚಿಕ್ಕಪ್ಪನಿಗಾಗಿ ಪೊಲೀಸ್ ಠಾಣೆಯಲ್ಲಿ ಕಾಯ್ತ ಇದ್ದಾರೆ. ಅವರ ಚಿಕ್ಕಪ್ಪ ಎಲ್ಲೇ ಇದ್ದರೂ, ಪೊಲೀಸ್ ಠಾಣೆಗೆ ಬರಬೇಕು'

ಜಾತ್ರೆಯಲ್ಲಿ ಮಕ್ಕಳನ್ನು ಹುಡುಕುತ್ತಿದ್ದ ಅವರ ಚಿಕ್ಕಪ್ಪ ಈ ಪ್ರಕಟಣೆಯನ್ನು ಕೇಳಿ, ಪೊಲೀಸ್ ಠಾಣೆಗೆ ಓಡೋಡಿ ಬಂದರು. ಅವರು ಅಲ್ಲಿಂದ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋದರು.

# ಜಾತ್ರೆಯಲ್ಲಿ ಕಳೆದುಹೋದ ಮಕ್ಕಳು



## ಸೂಚನೆಗಳು

**ಹಂತ 1:** ಕಥೆಯ ಪರಿಚಯ: ಮಕ್ಕಳೊಂದಿಗೆ ವಿಷಯದ ಕುರಿತು ಮತ್ತು ಅದನ್ನು ಅವರ ಬದುಕಿನ ಅನುಭವಗಳಿಗೆ ಸಂಬಂಧಿಸಿ ಚರ್ಚಿಸುವುದು. (ಅವರು ಯಾವುದಾದರೂ ಜಾತ್ರೆಗೆ ಹೋಗಿದ್ದರೇ – ಜಾತ್ರೆಯಲ್ಲಿ ಅಥವಾ ಮಾರುಕಟ್ಟೆಯಲ್ಲಿ ಕಳೆದು ಹೋದ ಮಕ್ಕಳ ಕುರಿತು ಅವರಿಗೆ ಗೊತ್ತೆ ಎಂದು ಕೇಳುವುದು. ಮುಖಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಚರ್ಚೆ ಮಾಡುವುದು) ಅವರದೇ ಮಾತುಗಳಲ್ಲಿ ಕಥೆಯನ್ನು ಹೇಳುವುದು.

**ಹಂತ 2:** ಯಾವುದೇ ಅಡೆತಡೆಯಿಲ್ಲದೇ ಮಕ್ಕಳು ಪೂರ್ಣ ಕಥೆಯನ್ನು ಕೇಳಿಸಿಕೊಳ್ಳುವಂತೆ ಓದುವುದು.

**ಹಂತ 3:** ಕಥೆಯನ್ನು ಓದುತ್ತ, ಮುಖ್ಯ ಪಾತ್ರಗಳು ಹಾಗೂ ಘಟನೆಗಳನ್ನು, ಮುಖ್ಯವಾದ ಪದಗಳನ್ನು ವಿವರಿಸುತ್ತ ಜೊತೆಗೆ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು. ಪ್ರತಿಧ್ವನಿ ಪ್ರಶ್ನೆಗಳ ಕೆಲವು ಉದಾಹರಣೆಗಳನ್ನು ಇಲ್ಲಿ ಕೆಳಗೆ ನೀಡಲಾಗಿದೆ:

- ಗೆಳೆಯರಾದ ರಾಮು, ಸೀತಾ, ಗಣೇಶ್, ದಿನೇಶ್ ಮತ್ತು ಲಕ್ಷ್ಮಿ, ಅವರ ಚಿಕ್ಕಪ್ಪನೊಂದಿಗೆ ದಸರಾ ಜಾತ್ರೆಗೆ ಹೋದರು. – ಗೆಳೆಯರು ಎಲ್ಲಿಗೆ ಹೋದರು? ಅವರ ಜೊತೆಗೆ ಯಾರಿದ್ದರು?
- ಇದ್ದಕ್ಕಿದ್ದಂತೆ ಸುತ್ತಲೂ ನೋಡಿದ ರಾಮುವಿಗೆ ಆ ಜನಜಂಗುಳಿಯಲ್ಲಿ ತಮ್ಮ ಚಿಕ್ಕಪ್ಪನನ್ನು ಎಲ್ಲೋ ಕಳೆದುಕೊಂಡಿದ್ದೇವೆ ಎಂಬುದು ಅರಿವಾಯಿತು. – ಮಕ್ಕಳಿಗೆ ಏನು ಅರಿವಾಯಿತು?
- ನಾವೇ ಮನೆಗೆ ಹೋಗಲಿಕ್ಕೆ ಪ್ರಯತ್ನ ಮಾಡೋಣವಾ? – ಏನು ಸಲಹೆ ಕೊಟ್ಟರು?

**ಹಂತ 4:** ಕಥೆಯ ಕೊನೆಯಲ್ಲಿ, ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು.

- ಮಕ್ಕಳು ಎಲ್ಲಿಗೆ ಹೋದರು? ಅವರಿಗೆ ಏನಾಯಿತು?
- ಮಕ್ಕಳು ಅನುಸರಿಸದೇ ಹೋದ ಎರಡು ಸಲಹೆಗಳನ್ನು ನೀವು ನೆನಪಿಸಿಕೊಳ್ಳುತ್ತೀರಾ?
- ಮಕ್ಕಳು ಏನು ಮಾಡಿದರು?
- ಪೊಲೀಸ್ ಏನು ಮಾಡಿದರು?

**ಹಂತ 5:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು

- ತಾವು ಕಳೆದುಹೋಗಿದ್ದೇವೆ ಎಂದು ಅರಿವಾದಾಗ ಮಕ್ಕಳಿಗೆ ಏನು ಅನ್ನಿಸಿರಬಹುದು ಎಂದು ನೀವು ಯೋಚಿಸುತ್ತೀರಿ?
- ಮಕ್ಕಳನ್ನು ಕಾಣದೇ ಇದ್ದಾಗ ಅವರ ಚಿಕ್ಕಪ್ಪನಿಗೆ ಏನು ಅನ್ನಿಸಿರಬಹುದು ಎಂದು ನೀವು ಯೋಚಿಸುತ್ತೀರಿ?

**ಹಂತ 6:** ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಪೊಲೀಸಿನವರನ್ನು ಹುಡುಕುವುದು ಏಕೆ ಕಷ್ಟವಾಯಿತು?
- ಮಕ್ಕಳು ಮಾಡಿದ್ದು ಒಳ್ಳೆ ವಿಚಾರ ಎಂದು ನೀವು ಭಾವಿಸುವಿರಾ? ಏಕೆ?
- ಆ ಪ್ರಕಟಣೆಯು ತನಗೇ ಎಂದು ಅರ್ಥಮಾಡಿಕೊಳ್ಳಲು ಯಾವ ಮಾಹಿತಿಯು ಚಿಕ್ಕಪ್ಪನಿಗೆ ಸಹಾಯವಾಯಿತು?

**ಹಂತ 7:** ಮಕ್ಕಳು ತಮ್ಮದೇ ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಸಹಾಯ ಮಾಡುವುದು.

ಚಟುವಟಿಕೆ 1

## ನಾನು ಮನೆಗೆ ಹೋಗುವ ದಾರಿಯಲ್ಲಿ

1. ಮಕ್ಕಳಿಗೆ ಗೋಡೆಗೆ ಎದುರಾಗಿ ಸಾಲಾಗಿ ಕುಳಿತುಕೊಳ್ಳಲು ಹೇಳುವುದು.
2. ತರಗತಿಕೋಣೆಯಲ್ಲಿ ಮಕ್ಕಳು ಕುಳಿತಿರುವುದಕ್ಕೆ ವಿರುದ್ಧವಾದ ತುದಿಯಲ್ಲಿ ಒಂದು ಸಣ್ಣ ಮನೆಯ ಚಿತ್ರವನ್ನು ಬರೆಯುವುದು. ಇದು ಅವರ ಮನೆ ಎಂದು ಮಕ್ಕಳಿಗೆ ವಿವರಿಸುವುದು.
3. ಎರಡು ಗೋಡೆಗಳ ನಡುವಣ ಜಾಗದಲ್ಲಿ (ಅಂದರೆ ಮಕ್ಕಳು ಕುಳಿತಿರುವ ಒಂದು ಗೋಡೆ ಮತ್ತು ಮನೆಯ ಚಿತ್ರವನ್ನು ಬಿಡಿಸಿರುವ ಎದುರಿನ ಗೋಡೆ) 15 ಸೆಂ.ಮೀ. ತ್ರಿಜ್ಯದ ವೃತ್ತಗಳನ್ನು ಬಿಡಿಸುವುದು. ಈ ವೃತ್ತಗಳು ಒಂದಕ್ಕೊಂದು ಮುಟ್ಟಬಾರದು, ಮಕ್ಕಳು ಒಂದು ವೃತ್ತದಿಂದ ಇನ್ನೊಂದಕ್ಕೆ ಜಿಗಿಯುವ ಹಾಗೆ ಇರಬೇಕು.
4. ಈ ವೃತ್ತಗಳನ್ನು ಉದ್ಯಾನ, ಮಾರುಕಟ್ಟೆ, ಬಸ್‌ಸ್ಟ್ಯಾಂಡ್, ಬಾವಿ, ಕೈಪಂಪು, ಅಂಗಡಿ, ಆಟೋ ಸ್ಟ್ಯಾಂಡ್, ಪಂಚಾಯಿತಿ ಕಚೇರಿ, ಹೀಗೆ ಆಯಾ ಊರಿನಲ್ಲಿ/ಬಡಾವಣೆಗಳಲ್ಲಿ ಇರುವ ಮುಖ್ಯ ಜಾಗಗಳಿಂದ ಹೆಸರಿಸುವುದು. ಎಷ್ಟಾದರೂ ವೃತ್ತಗಳನ್ನು ಎಳೆಯಬಹುದು, ಆಮೇಲೆ ನೀವು ಸರಿಪಡಿಸಬಹುದು.
5. ಮಕ್ಕಳು ಅವರ ಮನೆಗೆ ಹೋಗಲು ಈ ವೃತ್ತಗಳನ್ನು ಜಿಗಿಯುತ್ತ ಸಾಗಬೇಕು ಎಂದು ಹೇಳುವುದು. ಅವರು ಆಯಾ ವೃತ್ತದೊಳಗೆ ಜಿಗಿಯುತ್ತಿದ್ದಂತೆ, ಅಲ್ಲಿ ಜನರು ಸಾಮಾನ್ಯವಾಗಿ ಏನು ಮಾಡುತ್ತಾರೆ ಎಂಬುದನ್ನು ಹೇಳುವಂತೆ ತಿಳಿಸುವುದು. ಉದಾ: ಉದ್ಯಾನ ಎಂದು ಗುರುತಿಸಿದ ವೃತ್ತದೊಳಗೆ ಜಿಗಿದಾಗ, ಜನರು ಉದ್ಯಾನದಲ್ಲಿ ಏನು ಮಾಡುತ್ತಾರೆ ಎಂದು ಹೇಳಬೇಕು.
6. ಅವರು ಮನೆ ಮುಟ್ಟಿದಾಗ, ತಮ್ಮ ಮನೆಯಲ್ಲಿ ಮಾಡುವ ಏನಾದರೂ ಒಂದು ಚಟುವಟಿಕೆಯನ್ನು ಹೇಳಬೇಕು.
7. ಈ ಚಟುವಟಿಕೆ ಮಾಡಲು ಮೊದಲು, ನೀವು ಒಮ್ಮೆ ಮಾಡಿ ತೋರಿಸುವುದು.
8. ಎಲ್ಲ ಮಕ್ಕಳಿಗೂ ಅವಕಾಶವನ್ನು ಕೊಡುವುದು ಮತ್ತು ಪ್ರತಿ ಮಗುವಿಗೂ ವೃತ್ತದಲ್ಲಿ ನಿಂತಾಗ ಅವರು ಗಮನಿಸಿದ ಬೇರೆ ಬೇರೆ ಸಂಗತಿ/ಕ್ರಿಯೆಯನ್ನು ಯೋಚಿಸಲು ಪ್ರೋತ್ಸಾಹಿಸುವುದು. ಮಕ್ಕಳ ಉತ್ತರಗಳು ಪುನರಾವರ್ತನೆಯಾಗುತ್ತಿದ್ದರೆ, ಮಕ್ಕಳಿಗೆ ಇನ್ನಷ್ಟು ಆಲೋಚಿಸಿ, ಹೊಸ ವಿಚಾರಗಳನ್ನು ಹೇಳುವಂತೆ ಪ್ರೇರೇಪಿಸುವುದು.

ಚಟುವಟಿಕೆ 2

## ಮುಖ್ಯ ಜಾಗ/ಸ್ಥಳ ಗುರುತುಗಳು ಮತ್ತು ಸಂಸ್ಥೆಗಳು

1. ಮಕ್ಕಳನ್ನು ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ನಿಲ್ಲಿಸುವುದು.
2. ಕೋಣೆಯ ನಾಲ್ಕು ಮೂಲೆಗಳನ್ನು ಹೀಗೆ ಹೆಸರಿಸುವುದು – ಎ) ಆಸ್ಪತ್ರೆ ಬಿ) ಶಾಲೆ ಸಿ) ದೇವಾಲಯ ಡಿ) ಅಂಚೆ ಕಚೇರಿ.
3. ಎಲ್ಲಾ ಮಕ್ಕಳು ಕೋಣೆಯ ಮಧ್ಯದಲ್ಲಿ ಸೇರುವುದು. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ಹತ್ತರಿಂದ ಹಿಮ್ಮುಖವಾಗಿ ಎಣಿಸುತ್ತ, ಸೊನ್ನೆಯವರೆಗೆ ಎಣಿಸುವುದು. ಮಕ್ಕಳು ಈ ಅವಧಿಯಲ್ಲಿ ಯಾವುದಾದರೂ ಮೂಲೆಯನ್ನು ಆಯ್ಕೆ ಮಾಡಿಕೊಂಡು, ಅಲ್ಲಿಗೆ ಓಡಿ ಹೋಗಿ ನಿಲ್ಲಬೇಕು.
4. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಯಾವುದಾದರೂ ಒಂದು ಮೂಲೆಯ ಹೆಸರು ಹಿಡಿದು ಕರೆಯುವುದು. ಆ ಮೂಲೆಯಲ್ಲಿ ನಿಂತಿರುವ ಪ್ರತಿಯೊಂದು ಮಗುವೂ, ಆ ಹೆಸರಿನ ಸಂಸ್ಥೆಯಲ್ಲಿ ಜನರು ಸಾಮಾನ್ಯವಾಗಿ ಮಾಡುವುದನ್ನು ನೋಡಿದ್ದನ್ನು ಮಾಡಿ ತೋರಿಸಬೇಕು. (ಅನಾರೋಗ್ಯದಲ್ಲಿರುವ ಜನರು, ಪೂಜೆ ಮಾಡುವವರು, ವಿದ್ಯಾರ್ಥಿಗಳು, ಅಂಚೆ ಕಚೇರಿಯಲ್ಲಿರುವ ಜನರು, ಹೀಗೆ)
5. ಒಂದೊಂದು ಮಗುವು ಹೀಗೆ ಮಾಡುವುದನ್ನು ಮುಗಿಸಿದ ನಂತರ, ಅವರು ಕುಳಿತುಕೊಳ್ಳಬೇಕು ಮತ್ತು ಉಳಿದ ಮಕ್ಕಳು ಮಾಡಬೇಕು, ಹೀಗೆ ಎಲ್ಲ ಮಕ್ಕಳು ಅಭಿನಯಿಸಿ ತೋರಿಸುವುದನ್ನು ಪೂರ್ಣಗೊಳಿಸುವವರೆಗೆ ಚಟುವಟಿಕೆಯನ್ನು ಮುಂದುವರೆಸುವುದು.
6. ಕೊನೆಯಲ್ಲಿ ನಾಲ್ಕು ಮಕ್ಕಳು ಉಳಿದಿದ್ದಾಗ, ಅವರು ಯಾವುದೇ ಮೂಲೆಯಲ್ಲಿ ನಿಂತಿದ್ದರೂ, ನಂತರ ನಾಲ್ಕೂ ಮಕ್ಕಳು ಒಂದೊಂದು ಮೂಲೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ತಿಳಿಸುವುದು.

ಚಟುವಟಿಕೆ 3

## ಅಡೆತಡೆಯ ನಡುವೆ ಓಟ

1. ಮಕ್ಕಳನ್ನು ನಾಲ್ಕು ತಂಡಗಳನ್ನಾಗಿ ಮಾಡಿ, ಒಂದೊಂದು ತಂಡವನ್ನು ಕೋಣೆಯ ಒಂದೊಂದು ಮೂಲೆಯಲ್ಲಿ ನಿಲ್ಲಿಸುವುದು.
2. ಒಂದು ಮೂಲೆಯಿಂದ ಇನ್ನೊಂದು ಮೂಲೆಯ ನಡುವೆ ನೆಲದ ಮೇಲೆ ಹಲವಾರು ಸಣ್ಣ ವಸ್ತುಗಳನ್ನು ಇಡುವುದು.
3. ನೀವು ಸೀಟಿ/ವಿಶಲ್ ಊದಿದೊಡನೆ ತಂಡದ ನಾಯಕ ಆಟಗಾರ ಮೊದಲು ಪ್ರತಿಯೊಂದು ಅಡೆತಡೆಯಾಗಿರುವ ವಸ್ತುಗಳ ಮೇಲೆ ಜಿಗಿದು, ವಿರುದ್ಧ ಮೂಲೆಯನ್ನು ಮುಟ್ಟಬೇಕು.
4. ಅಡೆತಡೆ ವಸ್ತುಗಳ ಮೇಲೆ ಹೆಜ್ಜೆ ಇಟ್ಟ ಅಥವಾ ಅವುಗಳನ್ನು ದಾಟಿಕೊಂಡು ಓಡುವ ಮಕ್ಕಳು ಮತ್ತೆ ಹೊಸದಾಗಿ ಶುರು ಮಾಡುವುದು.
5. ವಿರುದ್ಧ ಮೂಲೆಯನ್ನು ಮೊದಲು ಮುಟ್ಟುವ ಮಗುವಿನ ತಂಡಕ್ಕೆ ಒಂದು ಪಾಯಿಂಟ್ ನೀಡುವುದು.
6. ಎಲ್ಲ ಮಕ್ಕಳಿಗೂ ಒಂದು ಅವಕಾಶ ದೊರೆಯುವವರೆಗೆ ಆಟವನ್ನು ಮುಂದುವರೆಸುವುದು.

ಚಟುವಟಿಕೆ 1

## ಬಣ್ಣದ ತಂಡಗಳು

1. ಮಕ್ಕಳನ್ನು 5 ತಂಡಗಳನ್ನಾಗಿ ಮಾಡುವದು – ಕೆಂಪು, ನೀಲಿ, ಹಸಿರು, ಹಳದಿ ಮತ್ತು ಕಪ್ಪು.
2. ಮಕ್ಕಳಿಗೆ ಮೈದಾನದಲ್ಲಿ ಅವರಿಗಿಷ್ಟ ಬಂದಂತೆ ಓಡಲು ತಿಳಿಸುವುದು.
3. ನೀವು ಒಂದು ಬಣ್ಣವನ್ನು ಕರೆದಾಗ, ಆ ಬಣ್ಣದ ತಂಡದಲ್ಲಿರುವ ಎಲ್ಲ ಮಕ್ಕಳು ಅಲ್ಲಾಡದೇ ನಿಲ್ಲಬೇಕು ಮತ್ತು ಉಳಿದವರು ಹಾಗೆಯೇ ಓಡುತ್ತಿರಬೇಕು.
4. ಬೇರೆ ಬಣ್ಣದ ಮಕ್ಕಳು ಅಲ್ಲಾಡದೇ ನಿಂತರೆ ಅಥವಾ ನೀವು ಹೇಳಿದ ಬಣ್ಣದ ತಂಡದ ಮಕ್ಕಳು ಓಡುತ್ತಲೇ ಇದ್ದರೆ, ಅವರು ಆಟದಿಂದ ಔಟ್ ಆಗುತ್ತಾರೆ.
5. ಮಕ್ಕಳು ಓಡುತ್ತಿರುವಂತೆ ಸೂಚನೆಗಳನ್ನು ಬೇಗಬೇಗನೆ ನೀಡುವುದು.
6. ಕೆಲವೇ ಮಕ್ಕಳು ಔಟ್ ಆಗದೇ ಉಳಿಯುವವರೆಗೂ ಆಟವನ್ನು ಮುಂದುವರೆಸುವುದು.

ಚಟುವಟಿಕೆ 2

## ನಾನು ಹೇಳಿದಂತೆ ಮಾಡಿ

1. ಮಕ್ಕಳಿಗೆ ನಿಮ್ಮ ಸೂಚನೆಗಳನ್ನು ಗಮನವಿಟ್ಟು ಆಲಿಸಲು ಹೇಳುವುದು ಮತ್ತು ನೀವು ಹೇಳಿದಂತೆ ಮಾಡಲು ತಿಳಿಸುವುದು.
2. ಮೊದಲಿಗೆ 5 ಸೂಚನೆಗಳನ್ನು ಆಯ್ಕೆ ಮಾಡಿಕೊಂಡು, ಅವುಗಳನ್ನು ನಿಮಗಿಷ್ಟ ಬಂದ ಕ್ರಮದಲ್ಲಿ ಜೋರಾಗಿ ಹೇಳುವುದು.
3. 2–3 ಸುತ್ತುಗಳು ಆದ ನಂತರ, ಎರಡೇ ಸೂಚನೆಗಳನ್ನು ಹೇಳುವುದು (ಎದ್ದು ನಿಲ್ಲಿ/ಸ್ಟಾಂಡ್ ಅಪ್ ಮತ್ತು ಕೂತುಕೊಳ್ಳಿ/ಸಿಟ್ ಡೌನ್) ಮತ್ತು ಸೂಚನೆಗಳ ವೇಗವನ್ನು ಹೆಚ್ಚಿಸುತ್ತ ಹೋಗುವುದು.
4. ಆಮೇಲೆ ತಟ್ಟನೆ ಮೂರನೇ ಸೂಚನೆಗೆ ಬದಲಾಯಿಸುವುದು. ಈ ಹೊಸ ಸೂಚನೆಯನ್ನು ಪಾಲಿಸಲು ಸಾಧ್ಯವಾಗದ ಮಕ್ಕಳು ಆಟದಿಂದ ಔಟ್ ಆಗುವರು.
5. ಕೆಲವೇ ಮಕ್ಕಳು ಉಳಿಯುವವರೆಗೂ ಆಟವನ್ನು ಮುಂದುವರೆಸುವುದು.

ಚಟುವಟಿಕೆ 3

## ಬಣ್ಣದ ಸೂಚನೆಯನ್ನು ಪಾಲಿಸಿ

1. ಈ ಆಟದಲ್ಲಿ 3 ಬಣ್ಣಗಳು ಬೇರೆ ಬೇರೆ ಸೂಚನೆಗಳನ್ನು ಸೂಚಿಸುತ್ತವೆ, ಆ ಬಣ್ಣವು ಸೂಚಿಸುವ ಆಜ್ಞೆಯನ್ನು ಪಾಲಿಸುವುದನ್ನು ಆಟವು ಒಳಗೊಂಡಿರುತ್ತದೆ ಎಂದು ಮಕ್ಕಳಿಗೆ ತಿಳಿಸುವುದು.
2. ಕೆಂಪು ಎಂದರೆ ನಿಲ್ಲುವುದು, ಹಸಿರು ಎಂದರೆ ಜೋರಾಗಿ ಓಡುವುದು ಮತ್ತು ಹಳದಿ ಎಂದರೆ ನಿಧಾನವಾಗಿ ಓಡುವುದು ಎಂದು ತಿಳಿಸುವುದು.
3. ಬಣ್ಣಗಳನ್ನು ಯಾವುದಾದರೂ ಕ್ರಮದಲ್ಲಿ ಕರೆಯುತ್ತಿರಿ ಮತ್ತು ಮಕ್ಕಳಿಗೆ ಬಣ್ಣಕ್ಕೆ ಅನುಗುಣವಾಗಿ ಅವರ ಕ್ರಿಯೆಯನ್ನು ಬದಲಿಸಲು ಸೂಚನೆಗಳನ್ನು ವೇಗವಾಗಿ ನಿಡುವುದು.
4. ಬಣ್ಣದ ಸೂಚನೆಯನ್ನು ಪಾಲಿಸಲು ವಿಫಲರಾದ ಮಕ್ಕಳು ಆಟದಿಂದ ಔಟ್ ಆಗುತ್ತಾರೆ.

# ನನ್ನ ನೆರೆಹೊರೆ

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು





## ನನ್ನ ನೆರೆಹೊರೆ ಮತ್ತು ನನ್ನ ಊರು

# ನಮಗೆ ಸಹಾಯ ಮಾಡುವ ಜನರು





# ಕಲಿಕಾ ಫಲಿತಗಳು

## ಉಪವಿಷಯ 2.2: ನಮಗೆ ಸಹಾಯ ಮಾಡುವ ಜನರು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಅವರ ಊರು/ಪಟ್ಟಣದಲ್ಲಿರುವ ವಿವಿಧ ಬಗೆಯ ವೃತ್ತಿಗಳನ್ನು ಅರಿಯುವುದು. | 1 ಊರಿನಲ್ಲಿರುವ ಪ್ರಮುಖ ವೃತ್ತಿಗಳನ್ನು ಗುರುತಿಸುವರು (ಮೇಸ್ತ್ರಿ, ಬಡಗಿ/ ಮರಗೆಲಸದವರು, ಅಂಗಡಿಯವರು/ ತರಕಾರಿ ಮಾರುವವರು/ ಮಾರಾಟಗಾರರು/ ರೈತ/ ಚಮ್ಮಾರರು/ ದರ್ಜಿ/ ಪೂಜಾರಿಗಳು) ಮತ್ತು ಅವರು ಮಾಡುವ ಕೆಲಸ, ಕೆಲಸದ ಸ್ಥಳ ಹಾಗೂ ಅವರು ಬಳಸುವ ಸಾಧನಗಳನ್ನು ಗುರುತಿಸುವುದು. | 1 ಮಕ್ಕಳು ತಾವು ನೋಡಿಲ್ಲದ/ತಮಗೆ ಲಭ್ಯತೆಯಿಲ್ಲದ ವಿಶೇಷ ವೃತ್ತಿಗಳನ್ನು ಗುರುತಿಸುವರು – ಸಾರಿಗೆ (ವಿಮಾನ ಪೈಲಟ್‌ಗಳು, ಟ್ಯಾಕ್ಸಿ ಚಾಲಕರು), ಸೈನಿಕರು (3 ಸಶಸ್ತ್ರ ಪಡೆಗಳು, ಅಗ್ನಿಶಾಮಕ ದಳದವರು), ಚಿಕಿತ್ಸಕರು (ದಂತವೈದ್ಯರು, ಪಶುವೈದ್ಯರು), ಕ್ರೀಡಾವ್ಯಕ್ತಿಗಳು (ಕ್ರಿಕೆಟ್, ಫುಟ್‌ಬಾಲ್ ಆಟಗಾರರು, ಬ್ಯಾಡ್ಮಿಂಟನ್ ಮತ್ತು ಕುಸ್ತಿ ಪಟುಗಳು), ಮನೋರಂಜನಾ ವ್ಯಕ್ತಿಗಳು (ಸಿನಿಮಾ ತಾರೆಯರು, ಸರ್ಕಸ್) ಮತ್ತು ಅವರ ಕೆಲಸದ ಲಕ್ಷಣ, ಅವರ ಕೆಲಸದ ಸ್ಥಳವನ್ನು ಮತ್ತು ವೃತ್ತಿಯಲ್ಲಿ ಬಳಸುವ ಸಲಕರಣೆಗಳನ್ನು ವಿವರಿಸುವುದು. |
| 2 ನಿತ್ಯ ಜೀವನದಲ್ಲಿ ಕಾಣುವ ಕೆಲವು ವೃತ್ತಿಗಳಾದ ರೈತ, ಮಾರಾಟಗಾರರು, ಅಂಗಡಿಯವರು, ಪೊಲೀಸರು, ದರ್ಜಿ/ಟೈಲರ್, ಕ್ಷೌರಿಕ, ಅಂಗನವಾಡಿ ಕಾರ್ಯಕರ್ತೆ ಮತ್ತು ಶಿಕ್ಷಕರು, ಇಂತಹ ವೃತ್ತಿಗಳನ್ನು ಹೆಸರಿಸುವುದು. | 2 ಪ್ರಧಾನ ಸೇವೆ ಒದಗಿಸುವವರನ್ನು ಗುರುತಿಸುವರು (ಶಿಕ್ಷಕ, ವೈದ್ಯ, ಆಯಾ/ದಾದಿ, ಅಂಚೆಯವರು, ಪೊಲೀಸರು, ಬಸ್ ಚಾಲಕರು ಹಾಗೂ ನಿರ್ವಾಹಕರು) ಮತ್ತು ಅವರು ಮಾಡುವ ಕೆಲಸ, ಅವರ ಕೆಲಸದ ಸ್ಥಳ ಮತ್ತು ಅವರು ಬಳಸುವ ಸಲಕರಣೆಗಳನ್ನು ಗುರುತಿಸುವುದು. | 2 ಅವರು ಮಾಡುವ ಕೆಲಸ, ಬಳಸುವ ಸಲಕರಣೆಗಳು ಮತ್ತು ಸಂಬಂಧಿತ ಸಂಸ್ಥೆಗಳ ವಿವರಗಳು ಸೇರಿದಂತೆ, ಪ್ರತಿಯೊಂದು ವೃತ್ತಿಯನ್ನು ಎರಡು ವಾಕ್ಯಗಳಲ್ಲಿ ವಿವರಿಸುವುದು. |
| 3 ಅವರ ಕೆಲಸದ ಲಕ್ಷಣ, ಸ್ಥಳ ಮತ್ತು ನಮ್ಮ ಬದುಕಿಗೆ ಅವರ ಕೊಡುಗೆಗಳನ್ನು ವಿವರಿಸುವುದು. | 3 ಕೆಲಸಗಳನ್ನು ಪೂರ್ಣಗೊಳಿಸಲು ಜಂಟಿ ಪ್ರಯತ್ನ ಅಥವಾ ಎಲ್ಲರ ಪ್ರಯತ್ನಗಳು ಅಗತ್ಯವಿದೆ ಎಂಬುದನ್ನು ಅರಿಯುವುದು. | 3 ಸಾಮಾನ್ಯವಾಗಿ ಹೆಚ್ಚು ಕಾಣಿಸದ, ಜಾತ್ರೆಗಳಲ್ಲಿ ಕಾಣುವಂತಹ ಕೆಲಸಗಾರರ ಕುರಿತು ತಿಳಿಯುವುದು (ಬಲೂನು, ಬಳೆಗಳನ್ನು ಮಾರುವವರು, ಜ್ಯೋತಿಷ್ಯ ಹೇಳುವವರು/ಕಣಿ ಹೇಳುವವರು, ಐಸ್‌ಕ್ರೀಮ್ ಮಾರುವವರು ಇತ್ಯಾದಿ) |
| 4 ತಮ್ಮ ಅಗತ್ಯತೆಗಳನ್ನು ಈಡೇರಿಸಲು ಸರಿಯಾದ ವ್ಯಕ್ತಿಯಾರೆಂದು ಅರಿಯುವುದು | | 4 ಎಲ್ಲರ ಕೆಲಸ ಮತ್ತು ನಮ್ಮ ಬದುಕಿಗೆ ಅವರ ಕೊಡುಗೆಗಳನ್ನು ಅರಿತು, ಮೆಚ್ಚಿಕೊಳ್ಳುವುದು. |

ಉಪವಿಷಯ 2.2

## ನಮಗೆ ಸಹಾಯ ಮಾಡುವ ಜನರು



### ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ:

- ಊರಿನಲ್ಲಿರುವ ಪ್ರಮುಖ ವೃತ್ತಿಗಳನ್ನು ಗುರುತಿಸುವರು (ಮೇಸ್ತ್ರಿ, ಬಡಗಿ/ ಮರಗೆಲಸದವರು, ಅಂಗಡಿಯವರು/ ತರಕಾರಿ ಮಾರುವವರು/ ಮಾರಾಟಗಾರರು/ ರೈತ/ ಚಮ್ಮಾರರು/ ದರ್ಜಿ/ ಪೂಜಾರಿಗಳು) ಮತ್ತು ಅವರು ಮಾಡುವ ಕೆಲಸ, ಕೆಲಸದ ಸ್ಥಳ ಹಾಗೂ ಅವರು ಬಳಸುವ ಸಾಧನಗಳನ್ನು ಗುರುತಿಸುವುದು.
- ಪ್ರಧಾನ ಸೇವೆ ಒದಗಿಸುವವರನ್ನು ಗುರುತಿಸುವರು (ಶಿಕ್ಷಕ, ವೈದ್ಯ, ಆಯಾ/ದಾದಿ, ಅಂಚೆಯವರು, ಪೊಲೀಸರು, ಬಸ್ ಚಾಲಕರು ಹಾಗೂ ನಿರ್ವಾಹಕರು) ಮತ್ತು ಅವರು ಮಾಡುವ ಕೆಲಸ, ಅವರ ಕೆಲಸದ ಸ್ಥಳ ಮತ್ತು ಅವರು ಬಳಸುವ ಸಲಕರಣೆಗಳನ್ನು ಗುರುತಿಸುವುದು.
- ಕೆಲಸಗಳನ್ನು ಪೂರ್ಣಗೊಳಿಸಲು ಜಂಟಿ ಪ್ರಯತ್ನ ಅಥವಾ ಎಲ್ಲರ ಪ್ರಯತ್ನಗಳು ಅಗತ್ಯವಿದೆ ಎಂಬುದನ್ನು ಅರಿಯುವುದು.

ಸಂಭಾಷಣೆ 1

# ಸಾಮಾನ್ಯ ವೃತ್ತಿಗಳು



## ಕಲಿಕಾ ಫಲಿತಗಳು

ಅವರ ಊರಿನಲ್ಲಿರುವ ಪ್ರಮುಖ ಸಾಂಸ್ಥಿಕ ಮುಖ್ಯ ಜಾಗಗಳು/ಸ್ಥಳ ಗುರುತುಗಳನ್ನು ಗುರುತಿಸಿ, ವಿವರಿಸಲು ಸಮರ್ಥರಾಗುವುದು

## ಕಲಿಕಾ ಸಾಮಗ್ರಿಗಳು

**P2.2.1** ಜನರು ಅವರ ಸಲಕರಣೆಗಳೊಂದಿಗೆ ಕೆಲಸ ಮಾಡುತ್ತಿರುವುದನ್ನು ತೋರಿಸುತ್ತಿರುವ ಪೋಸ್ಟರ್

**F2.2.1** ಮಿಂಚುಪಟ್ಟಿಗಳು – ಎ) ಸಾರಿಗೆ, ಬಿ) ಆಟಗಳು, ಸಿ) ಮನೋರಂಜನೆ

## ಶಿಕ್ಷಕರ ಪೂರ್ವಸಿದ್ಧತೆ

ಪೋಸ್ಟರನ್ನು ನಿಮ್ಮ ಬಳಿ ಇಟ್ಟುಕೊಂಡು, ಸಂಭಾಷಣೆಯನ್ನು ಯೋಜಿಸಿಕೊಳ್ಳುವುದು.

## ಸೂಚನೆಗಳು

### ಹಂತ 1: ಕೆಲಸದ ವಿಷಯದ ಕುರಿತು ಪರಿಚಯಿಸುವುದು

- ಮಕ್ಕಳಿಗೆ ಅವರ ಪೋಷಕರು ಮಾಡುತ್ತಿರುವ ಕೆಲಸದ ಕುರಿತು, ಅವರು ಎಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ವಿವರಿಸುವಂತೆ ಕೇಳುವುದು. ಮಕ್ಕಳಿಗೆ ಪೋಷಕರ ಕೆಲಸದ ಕುರಿತು ಗೊತ್ತಿರಬಹುದು ಅಥವಾ ಗೊತ್ತಿಲ್ಲದಿರಬಹುದು, ಕೆಲಸಕ್ಕೆ ಅವರು ಮನೆಯಿಂದ ಹೊರಗೆ ಹೋಗುತ್ತಾರೆಯೇ ಅಥವಾ ಮನೆಯಲ್ಲಿಯೇ ಕೆಲಸ ಮಾಡುತ್ತಾರೆಯೇ? ಯಾವ ಸಲಕರಣೆಗಳನ್ನು ತೆಗೆದುಕೊಂಡು ಹೋಗುತ್ತಾರೆ? ಕೆಲವು ವೃತ್ತಿಗಳನ್ನು ಮತ್ತು ಅವರು ಬಳಸುವ ಸಲಕರಣೆಗಳನ್ನು ಹೆಸರಿಸುತ್ತ ಸಾರಾಂಶೀಕರಿಸುವುದು.

### ಹಂತ 1: ಇನ್ನೂ ಹೆಚ್ಚು ವೃತ್ತಿಗಳನ್ನು ಪರಿಚಯಿಸುವುದು

- **CF2.2.2** ಚಿತ್ರಗಳ ಚಾರ್ಟ್‌ಅನ್ನು ಬಳಸಿಕೊಂಡು, ಊರಿನಲ್ಲಿ ತಮ್ಮ ಕೆಲಸವನ್ನು ಅಥವಾ ವೃತ್ತಿಯನ್ನು ಮಾಡುತ್ತಿರುವ ಜನರನ್ನು ತೋರಿಸುತ್ತಾ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು. ಉದಾ:– 'ನಿನ್ನೆ ನಾವು ಮಾತನಾಡಿದ ಕೆಲವು ಕೆಲಸಗಳು ಯಾವುವು? ನೀವು ಈ ಚಾರ್ಟಿನಲ್ಲಿ ಅವನ್ನು ತೋರಿಸುವಿರಾ?' ವೃತ್ತಾಕಾರದಲ್ಲಿ ಕುಳಿತಿರುವ ಮಕ್ಕಳ ನಡುವೆ ಓಡಾಡುತ್ತ, ಒಂದೊಂದು ಮಗುವಿಗೆ ಒಂದೊಂದು ವೃತ್ತಿಯನ್ನು ತೋರಿಸುತ್ತ ಕೇಳುವುದು. ಪ್ರತಿಸಲವೂ ಮಗು ಉತ್ತರಿಸಿದಾಗ, 'ನಿಂಗೆ ಯಾಕೆ ಹಾಗೆ ಅನ್ನಿಸುತ್ತೆ?' ಎಂದು ಕೇಳುವುದು ಮತ್ತು ಅವರಿಗೆ ಆಲೋಚಿಸಲು ಸಮಯ ಕೊಡುವುದು.
- ಅಗತ್ಯವಿದ್ದರೆ ಕೆಲವು ಸುಳಿವುಗಳನ್ನು ಕೊಡುವುದು. 'ಇವರೇನು ಮಾಡುತ್ತಿದ್ದಾರೆ?', 'ಇವರು ಏನು ಉಪಯೋಗಿಸುತ್ತಿದ್ದಾರೆ?' ಎಂದು ಕೇಳುವುದು. ಬೇರೆ ಮಕ್ಕಳಿಗೆ 'ಇವನು/ಇವಳು ಹೇಳುತ್ತಿರುವುದು ಸರಿಯಿದೆಯಾ?" ನೀನು ಏಕೆ ಹಾಗೆ ಯೋಚಿಸುತ್ತೀಯ?' ಎಂದು ಬೇರೆ ಮಕ್ಕಳನ್ನು ಕೇಳುವುದು. ಎಲ್ಲ ಮಕ್ಕಳು ಒಬ್ಬೊಬ್ಬರಾಗಿ ವೃತ್ತಿಗಳನ್ನು ಗುರುತಿಸುವ ತಮ್ಮ ಸರದಿಯನ್ನು ಮುಗಿಸಿದ ನಂತರ, ಇನ್ನೂ ಕೆಲವು ಉಳಿದಿದ್ದರೆ, ಅವನ್ನು ತೋರಿಸಿ, ಕೇಳುವುದು.
- ಈಗ ಪ್ರತಿಯೊಂದೂ ವೃತ್ತಿಯನ್ನು ತೆಗೆದುಕೊಂಡು, ಅದರಲ್ಲಿ ತೊಡಗಿರುವವರು ಬಳಸುವ ಸಲಕರಣೆಗಳ ಕುರಿತು ಚರ್ಚಿಸುವುದು. ರೈತರು, ಬಡಗಿ, ಚಮ್ಮಾರ, ಕ್ಷೌರಿಕ, ಮೇಸ್ತ್ರಿ, ಅಂಗಡಿಯಾತ, ಮಾರಾಟಗಾರರು, ದರ್ಜಿ/ಟೈಲರ್, ಇವರ ಕುರಿತು ಚರ್ಚಿಸುವುದು. ಈ ವೃತ್ತಿಗಳಲ್ಲಿರುವ ವ್ಯಕ್ತಿಗಳು ನಮಗಾಗಿ ಏನು ಮಾಡುತ್ತಾರೆ, ಯಾವ ಸಲಕರಣೆಗಳನ್ನು ಬಳಸುತ್ತಾರೆ ಮತ್ತು ಎಲ್ಲಿ ಕೆಲಸ ಮಾಡುತ್ತಾರೆ ಎಂದು ಮಕ್ಕಳನ್ನು ಕೇಳುವುದು. ಅವರಿಗೆ ಸಲಕರಣೆಗಳನ್ನು ಗಮನಿಸಿ, ಪ್ರತಿಯೊಂದು ಸಲಕರಣೆಯೂ ಏನು ಕೆಲಸ ಮಾಡುತ್ತದೆ ಎಂಬುದನ್ನು ಗಮನಿಸಲು ಸಮಯವನ್ನು ಕೊಡುವುದು. (ಉದಾ: ಮರಗೆಲಸದವರು/ಬಡಗಿಗಳು ಮರದ ಹಲಗೆಯನ್ನು ಕತ್ತರಿಸಲು ಗರಗಸ ಬಳಸುತ್ತಾರೆ. ಅಂಗಡಿಯವರು ಒಂದೇ ಸ್ಥಳದಲ್ಲಿ ಇದ್ದರೆ ತಳ್ಳುಗಾಡಿಯ ಮಾರಾಟಗಾರರು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಾವು ಮಾರಾಟ ಮಾಡಲು ತಳ್ಳುಗಾಡಿಯನ್ನು ತೆಗೆದುಕೊಂಡು ಹೋಗುತ್ತಾರೆ ಎಂದು ವಿವರಿಸುವುದು. ಒಂದು ದಿನಕ್ಕೆ ಮೂರಕ್ಕಿಂತ ಹೆಚ್ಚು ವೃತ್ತಿಗಳ ಕುರಿತು ಚರ್ಚಿಸಬೇಡಿ.

## ಸಂಭಾಷಣೆ 2

## ಸಾಮಾನ್ಯ ಸೇವೆ ಒದಗಿಸುವವರು



### ಕಲಿಕಾ ಫಲಿತಗಳು

ಸಾಮಾನ್ಯ ಸೇವೆ ಒದಗಿಸುವವರು ಮತ್ತು ಅವರ ಸಲಕರಣೆಗಳನ್ನು ಗುರುತಿಸಲು ಸಮರ್ಥರಾಗುವುದು.










### ಕಲಿಕಾ ಸಾಮಗ್ರಿಗಳು

**P2.2.1** ಜನರು ಅವರ ಸಲಕರಣೆಗಳೊಂದಿಗೆ ಕೆಲಸ ಮಾಡುತ್ತಿರುವುದನ್ನು ತೋರಿಸುತ್ತಿರುವ ಪೋಸ್ಟರ್.

**F2.2.2** ಮಿಂಚುಪಟ್ಟಿಗಳು ಎ) ಪೊಲೀಸ್, ಅಗ್ನಿಶಾಮಕ ದಳದವರು, ಸಶಸ್ತ್ರ ಪಡೆಗಳವರು; ಬಿ) ವೈದ್ಯ, ದಾದಿ/ಆಯಾ, ಪಶುವೈದ್ಯ, ದಂತವೈದ್ಯ; ಸಿ) ಅಂಗನವಾಡಿ ಕಾರ್ಯಕರ್ತೆ, ಶಿಕ್ಷಕರು, ಕೋಚ್


**F2.2.3** ಮಿಂಚುಪಟ್ಟಿ ಸರಣಿಗಳು 1–14. 1) ಬ್ಯಾಂಡೇಜು ಹಾಕಿಕೊಂಡಿರುವ ಹುಡುಗ; 2) ಕೈಯಲ್ಲಿ ಹರಿದಿರುವ ಚಪ್ಪಲಿ ಹಿಡಿದಿರುವ ಹುಡುಗ; 3) ಶಾಲೆಯ ಚೀಲ ಅಥವಾ ಪಾಟಿ ಚೀಲ ಹಿಡಿದ ಹುಡುಗಿ; 4) ಬಳೆಗಳನ್ನು ಹಿಡಿದು ಮನೆಗೆ ಹೋಗುತ್ತಿರುವ ಹುಡುಗಿ; 5) ಲಗೇಜ್ / ಚೀಲಗಳನ್ನು ಹಿಡಿದಿರುವ ಜನರು; 6) ಕೈಯಲ್ಲಿ ಪತ್ರವೊಂದನ್ನು ಹಿಡಿದಿರುವ ಮಗು; 7) ಮುರಿದ ಕುರ್ಚಿಯನ್ನು ಒಯ್ಯುತ್ತಿರುವ ವ್ಯಕ್ತಿ; 8) ಸರದಿಯಲ್ಲಿ ನಿಂತಿರುವ ಜನರು; 9) ಉದ್ದನೆಯ ಗಡ್ಡ ಬಿಟ್ಟ ವ್ಯಕ್ತಿ; 10) ಕೈಯಲ್ಲಿ ಬಟ್ಟೆಗಳ ಗಂಟು ಹಿಡಿದ ಹೆಂಗಸು; 11) ಹಾಕಿ ಸ್ಟಿಕ್ ಹಿಡಿದು ಹೋಗುತ್ತಿರುವ ಮಕ್ಕಳು. 12) ಮುರಿದ ಕಾಲಿನ ಕುದುರೆ 13) ಬೆಂಕಿ ಬಿದ್ದಿರುವ ಮನೆ 14) ಟ್ರಾಫಿಕ್ ಲೈಟುಗಳು

### ಸೂಚನೆಗಳು

1. ನೀವು ಪ್ರತಿದಿನ ಎಲ್ಲಿಗೆ ಬರುತ್ತೀರಿ ಎಂದು ಮಕ್ಕಳಿಗೆ ಕೇಳುತ್ತ ಶುರು ಮಾಡುವುದು. ಈ ಚಿತ್ರದಲ್ಲಿ ಪ್ರಿಸ್ಕೂಲ್/ಅಂಗನವಾಡಿ ಶಿಕ್ಷಕಿಯನ್ನು ತೋರಿಸುತ್ತಿರಾ? ನಿಮ್ಮ ಶಿಕ್ಷಕಿಯನ್ನು ತೋರಿಸುತ್ತೀರಾ? ಇವರು ಯಾರು? ನಿಮಗೆ ಅವರ ಹೆಸರು ಗೊತ್ತಿದೆಯೇ? ಯಾರಾದರೂ ನಿಮಗೆ ಶಾಲೆಯಲ್ಲಿ ಏನು ಮಾಡುತ್ತೀರ ಎಂದು ಕೇಳುತ್ತಾರೆ ಎಂದುಕೊಳ್ಳಿ. ಆಗ ಅವರಿಗೆ ನೀವು ಏನು ಹೇಳುತ್ತೀರಿ? ಮಕ್ಕಳು ಚಿತ್ರದಲ್ಲಿರುವ ಮಕ್ಕಳ ಗಾತ್ರದತ್ತ ಬೆರಳು ಮಾಡಿ ತೋರಿಸಬಹುದು, ಇಲ್ಲದಿದ್ದರೆ ಪ್ರಿಸ್ಕೂಲ್ ಶಿಕ್ಷಕಿ ತುಂಬ ಚಿಕ್ಕ ಮಕ್ಕಳಿಗೆ ಕಲಿಸುತ್ತಾರೆ, ಶಿಕ್ಷಕ/ಕಿ ದೊಡ್ಡ ಮಕ್ಕಳಿಗೆ ಕಲಿಸುತ್ತಾರೆ ಎಂದು ವಿವರಿಸುವುದು. ಆಟಿಗೆಗಳು, ಕಪ್ಪು ಹಲಗೆ (ಬ್ಲಾಕ್‌ಬೋರ್ಡ್) ಮತ್ತು ಸೀಮೆಸುಣ್ಣ, ಪುಸ್ತಕಗಳತ್ತ ತೋರಿಸಿ, ಇವುಗಳನ್ನು ಯಾವುದಕ್ಕಾಗಿ ಬಳಸುತ್ತಾರೆ ಎಂದು ಗೊತ್ತೆ ಎಂದು ಮಕ್ಕಳನ್ನು ಕೇಳುವುದು. ಎಲ್ಲ ಚಟುವಟಿಕೆಗಳನ್ನು ಮಕ್ಕಳು ಪಟ್ಟಿ ಮಾಡಲು ಪ್ರೋತ್ಸಾಹಿಸಿ, ಸಹಕರಿಸುವುದು.
2. ಬ್ಯಾಂಡೇಜು ಹಾಕಿಕೊಂಡಿರುವ ಹುಡುಗನ ಮಿಂಚುಪಟ್ಟಿಯನ್ನು ಹೊರಗೆ ತೆಗೆದು, ಈ ರೀತಿಯಾಗಿ ಪ್ರಶ್ನೆಗಳನ್ನು ಕೇಳುವುದು – ಆತ ಎಲ್ಲಿಂದ ಬರುತ್ತಿದ್ದಾನೆ ಎಂದು ನೀವು ಯೋಚಿಸುತ್ತೀರಿ? ಅವನು ವೈದ್ಯರ ಹತ್ತಿರ ಹೋಗಿ ಬರುತ್ತಿದ್ದಾನೆ ಅಂತ ಯಾಕೆ ಯೋಚಿಸುತ್ತೀರಿ? ಚಿತ್ರದಲ್ಲಿ ವೈದ್ಯರನ್ನು ನೀವು ಗುರುತಿಸುತ್ತೀರಾ? ನೀವು ಹೇಗೆ ಅವರನ್ನು ಗುರುತಿಸುತ್ತೀರಿ? ವೈದ್ಯರು ಏನು ಹಾಕಿಕೊಳ್ಳುತ್ತಾರೆ? ವೈದ್ಯರು ಅವನಿಗೆ ಏನು ಮಾಡುತ್ತಾರೆ ಎಂದು ನೀವು ಯೋಚಿಸುತ್ತೀರಿ? ಏಕೆ? ವೈದ್ಯರ ಹೊರತಾಗಿ, ಮತ್ತೆ ಯಾರು ನಮ್ಮ ಆರೋಗ್ಯದ ಕುರಿತು ಕಾಳಜಿ ತೆಗೆದುಕೊಳ್ಳುತ್ತಾರೆ? ನೀವು ಅವರನ್ನು ಚಿತ್ರದಲ್ಲಿ ತೋರಿಸುತ್ತೀರಾ? ನಿಮಗೆ ಹೇಗೆ ಗೊತ್ತು? ಅವರು ಏನು ಮಾಡುತ್ತಾರೆ?
3. ಟ್ರಾಫಿಕ್ ಲೈಟುಗಳಿರುವ ಮಿಂಚುಪಟ್ಟಿಯನ್ನು ತೆಗೆದುಕೊಂಡು, ಹೀಗೆ ಪ್ರಶ್ನೆಗಳನ್ನು ಕೇಳುವುದು – 'ಇಲ್ಲಿ ನಿಮಗೆ ಕಾಣುವ ವ್ಯಕ್ತಿ ಯಾರು? ಅವರು ಏನು ಮಾಡುತ್ತಾರೆ? ಪೋಸ್ಟರಿನಲ್ಲಿ ಪೊಲೀಸಿನವರನ್ನು ತೋರಿಸುತ್ತೀರಾ? ನಿಮಗೆ ಹೇಗೆ ಗೊತ್ತು ಅವರು ಪೊಲೀಸ್ ಎಂದು? ಅವರು ಹಾಕಿರುವ ಸಮವಸ್ತ್ರ ಮತ್ತು ದಂಡದತ್ತ ಮಕ್ಕಳ ಗಮನ ಸೆಳೆಯುವುದು. ಪೊಲೀಸರು ಮತ್ತೇನು ಮಾಡುವರು? ನೀವು ಪೊಲೀಸಿನವರ ಬಳಿ ಯಾವಾಗ ಹೋಗಬೇಕು? ಕೈಯಲ್ಲಿ ಪತ್ರವೊಂದನ್ನು ಹಿಡಿದಿರುವ ಮಗುವಿನ ಮಿಂಚುಪಟ್ಟಿಯನ್ನು ತೋರಿಸುತ್ತ, ಹೀಗೆ ಪ್ರಶ್ನೆಗಳನ್ನು ಕೇಳುವುದು – 'ಈ ಮಗು ಎಲ್ಲಿಗೆ ಹೋಗುತ್ತಿದೆ ಎಂದು ನೀವು ಯೋಚಿಸುತ್ತೀರಿ?' ಎಂದು ಕೇಳುವುದು. ಮುಂದುವರೆದು 'ಅವನು ಏನು ಮಾಡಲು ಹೊರಟಿದ್ದಾನೆ? ನಾವು ಪತ್ರಗಳನ್ನು ಪಡೆಯಲು ಎಲ್ಲಾದರೂ ಹೋಗಬೇಕೆ? ಯಾರು ನಮಗೆ ಪತ್ರಗಳನ್ನು ತಂದುಕೊಡುತ್ತಾರೆ? ಚಾರ್ಟ್‌ನಲ್ಲಿ ಅಂಚೆಯವರನ್ನು ನೀವು ತೋರಿಸುವಿರಾ? ನಿಮಗೆ ಹೇಗೆ ಗೊತ್ತು?' ಎಂದು ಕೇಳುವುದು. ಅವರ ಸಮವಸ್ತ್ರ ಮತ್ತು ಚೀಲದತ್ತ ಮಕ್ಕಳ ಗಮನ ಸೆಳೆಯುವುದು.
4. ಸರದಿಯಲ್ಲಿ ನಿಂತಿರುವ ಜನರ ಮಿಂಚುಪಟ್ಟಿಯನ್ನು ತೆಗೆದುಕೊಂಡು, ಹೀಗೆ ಪ್ರಶ್ನೆಗಳನ್ನು ಕೇಳುವುದು – 'ಈ ಜನರು ಏನು ಮಾಡುತ್ತಿದ್ದಾರೆ ಎಂದು ನೀವು ಯೋಚಿಸುವಿರಿ? ಅವರು ಏತಕ್ಕಾಗಿ ಕಾಯುತ್ತಿದ್ದಾರೆ? ಯಾರು ಅವರಿಗೆ ಸಹಾಯ ಮಾಡುತ್ತಾರೆ? ಪೋಸ್ಟರಿನಲ್ಲಿ ತೋರಿಸುತ್ತೀರಾ? ನಿಮಗೆ ಹೇಗೆ ಗೊತ್ತು? ಎಂಬ ಪ್ರಶ್ನೆಗಳನ್ನು ಕೇಳುವುದು. ಸಮವಸ್ತ್ರದತ್ತ ಗಮನ ಸೆಳೆಯುವುದು. ಸಮವಸ್ತ್ರದ ಬಣ್ಣಗಳಲ್ಲಿ ಇರುವ ವ್ಯತ್ಯಾಸವನ್ನು ಚರ್ಚಿಸುವುದು. ಬಿಳಿ, ನೀಲಿ, ಮತ್ತು ಖಾಕಿ ಬಣ್ಣದ ಸಮವಸ್ತ್ರಗಳು, ಇದು ಹೇಗೆ ನಮಗೆ ಜನರನ್ನು ತಿಳಿಯಲು ಸಹಾಯ ಮಾಡುತ್ತವೆ ಎಂದು ವಿವರಿಸುವುದು.

ಸಂಭಾಷಣೆ 3

# ವೃತ್ತಿಗಳು, ಸೇವೆಗಳು ಮತ್ತು ಸಲಕರಣೆಗಳು






## ಕಲಿಕಾ ಫಲಿತಗಳು

ಸಲಕರಣೆಗಳನ್ನು ವೃತ್ತಿಯೊಂದಿಗೆ ಸಂಬಂಧಿಸಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

**F2.2.3** ಮಿಂಚುಪಟ್ಟಿ ಸರಣಿಗಳು. ಅಗತ್ಯವಾದ ಮಿಂಚುಪಟ್ಟಿಗಳು – 1) ಬ್ಯಾಂಡೇಜು ಹಾಕಿಕೊಂಡಿರುವ ಹುಡುಗ; 2) ಕೈಯಲ್ಲಿ ಹರಿದಿರುವ ಚಪ್ಪಲಿ ಹಿಡಿದಿರುವ ಹುಡುಗ; 3) ಶಾಲೆಯ ಚೀಲ ಅಥವಾ ಪಾಟಿ ಚೀಲ ಹಿಡಿದ ಹುಡುಗಿ; 4) ಬಳೆಗಳನ್ನು ಹಿಡಿದು ಮನೆಗೆ ಹೋಗುತ್ತಿರುವ ಹುಡುಗಿ; 5) ಲಗೇಜ್ / ಚೀಲಗಳನ್ನು ಹಿಡಿದಿರುವ ಜನರು; 6) ಕೈಯಲ್ಲಿ ಪತ್ರವೊಂದನ್ನು ಹಿಡಿದಿರುವ ಮಗು; 10) ಕೈಯಲ್ಲಿ ಬಟ್ಟೆಗಳ ಗಂಟು ಹಿಡಿದ ಹೆಂಗಸು;

**CF2.2.4** ಮಿಂಚುಪಟ್ಟಿ ಸರಣಿಗಳು – ಈ ಚಿತ್ರಗಳಲ್ಲಿ ಏನು ತಪ್ಪಾಗಿದೆ? ಎ) ಸ್ಟೆಥೋಸ್ಕೋಪ್ ಹಾಕಿಕೊಂಡಿರುವ ವೈದ್ಯರು ಟ್ರಾಫಿಕ್ ಕಡೆ ಕೈ ತೋರಿಸುತ್ತಿರುವುದು; ಬಿ) ಕಪ್ಪುಗಳಿರುವ ಟ್ರೇ ಹಿಡಿದಿರುವ ಅಂಚೆಯವನು; ಸಿ) ಸಿರಿಂಜ್ ಹಿಡಿದಿರುವ ಪೊಲೀಸಿನವನು; ಡಿ) ಎತ್ತಿನ ಗಾಡಿಯಲ್ಲಿರುವ ಬಸ್ಸಿನ ಚಾಲಕ; ಇ) ದರ್ಜಿಯ ಅಂಗಡಿಯಲ್ಲಿ ಸ್ಟೆಥೋಸ್ಕೋಪ್ ಹಿಡಿದುಕೊಂಡ ದರ್ಜಿ ಎಫ್) ಕನ್ನಡಿಯ ಮುಂದೆ ಇರುವ ಒಬ್ಬ ವ್ಯಕ್ತಿ, ಆತನ ಹಿಂದೆ ಇರುವ ಕ್ಷೌರಿಕ ಕೈಯಲ್ಲಿ ಅಳತೆ ಟೇಪ್ ಹಿಡಿದಿದ್ದಾನೆ; ಜಿ) ಹೊಲಿಗೆ ಯಂತ್ರದ ಜೊತೆಗೆ ಇರುವ ಚಮ್ಮಾರ/ಮೋಚಿ




## ಶಿಕ್ಷಕರ ಪೂರ್ವಸಿದ್ಧತೆ

ಗುಂಪುಗಳ ಹೆಸರುಗಳನ್ನು ಹಾಗೂ ಮಕ್ಕಳು ಕುಳಿತುಕೊಳ್ಳುವ ಸ್ಥಳವನ್ನು ಅಂತಿಮಗೊಳಿಸುವುದು; ಪ್ರತಿಯೊಂದು ಗುಂಪೂ ಒಂದು ಜೊತೆ ಮಿಂಚುಪಟ್ಟಿಗಳ ಜೊತೆಗೆ ಬೇಗ ಬೇಗ ಕೆಲಸ ಮಾಡಲು ಸಾಧ್ಯವಾಗುವಂತೆ ಮಿಂಚುಪಟ್ಟಿಗಳನ್ನು ಸೂಕ್ತವಾದ ಸ್ಥಳದಲ್ಲಿ ಇರಿಸುವುದು.




## ಸೂಚನೆಗಳು

ಒಂದು ಗುಂಪಿನಲ್ಲಿ ಹತ್ತು ಮಕ್ಕಳಿರುವಂತೆ ಒಟ್ಟು ಮಕ್ಕಳನ್ನು 3 ಗುಂಪುಗಳಾಗಿ ಮಾಡುವುದು.

1. **ಮೊದಲನೇ ಗುಂಪು ಸ್ವತಂತ್ರವಾಗಿ ಕೆಲಸ ಮಾಡಬೇಕು ಮತ್ತು ಮಿಂಚು ಪಟ್ಟಿಗಳನ್ನು ನೋಡಿ, ಅದರಲ್ಲಿರುವ ಮಕ್ಕಳು/ಜನರು ಎಲ್ಲಿಗೆ ಹೋಗುತ್ತಿದ್ದಾರೆ ಅಥವಾ ಬರುತ್ತಿದ್ದಾರೆ ಎಂದು ನಿರ್ಧರಿಸುವಂತೆ ತಿಳಿಸುವುದು.**
    - ಬ್ಯಾಂಡೇಜು ಹಾಕಿಕೊಂಡಿರುವ ಹುಡುಗ.
    - ಕೈಯಲ್ಲಿ ಹರಿದಿರುವ ಚಪ್ಪಲಿ ಹಿಡಿದಿರುವ ಹುಡುಗ.
    - ಶಾಲೆಯ ಚೀಲ ಅಥವಾ ಪಾಟಿ ಚೀಲ ಹಿಡಿದ ಹುಡುಗಿ.
    - ಬಳೆಗಳನ್ನು ಹಿಡಿದು ಮನೆಗೆ ಹೋಗುತ್ತಿರುವ ಹುಡುಗಿ.
    - ಲಗೇಜ್/ಚೀಲಗಳನ್ನು ಹಿಡಿದಿರುವ ಜನರು.
    - ಕೈಯಲ್ಲಿ ಪತ್ರವೊಂದನ್ನು ಹಿಡಿದಿರುವ ಮಗು.
    - ಕೈಯಲ್ಲಿ ಬಟ್ಟೆಗಳ ಗಂಟು ಹಿಡಿದ ಹೆಂಗಸು.
    - ಮುರಿದ ಕುರ್ಚಿಯನ್ನು ಒಯ್ಯುತ್ತಿರುವ ವ್ಯಕ್ತಿ.
    - ಉದ್ದನೆಯ ಗಡ್ಡ ಬಿಟ್ಟ ವ್ಯಕ್ತಿ.
    - ಕುಡುಗೋಲು ಅಥವಾ ಕತ್ತಿ ಹಿಡಿದ ರೈತ.



2. **ಎರಡನೇ ಗುಂಪು – ಇಬ್ಬಿಬ್ಬರು ಮಕ್ಕಳು ಜೋಡಿಯಾಗಿ ಕೆಲಸ ಮಾಡಬೇಕು; ಮಕ್ಕಳು 'ಈ ಚಿತ್ರದಲ್ಲಿ ಏನು ತಪ್ಪಾಗಿದೆ' ಎಂದು ಗಮನಿಸಿ, ನೋಡಿ ಹೇಳುವಂತೆ ತಿಳಿಸುವುದು.**
   - ಸ್ವೆಥೋಸ್ಕೋಪ್ ಹಾಕಿಕೊಂಡಿರುವ ವೈದ್ಯರು ಟ್ರಾಫಿಕ್ ಕಡೆ ಕೈ ತೋರಿಸುತ್ತಿರುವುದು.
   - ಕಪ್ಪುಗಳಿರುವ ಟ್ರೇ ಹಿಡಿದಿರುವ ಅಂಚೆಯವನು.
   - ಸಿರಿಂಜ್ ಹಿಡಿದಿರುವ ಪೋಲೀಸಿನವನು.
   - ಎತ್ತಿನ ಗಾಡಿಯಲ್ಲಿರುವ ಬಸ್ಸಿನ ಚಾಲಕ.
   - ದರ್ಜಿಯ ಅಂಗಡಿಯಲ್ಲಿ ಸ್ವೆಥೋಸ್ಕೋಪ್ ಹಿಡಿದುಕೊಂಡ ದರ್ಜಿ.
3. **ಮೂರನೇ ಗುಂಪು – ಈ ಗುಂಪು ಕೂಡ ಇಬ್ಬಿಬ್ಬರು ಮಕ್ಕಳು ಜೋಡಿಯಾಗಿ ಕೆಲಸ ಮಾಡಬೇಕು; ಮಕ್ಕಳು 'ಈ ಚಿತ್ರದಲ್ಲಿ ಏನು ತಪ್ಪಾಗಿದೆ' ಎಂದು ಗಮನಿಸಿ, ನೋಡಿ, ಹೇಳುವಂತೆ ತಿಳಿಸುವುದು.**
   - ಬಡಗಿಯ ಅಂಗಡಿಯಲ್ಲಿ ಕುಡುಗೋಲು ಹಿಡಿದುಕೊಂಡಿರುವ ಬಡಗಿ.
   - ಕನ್ನಡಿಯ ಮುಂದೆ ಇರುವ ಒಬ್ಬ ವ್ಯಕ್ತಿ, ಆತನ ಹಿಂದೆ ಇರುವ ಕ್ಷೌರಿಕ ಕೈಯಲ್ಲಿ ಅಳತೆ ಟೇಪ್ ಹಿಡಿದಿದ್ದಾನೆ.
   - ಹೊಲಿಗೆ ಯಂತ್ರದ ಜೊತೆಗೆ ಇರುವ ಚಮ್ಮಾರ/ಮೋಚಿ.
   - ತರಗತಿಕೋಣೆಯ ಮುಂದೆ ನಿಂತಿರುವ ಸುತ್ತಿಗೆ ಹಿಡಿದುಕೊಂಡ ಶಿಕ್ಷಕ.
   - ಹೊಲದಲ್ಲಿ ಬೆಳೆಯ ಪಕ್ಕ, ಕೈಯಲ್ಲಿ ದಂಡ ಮತ್ತು ಸೀಟಿ(ವಿಶಲ್) ಹಿಡಿದು ನಿಂತಿರುವ ರೈತ.


ಮೂರೂ ಗುಂಪುಗಳ ನಡುವೆ ಓಡಾಡುತ್ತ, ಮಕ್ಕಳಿಗೆ ಅವರ ಉತ್ತರಕ್ಕೆ ಸರಿಯಾದ ವಿವರಣೆ ಕೊಡುವಂತೆ ಒತ್ತಿ ಹೇಳುವುದು ಮತ್ತು ಎರಡು ಹಾಗೂ ಮೂರನೇ ಗುಂಪಿನಲ್ಲಿ, ಚಿತ್ರದಲ್ಲಿ ತಪ್ಪಾಗಿರುವುದನ್ನು ಹೇಳಿದ ನಂತರ, ಸರಿಯಾದ ಉತ್ತರ ಏನಿರಬೇಕು ಎಂಬುದನ್ನು ವಿವರಣೆಯ ಜೊತೆಗೆ ಕೇಳುವುದು.


ಒಂದೊಂದು ಗುಂಪಿನ ಮಕ್ಕಳು ಈ ಚಟುವಟಿಕೆಯನ್ನು ಮುಗಿಸಿದ ನಂತರ, ಅವರು ತಮ್ಮ ಜಾಗಗಳನ್ನು ಅದಲು ಬದಲು ಮಾಡಿಕೊಂಡು, ಚಟುವಟಿಕೆಯನ್ನು ಮುಂದುವರೆಸುವುದು.












# ವೃತ್ತಿ ಮತ್ತು ಸಲಕರಣೆಗಳು

## ಕಲಿಕಾ ಫಲಿತಗಳು

ವೃತ್ತಿಗಳನ್ನು ಮತ್ತು ಸಲಕರಣೆಗಳನ್ನು ಅರ್ಥ ಮಾಡಿಕೊಳ್ಳುವುದು.

## ಕಲಿಕಾ ಸಾಮಗ್ರಿಗಳು

ಪೋಷಕರ ಸಹಾಯ

## ಸೂಚನೆಗಳು

**ಚಟುವಟಿಕೆ 1**

ಯಾರಾದರೂ ಒಬ್ಬರು ಪೋಷಕರೊಂದಿಗೆ ಮಾತನಾಡಿ, ಅವರು ತರಗತಿಗೆ ಬಂದು, ಅವರ ವೃತ್ತಿಯಲ್ಲಿ ಬಳಸುವ ಸಲಕರಣೆಗಳನ್ನು ತೋರಿಸಿ, ಅವುಗಳನ್ನು ಹೇಗೆ ತಮ್ಮ ಕೆಲಸದಲ್ಲಿ ಬಳಸುತ್ತೇವೆ ಎಂಬುದನ್ನು ತೋರಿಸಿಕೊಡುವಂತೆ ಹೇಳುವುದು.

**ಚಟುವಟಿಕೆ 2**

1. ಬೇರೆ ಬೇರೆ ವೃತ್ತಿಗಳಲ್ಲಿ ಕೆಲಸ ಮಾಡುವ ಪೋಷಕರು ಇರುವ ಕೆಲವು ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವುದು (ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ವೃತ್ತಿಯನ್ನು ಲಿಂಗಾಧಾರಿತ ರೂಢಮಾದರಿ (ಸ್ಟೀರಿಯೋಟೈಪ್) ಆಗುವುದನ್ನು ತಪ್ಪಿಸಬೇಕು, ಉದಾ: ಚಾಲಕರು ಎಂದರೆ ಕೇವಲ ಗಂಡಸರು, ರೈತ ಎಂದರೆ ಕೇವಲ ಗಂಡಸರು ಇತ್ಯಾದಿ. ಯಾರು ಯಾವ ಕೆಲಸವನ್ನಾದರೂ (ಅಥವಾ ಹೆಚ್ಚಿನ ಕೆಲಸಗಳನ್ನು) ಮಾಡಬಲ್ಲರು ಎಂದು ಮಕ್ಕಳು ಅರ್ಥಮಾಡಿಕೊಳ್ಳುವಂತೆ ನೀವು ಆಯ್ಕೆ ಮಾಡಿಕೊಳ್ಳುವುದು.
2. ಈ ಮಕ್ಕಳ ಪೋಷಕರೊಂದಿಗೆ ಮಾತನಾಡಿ, ಅವರ ಕೆಲಸದಲ್ಲಿ ಬಳಸುವ ಒಂದು ಸಲಕರಣೆಯನ್ನು ಮಕ್ಕಳು ಶಾಲೆಗೆ ತಂದು, ತರಗತಿಯಲ್ಲಿ ಪ್ರಸ್ತುತ ಪಡಿಸಲು ಸಹಾಯ ಮಾಡಿ ಎಂದು ಪೊಷಕರಿಗೆ ಕೇಳುವುದು.
3. ಮಕ್ಕಳು ಸಲಕರಣೆಯನ್ನು ಶಾಲೆಗೆ ತೆಗೆದುಕೊಂಡು ಬಂದು ಆ ಸಲಕರಣೆಯನ್ನು ಅವರ ಪೋಷಕರ ಕೆಲಸದಲ್ಲಿ ಹೇಗೆ ಬಳಸುತ್ತಾರೆ ಎಂಬ ಕುರಿತು ಮಾತನಾಡುವಂತೆ ಪ್ರೇರೇಪಿಸುವುದು.

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು **"ಡಾಕ್ಟರ್"** ಶಿಶುಗೀತೆಯನ್ನು ಸರಿಯಾದ ಉಚ್ಚಾರಣೆ, ಹಾವಭಾವ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವರು.

### ಕಲಿಕಾ ಸಾಮಗ್ರಿಗಳು

ಕೈಪಿಡಿಯಲ್ಲಿ ಕೊಟ್ಟಿರುವ ಶಿಶುಗೀತೆಯನ್ನು ಬಳಸಿಕೊಳ್ಳುವುದು

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದರ ಜೊತೆಗೆ ಮಾಡಬೇಕಿರುವ ಅಭಿನಯ, ಹಾವಭಾವದ ಕುರಿತು ತಿಳಿದುಕೊಳ್ಳುವುದು.

### ಸೂಚನೆಗಳು


1. **"ಡಾಕ್ಟರ್"** ಶಿಶುಗೀತೆಯನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿ ಇದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಪೂರ್ಣವಾಗಿ ಲಯಬದ್ಧವಾದ ಅಭಿನಯದೊಂದಿಗೆ ಧ್ವನಿಯ ಏರಿಳಿತದೊಂದಿಗೆ ಹೇಳುವುದು ಮತ್ತು ಮಕ್ಕಳು ಆಲಿಸುವುದು.
3. ನೀವು ಹೇಳಿದ ನಂತರ ಪ್ರತಿಯೊಂದೂ ಸಾಲನ್ನು ಮಕ್ಕಳಿಗೆ ಪುನರಾವರ್ತನೆ ಮಾಡಲು ಹೇಳಿ, ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಶಿಶುಗೀತೆಯ ಜೊತೆಗೆ ಮಾಡುವ ಅಭಿನಯವನ್ನು ತೋರಿಸಿ, ನಿಮ್ಮನ್ನು ಅನುಕರಿಸಲು ಮಕ್ಕಳಿಗೆ ಹೇಳುವುದು.
5. ಮಕ್ಕಳಿಗೆ ಗುಂಪುಗಳಲ್ಲಿ ಅಥವಾ ಒಬ್ಬೊಬ್ಬರಾಗಿ ಅವರೇ ಹಾಡಲು ಪ್ರೋತ್ಸಾಹಿಸುವುದು.

ಶಿಶುಗೀತೆ 1

**ಡಾಕ್ಟರ್**

# ಡಾಕ್ಟರ್

ನಾನು ಡಾಕ್ಟರ್ ಆಗುವೆ
ಬಿಳಿಯ ಕೋಟು ಧರಿಸುವೆ
ಶಾಲೆಗೆ ನಾನು ಹೋಗುವೆ
ಮಕ್ಕಳ ತಪಾಸಣೆ ಮಾಡುವೆ
ನಾನು ಡಾಕ್ಟರ್ ಆಗುವೆ
ಸ್ವಚ್ಛತೆ ಬಗ್ಗೆ ಹೇಳುವೆ
ಮಕ್ಕಳ ಸೇವೆ ಮಾಡುವೆ
ನಾನು ಡಾಕ್ಟರ್ ಆಗುವೆ
ಬಿಳಿಯ ಕೋಟು ಧರಿಸುವೆ



ಶಿಶುಗೀತೆ ೭

## WHAT DO YOU DO?

# WHAT DO YOU DO?



Farmer Farmer, what do you do?

**I grow food for all of you**



Tailor Tailor, what do you do?

**I stitch clothes for all of you**



Barber Barber, what do you do?

**I cut hair for all of you**



Cobbler Cobbler, what do you do

**I mend shoes for all of you**

## ಮಂಜುಳಾಳ ಮನೆಯನ್ನು ಹೊಸದಾಗಿ ಕಟ್ಟಿದರು



### ಕಲಿಕಾ ಫಲಿತಗಳು


ಮಕ್ಕಳು **'ಮಂಜುಳಾಳ ಮನೆಯನ್ನು ಹೊಸದಾಗಿ ಕಟ್ಟಿದರು'** ಕಥೆಯನ್ನು ಅರ್ಥ ಮಾಡಿಕೊಳ್ಳುವರು ಮತ್ತು ನೆನಪಿಸಿಕೊಳ್ಳುವರು ಹಾಗೂ ಏಕೆ? ಏನು? ಹೇಗೆ? ಮತ್ತು ಯಾವಾಗ? ಕುರಿತು ಸರಳ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು.

### ಕಲಿಕಾ ಸಾಮಗ್ರಿಗಳು

ಕಥೆಯ ಕಾರ್ಡುಗಳು

### ಶಿಕ್ಷಕರ ಪೂರ್ವಸಿದ್ಧತೆ

ಕಥೆಯ ಕಾರ್ಡುಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು




### ಕಥೆ

**ಮಂಜುಳಾಳ ಮನೆಯನ್ನು ಹೊಸದಾಗಿ ಕಟ್ಟಿದರು**

ಮಂಜುಳಾಳ ಮನೆಯ ಪಕ್ಕದಲ್ಲಿ ದೊಡ್ಡ ಹುಲ್ಲಿನ ಬಣವೆ ಇತ್ತು. ಬೇಸಿಗೆಯ ಒಂದು ದಿನ, ತುಂಬಾ ಒಣಗಿದ್ದ ಹುಲ್ಲಿಗೆ ಬೆಂಕಿ ಬಿದ್ದಿತು. ಬೆಂಕಿಯು ಬೇಗನೆ ಹಬ್ಬುತ್ತ, ಪಕ್ಕದಲ್ಲೇ ಇದ್ದ ಮಂಜುಳಾಳ ಮನೆಗೂ ಹಬ್ಬಿತು. ಮನೆಯವರೆಲ್ಲ ಹೊರಗೆ ಕೆಲಸಕ್ಕೆ ಹೋಗಿದ್ದರು ಮತ್ತು ಮಂಜುಳಾ ಶಾಲೆಯಲ್ಲಿದ್ದಳು. ಮನೆ ಪೂರ್ಣ ಸುಟ್ಟು ಹೋಯಿತು, ಅಕ್ಕಪಕ್ಕದವರು ಬಂದು ನೋಡಿ, ಏನಾದರೂ ಮಾಡಿ ಮನೆಯನ್ನು ಉಳಿಸೋಣ ಎಂದುಕೊಳ್ಳುವಷ್ಟರಲ್ಲಿ ಉರಿದು ಬೂದಿಯಾಯಿತು.

ಈಗ ಮನೆಯನ್ನು ಹೊಸದಾಗಿ ಕಟ್ಟಬೇಕು. ಊರಿನವರೆಲ್ಲರೂ ಸಹಾಯ ಮಾಡಲು ಬಂದರು.

ಮೇಸ್ತ್ರಿ ಅಣ್ಣ ತನ್ನ ಕುರುಪಿಯೊಂದಿಗೆ ಬಂದು, ಇಟ್ಟಿಗೆಗಳನ್ನು ಜೋಡಿಸಿ, ಗೋಡೆಯನ್ನು ಕಟ್ಟಿಕೊಟ್ಟರು. ಬಡಗಿ ಅಜ್ಜ ತಮ್ಮ ಗರಗಸ, ಸುತ್ತಿಗೆ ತೆಗೆದುಕೊಂಡು ಬಂದು, ಬಾಗಿಲುಗಳು ಮತ್ತು ಕಿಟಿಕಿಗಳನ್ನು ಮಾಡಿಕೊಟ್ಟರು. ದರ್ಜಿ ಅಕ್ಕಾ ಬಾಗಿಲಿಗೆ ತುಂಬ ಚಂದದ ಪರದೆಯನ್ನು ಹೊಲೆದುಕೊಟ್ಟಳು. ವಿದ್ಯುಚ್ಛಕ್ತಿ ಕೆಲಸಗಾರ ಚಿಕ್ಕಪ್ಪ/ ಇಲೆಕ್ಟ್ರಿಶಿಯನ್ ಚಿಕ್ಕಪ್ಪ ವೈರುಗಳನ್ನು ತಂದು, ದೀಪಗಳನ್ನು ಹಾಕಿಕೊಟ್ಟರು.

ರೈತ ಅಜ್ಜ ತಮ್ಮ ಹೊಲದಿಂದ ಸೋಗೆ ಹುಲ್ಲನ್ನು ತಂದು, ಮಂಜುಳಾಳ ಮನೆಯ ಚಾವಣಿಗೆ ಹೊದೆಸಿದರು.

ಹೀಗೆ ಎಲ್ಲರೂ ಸಹಾಯ ಮಾಡಿ, ಮಂಜುಳಾಳ ಮನೆಯನ್ನು 15 ದಿನದಲ್ಲಿಯೇ ಪುನಃ ಕಟ್ಟಿದರು. ಈಗ ಮಂಜುಳಾ ತನ್ನ ಮನೆಯವರೊಂದಿಗೆ ಹೊಸ ಮನೆಯಲ್ಲಿ ವಾಸವಿದ್ದಾಳೆ.

# ಮಂಜುಳಾಳ ಮನೆಯನ್ನು ಹೊಸದಾಗಿ ಕಟ್ಟಿದರು



## ಸೂಚನೆಗಳು

**ಹಂತ 1:** ಕಥೆಯ ಪರಿಚಯ: ಮಕ್ಕಳೊಂದಿಗೆ ವಿಷಯದ ಕುರಿತು, ಅವರ ಬದುಕಿನ ಅನುಭವಗಳಿಗೆ ಸಂಬಂಧಿಸಿದಂತೆ ಚರ್ಚಿಸುವುದು. ನೀವು ಮನೆ ಕಟ್ಟುವುದನ್ನು ನೋಡಿದ್ದೀರಾ? ಮನೆಯನ್ನು ಯಾರು ಕಟ್ಟುತ್ತಾರೆ? ಮನೆ ಕಟ್ಟುವುದರಲ್ಲಿ ಸಹಾಯ ಮಾಡುವ ಜನರು ಯಾರು? ಒಬ್ಬರೇ ವ್ಯಕ್ತಿ ಒಂದು ಮನೆಯನ್ನು ಕಟ್ಟುವುದು ಸಾಧ್ಯವೇ? ಕಥೆಯ ಮುಖಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಚರ್ಚೆ ಮಾಡುವುದು ಇದಾದ ನಂತರ ಕಥೆಯನ್ನು ಅವರದೇ ಮಾತುಗಳಲ್ಲಿ ಹೇಳುವುದು.

**ಹಂತ 2:** ಕಥೆಯನ್ನು ಒಮ್ಮೆ ಪೂರ್ಣ ಓದುವುದು, ಯಾವುದೇ ಅಡೆತಡೆಯಿಲ್ಲದೇ ಮಕ್ಕಳು ಪೂರ್ಣ ಕಥೆಯನ್ನು ಕೇಳಿಸಿಕೊಳ್ಳುವಂತೆ ಓದುವುದು.

**ಹಂತ 3:** ಕಥೆಯನ್ನು ಓದುತ್ತ, ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು, ಕೀಲಿ ಪದಗಳನ್ನು ವಿವರಿಸುವುದರ ಜೊತೆಗೆ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು. ಪ್ರತಿಧ್ವನಿ ಪ್ರಶ್ನೆಗಳ ಕೆಲವು ಉದಾಹರಣೆಗಳನ್ನು ಇಲ್ಲಿ ಕೆಳಗೆ ನೀಡಲಾಗಿದೆ:

- ಬೇಸಿಗೆಯ ಒಂದು ದಿನ, ತುಂಬಾ ಒಣಗಿದ್ದ ಹುಲ್ಲಿಗೆ ಬೆಂಕಿ ಹೊತ್ತಿಕೊಂಡಿತು. – ಬೇಸಿಗೆಯ ದಿನ ಯಾವುದಕ್ಕೆ ಬೆಂಕಿ ಹೊತ್ತಿಕೊಂಡಿತು?
- ಮನೆ ಪೂರ್ಣ ಸುಟ್ಟು ಹೋಯಿತು, ಅಕ್ಕಪಕ್ಕದವರು ಬಂದು ನೋಡಿ, ಏನಾದರೂ ಮಾಡಿ ಮನೆಯನ್ನು ಉಳಿಸೋಣ ಎಂದುಕೊಳ್ಳುವಷ್ಟರಲ್ಲಿ ಉರಿದು ಬೂದಿಯಾಯಿತು. – ಮನೆಗೆ ಏನು ಆಯಿತು?
- ಮೇಸ್ತ್ರಿ ಅಣ್ಣ ತನ್ನ ಕುರುಪಿಯೊಂದಿಗೆ ಬಂದು, ಇಟ್ಟಿಗೆಗಳನ್ನು ಜೋಡಿಸಿ, ಗೋಡೆಯನ್ನು ಕಟ್ಟಿಕೊಟ್ಟರು. – ಮೇಸ್ತ್ರಿ ಅಣ್ಣ ಏನು ಕಟ್ಟಿಕೊಟ್ಟರು? ಅವರು ಏನು ಉಪಯೋಗಿಸಿದರು?

**ಹಂತ 4:** ಕಥೆಯ ಕೊನೆಯಲ್ಲಿ, ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳಿಗೆ ಕೆಲವು ಉದಾಹರಣೆಗಳು:

- ಮಂಜುಳಾಳ ಮನೆಗೆ ಹೇಗೆ ಬೆಂಕಿ ಹೊತ್ತಿಕೊಂಡಿತು?
- ಯಾರು ಗೋಡೆಗಳನ್ನು ಕಟ್ಟಲು ಸಹಾಯ ಮಾಡಿದರು?
- ಬಾಗಿಲುಗಳು ಮತ್ತು ಕಿಟಕಿಗಳನ್ನು ಯಾರು ಮಾಡಿಕೊಟ್ಟರು? ಅವರು ಯಾವ ಸಲಕರಣೆ ಬಳಸಿದರು?

**ಹಂತ 5:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

- ಮಂಜುಳಾ ಮತ್ತು ಅವಳ ಮನೆಯವರ ಕುರಿತು ಹಳ್ಳಿಯ ಜನರು ದುಃಖಪಟ್ಟರು ಎಂದು ನೀವು ಯೋಚಿಸುತ್ತೀರಾ?
- ಮಂಜುಳಾಗೆ ಅವಳ ಹೊಸ ಮನೆಯನ್ನು ನೋಡಿದಾಗ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?

**ಹಂತ 6:** ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಮನೆಯು ಏಕೆ ಸುಟ್ಟುಹೋಯಿತು? ಮನೆಯಲ್ಲಿ ಜನರು ಇದ್ದಿದ್ದರೆ ಏನಾಗುತ್ತಿತ್ತು?
- ಮಂಜುಳಾಳ ಹೊಸ ಮನೆಯಲ್ಲಿ ರಾತ್ರಿ ಕತ್ತಲು ಇತ್ತೆ? ನೀವು ಏಕೆ ಹಾಗೆ ಯೋಚಿಸುತ್ತೀರಿ?
- ಮಂಜುಳಾಳ ಹೊಸ ಮನೆಯನ್ನು ಯಾವುದರಿಂದ ಕಟ್ಟಿದರು? ಗೋಡೆಗಳನ್ನು ಕಟ್ಟಲು ಯಾರು ಸಹಾಯ ಮಾಡಿದರು?

**ಹಂತ 7:** ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಸಹಾಯ ಮಾಡುವುದು.

ಚಟುವಟಿಕೆ 1

## ಮಂಜುಳಾಳ ಮನೆಗೆ ಬಣ್ಣ ಹಚ್ಚುವುದು

### ಕಲಿಕಾ ಸಾಮಗ್ರಿಗಳು

ಕಾಗದ, ಪೆನ್ಸಿಲ್‌ಗಳು ಮತ್ತು ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಮಂಜುಳಾಳ ಹೊಸ ಮನೆಯ ಚಿತ್ರ ಬರೆದು, ಅದಕ್ಕೆ ಅವರಿಗೆ ಇಷ್ಟವಾದ 3 ಬಣ್ಣಗಳನ್ನು ಮಾತ್ರ ಬಳಸಿಕೊಂಡು ಮನೆಗೆ ಬಣ್ಣ ತುಂಬಬೇಕು ಎಂದು ಮಕ್ಕಳಿಗೆ ತಿಳಿಸುವುದು.
2. ಮಕ್ಕಳು ಮನೆಯ ಚಿತ್ರ ಬಿಡಿಸುತ್ತಿದ್ದಂತೆ, ಅವರಿಗೆ ಮನೆಯ ಭಾಗಗಳನ್ನು ವಿವರಿಸಲು – ಅವಕಾಶ ಕಲ್ಪಿಸುತ್ತ, ಅವರೊಂದಿಗೆ ಚರ್ಚಿಸುವುದು.
3. 2 ಬೇರೆ ಬೇರೆ ಚಿತ್ರಗಳನ್ನು ತೆಗೆದುಕೊಂಡು, ಮಕ್ಕಳಿಗೆ ಅವರು ಬಳಸಿದ ಬಣ್ಣಗಳನ್ನು ಮತ್ತು ಅವರು ಬಿಡಿಸಿರುವ ಮನೆಯ ಭಾಗಗಳನ್ನು ಹೋಲಿಕೆ ಮಾಡಲು ಅವಕಾಶ ಕೊಡುವುದು.

ಚಟುವಟಿಕೆ 2

## ಬಾಹ್ಯರೇಖೆಗಳನ್ನು ಚಿತ್ರಿಸಿ, ಬಣ್ಣ ತುಂಬುವುದು

### ಕಲಿಕಾ ಸಾಮಗ್ರಿಗಳು


ತರಗತಿಕೋಣೆಯಲ್ಲಿರುವ ಯಾವುದೇ ಆಟಿಗೆ ವಸ್ತು (ಬ್ಲಾಕ್‌ಗಳು, ಕೋಲಾಟದ ಕೋಲುಗಳು, ಲೋಟಗಳು, ತಟ್ಟೆಗಳು, ಪಜಲ್ ತುಣುಕುಗಳು ಇತ್ಯಾದಿ). ಕಾಗದ, ಪೆನ್ಸಿಲ್‌ಗಳು ಮತ್ತು ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಮಕ್ಕಳಿಗೆ ತರಗತಿಕೋಣೆಯಲ್ಲಿರುವ ಯಾವುದಾದರೂ ವಸ್ತುವನ್ನು ತೆಗೆದುಕೊಂಡು, ಕಾಗದದ ಮೇಲಿಟ್ಟು, ಅದರ ಬಾಹ್ಯರೇಖೆಗಳನ್ನು ಚಿತ್ರಿಸಿ, ಅದಕ್ಕೆ ಬಣ್ಣ ತುಂಬಲು ಹೇಳುವುದು.
2. ಮಗುವಿನ ಹೆಸರನ್ನು ಬರೆದು, ಮಗು ಚಿತ್ರ ಬರೆದಿರುವ ಹಾಳೆಯನ್ನು ಬೋರ್ಡಿನ ಮೇಲೆ ಒಂದು ವಾರದವರೆಗೆ ನೇತುಹಾಕುವುದು ಅಥವಾ ಪಿನ್ ಮಾಡುವುದು.
3. ವಾರದ ಕೊನೆಯಲ್ಲಿ ಅದನ್ನು ಮಗುವಿನ ಕಡತದಲ್ಲಿ ಇಡುವುದು.

ಚಟುವಟಿಕೆ 3

## ಮೆಹಂದಿ ಚಿತ್ರಿಸುವುದು



### ಕಲಿಕಾ ಸಾಮಗ್ರಿಗಳು

ಜಲವರ್ಣಗಳು (ವಾಟರ್ ಕಲರ್ಸ್), ಕುಂಚಗಳು ಅಥವಾ ಸಣ್ಣ ಕಡ್ಡಿಗಳು (ಕಸಬರಿಗೆ ಕಡ್ಡಿಗಳು), ಚೂಪಾದ ತುದಿಯ ಕಾಗದದ ಕೋನ್ (ಇಲಸ್ಟ್ರೇಟರ್‌ಗೆ ಸೂಚನೆ – ಇದನ್ನು ಇಲಸ್ಟ್ರೇಟ್ ಮಾಡಬೇಕು); ಬಣ್ಣ ಇಲ್ಲದೇ ಇರುವ ಬಾಲ್‌ಪೆನ್ ರಿಫಿಲ್. ಕಾಗದ.

### ಸೂಚನೆಗಳು

1. ಮಕ್ಕಳಿಗೆ ಕಾಗದದ ಮೇಲೆ ಅವರ ಅಂಗೈನ ಬಾಹ್ಯ ರೇಖೆಯನ್ನು ಚಿತ್ರಿಸುವಂತೆ ಹೇಳುವುದು.
2. ಪ್ರತೀ ಮಗುವಿಗೂ ಒಂದು ಕುಂಚ/ ಕಡ್ಡಿ /ಚೂಪಾದ ಕೋನ್ / ರಿಫಿಲ್ ಕೊಡುವುದು.
3. ತುದಿಯನ್ನು ಬಣ್ಣದಲ್ಲಿ ಅದ್ದಿ, ಅವರ ಅಂಗೈ ಬಾಹ್ಯರೇಖೆಯ ಒಳಗೆ ಏನಾದರೂ ರಂಗೋಲಿಯನ್ನು ಚಿತ್ರಿಸಲು ಹೇಳುವುದು.
4. ಮಕ್ಕಳಿಗೆ ತಾವು ಬಿಡಿಸಿದ ಚಿತ್ರವನ್ನು ವಿವರಿಸಲು ಅವಕಾಶ ಕೊಡುವುದು.
5. ಚಿತ್ರಗಳಿಗೆ ಹೆಸರು ನೀಡಿ, ಅವುಗಳನ್ನು ನೇತುಹಾಕುವುದು.

ಚಟುವಟಿಕೆ 1

# ನಡೆಯುವುದು ಮತ್ತು ನಿಲ್ಲುವುದು – ಕೆಲಸದ ಸಲಕರಣೆಗಳು

## ಕಲಿಕಾ ಸಾಮಗ್ರಿಗಳು

ಸಂಗೀತ, ಮ್ಯೂಸಿಕ್ ಸಿಸ್ಟಮ್

## ಸೂಚನೆಗಳು

ಮಕ್ಕಳನ್ನು ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ನಿಲ್ಲಿಸುವುದು. ಸಂಗೀತವನ್ನು ಹಾಕುವುದು. ಜೋಡಿಗಳು ತರಗತಿಕೋಣೆಯಲ್ಲಿ ಬೇರೆ ಬೇರೆ ದಿಕ್ಕುಗಳಲ್ಲಿ, ಯಾವುದಾದರೂ ರೀತಿಯಲ್ಲಿ ಓಡಾಡುವುದು. ಸಂಗೀತವು ನಿಂತಾಗ ಮಕ್ಕಳು ನಿಂತ ಜಾಗದಲ್ಲಿಯೇ ಅಲ್ಲಾಡದೇ ನಿಲ್ಲಬೇಕು, ಅಂದರೆ ಫ್ರೀಜ್ ಆಗಬೇಕು, ಇದು ಒಂದು ಚಕ್ರ. ಪ್ರತೀ ಚಕ್ರವನ್ನು ನಡೆ ಮತ್ತು ನಿಲ್ಲು / ವಾಕ್ ಮತ್ತು ಫ್ರೀಜ್ ಎಂದು ಕರೆಯಲಾಗುವುದು. ಇದನ್ನು ಹಲವಾರು ಸಲ ಪುನರಾವರ್ತನೆ ಮಾಡುವುದು.

**ನಂತರ ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ಕೊಡುವುದು:**

1. ಸಂಗೀತವನ್ನು ಹಾಕಿದಾಗ ಕೋಣೆಯ ಒಳಗೆ ನಡೆಯಬೇಕು..
2. ವೃತ್ತಾಕಾರವಾಗಿ ನಡೆಯಬೇಡಿ, ಕೋಣೆಯ ಎಲ್ಲ ಜಾಗವನ್ನು ಬಳಸಿಕೊಂಡು ನಡೆಯುತ್ತಿರಿ, ಆದರೆ ಯಾರನ್ನೂ ಮುಟ್ಟಬಾರದು, ನೂಕಬಾರದು ಅಥವಾ ಯಾರಿಗೂ ನೋವುಂಟು ಮಾಡಬಾರದು.
3. ಸಂಗೀತವು ಶುರುವಾದಾಗ ನಡೆಯಬೇಕು, ಸಂಗೀತವು ನಿಂತಾಗ, ನೀವು ಇರುವ ಜಾಗದಲ್ಲಿಯೇ ಅಲ್ಲಾಡದೇ ನಿಂತುಕೊಳ್ಳಬೇಕು.
4. ನಿಮ್ಮ ಗೆಳೆಯರು ಅಥವಾ ಶಿಕ್ಷಕರ ಹತ್ತಿರಕ್ಕೆ ಹೋಗಬೇಡಿ, ನೀವು ಎಲ್ಲಿದ್ದೀರೋ ಅಲ್ಲಿಯೇ ನಿಂತುಕೊಳ್ಳಬೇಕು.

**ನಡೆ ಮತ್ತು ನಿಲ್ಲು / ವಾಕ್ ಮತ್ತು ಫ್ರೀಜ್ ಚಕ್ರವನ್ನು 3 ಸಲ ಮಾಡಿದ ನಂತರ, ಜೋಡಿಗಳಿಗೆ ನಿಲ್ಲಲು ಅಂದರೆ ಫ್ರೀಜ್ ಆಗಲು ಈ ಕೆಳಗಿನ ಸೂಚನೆಗಳನ್ನು ಕೊಡುವುದು:**

1. ನೀವು ನಿಂತಾಗ ಅಂದರೆ ಫ್ರೀಜ್ ಆದಾಗ, ನೀವು ನೋಡಿರುವ ರೈತರು ಬಳಸುವ ಒಂದು ಸಲಕರಣೆಯು ಹೇಗೆ ಕಾಣುತ್ತದೆ ಎಂಬುದನ್ನು ನಿಮ್ಮ ದೇಹದ ಮೂಲಕ ತೋರಿಸಬೇಕು. ಮಕ್ಕಳಿಗೆ ಕೇವಲ ಅವರ ಕೈಗಳು ಮಾತ್ರವಲ್ಲದೇ, ಇಡೀ ದೇಹವನ್ನು ಬಳಸಿಕೊಂಡು ತೋರಿಸಲು ಪ್ರೋತ್ಸಾಹಿಸುವುದು. ತರಗತಿಕೋಣೆಯಲ್ಲಿ ಓಡಾಡಿ, ಮಕ್ಕಳಿಗೆ ಸಲಕರಣೆಯನ್ನು ಹೆಸರಿಸಲು ಮತ್ತು ಅದನ್ನು ಏಕೆ ಬಳಸುತ್ತಾರೆ ಎಂದು ಹೇಳಲು ಪ್ರೋತ್ಸಾಹಿಸುವುದು. (ಉದಾ: ಮಣ್ಣು ತುಂಬಿದ ಬುಟ್ಟಿ, ಕೊಡಲಿ, ಕುಡುಗೋಲು ಇತ್ಯಾದಿ)
2. ನೀವು ನಿಂತಾಗ ಅಂದರೆ ಫ್ರೀಜ್ ಆದಾಗ, ಕ್ಷೌರಿಕರು ಬಳಸುವ ಒಂದು ಸಲಕರಣೆಯು ಹೇಗೆ ಕಾಣುತ್ತದೆ ಎಂಬುದನ್ನು ನಿಮ್ಮ ದೇಹದ ಮೂಲಕ ತೋರಿಸಬೇಕು. ಮಕ್ಕಳಿಗೆ ಕೇವಲ ಅವರ ಕೈಗಳು ಮಾತ್ರವಲ್ಲದೇ, ಇಡೀ ದೇಹವನ್ನು ಬಳಸಿಕೊಂಡು ತೋರಿಸಲು ಪ್ರೋತ್ಸಾಹಿಸುವುದು. ತರಗತಿಕೋಣೆಯಲ್ಲಿ ಓಡಾಡಿ, ಮಕ್ಕಳಿಗೆ ಸಲಕರಣೆಯನ್ನು ಹೆಸರಿಸಲು ಮತ್ತು ಅದನ್ನು ಏಕೆ ಬಳಸುತ್ತಾರೆ ಎಂದು ಹೇಳಲು ಪ್ರೋತ್ಸಾಹಿಸುವುದು. (ಉದಾ: ಕತ್ತರಿ, ಬಾಚಣಿಕೆ, ಕುರ್ಚಿ, ಕನ್ನಡಿ ಇತ್ಯಾದಿ)
3. ನೀವು ನಿಂತಾಗ ಅಂದರೆ ಫ್ರೀಜ್ ಆದಾಗ, ಅಗ್ನಿಶಾಮಕದಳದವರು ಬಳಸುವ ಒಂದು ಸಲಕರಣೆಯು ಹೇಗೆ ಕಾಣುತ್ತದೆ ಎಂಬುದನ್ನು ನಿಮ್ಮ ದೇಹದ ಮೂಲಕ ತೋರಿಸಬೇಕು. ಮಕ್ಕಳಿಗೆ ಕೇವಲ ಅವರ ಕೈಗಳು ಮಾತ್ರವಲ್ಲದೇ, ಇಡೀ ದೇಹವನ್ನು ಬಳಸಿಕೊಂಡು ತೋರಿಸಲು ಪ್ರೋತ್ಸಾಹಿಸುವುದು. ತರಗತಿಕೋಣೆಯಲ್ಲಿ ಓಡಾಡಿ, ಮಕ್ಕಳಿಗೆ ಸಲಕರಣೆಯನ್ನು ಹೆಸರಿಸಲು ಮತ್ತು ಅದನ್ನು ಏಕೆ ಬಳಸುತ್ತಾರೆ ಎಂದು ಹೇಳಲು ಪ್ರೋತ್ಸಾಹಿಸುವುದು. (ಉದಾ: ಬೆಂಕಿನಿರೋಧಕ ಹ್ಯಾಟ್, ಬೆಂಕಿ ಆರಿಸುವ ಸಾಧನ, ಮರಳಿನ ಬಕೆಟ್, ಉದ್ದನೆಯ ಹೋಸ್ ಪೈಪ್ ಇತ್ಯಾದಿ)
4. ನೀವು ನಿಂತಾಗ ಅಂದರೆ ಫ್ರೀಜ್ ಆದಾಗ, ಅಂಚೆಯವರು ಬಳಸುವ ಒಂದು ಸಲಕರಣೆಯು ಹೇಗೆ ಕಾಣುತ್ತದೆ ಎಂಬುದನ್ನು ನಿಮ್ಮ ದೇಹದ ಮೂಲಕ ತೋರಿಸಬೇಕು. ಮಕ್ಕಳಿಗೆ ಕೇವಲ ಅವರ ಕೈಗಳು ಮಾತ್ರವಲ್ಲದೇ, ಇಡೀ ದೇಹವನ್ನು ಬಳಸಿಕೊಂಡು ತೋರಿಸಲು ಪ್ರೋತ್ಸಾಹಿಸುವುದು. ತರಗತಿಕೋಣೆಯಲ್ಲಿ ಓಡಾಡಿ, ಮಕ್ಕಳಿಗೆ ಸಲಕರಣೆಯನ್ನು ಹೆಸರಿಸಲು ಮತ್ತು ಅದನ್ನು ಏಕೆ ಬಳಸುತ್ತಾರೆ ಎಂದು ಹೇಳಲು ಪ್ರೋತ್ಸಾಹಿಸುವುದು. (ಉದಾ: ಸೈಕಲ್, ಅಂಚೆಯಾತನ ಹೆಗಲು ಚೀಲ ಇತ್ಯಾದಿ)

ಪ್ರತಿ ಸಲವು ಮಕ್ಕಳು ಸಂಗೀತದ ಜೊತೆ ನಡೆಯಬೇಕು ಮತ್ತು ಸಂಗೀತ ನಿಂತಾಗ ನಿಲ್ಲುವಂತೆ ಮಾಡುವುದು. ನಡೆಯುವ ಕ್ರಮ ಇಲ್ಲದೆಯೇ ಒಂದಾದ ನಂತರ ಇನ್ನೊಂದನ್ನು ಮಾಡಬೇಡಿ.

ಚಟುವಟಿಕೆ 2

## ಕೆಲಸದ ಮೂಲೆಗಳು

1. ಮಕ್ಕಳಿಗೆ ತರಗತಿಕೋಣೆಯ ಮಧ್ಯದಲ್ಲಿ ನಿಲ್ಲುವಂತೆ ಹೇಳುವುದು – ಅದು ಅವರ ಮನೆ ಎಂದು ಭಾವಿಸಲು ಹೇಳುವುದು. ಕೋಣೆಯ ನಾಲ್ಕು ಮೂಲೆಗಳನ್ನು ಆಸ್ಪತ್ರೆ (ಮೂಲೆ 1), ಶಾಲೆ (ಮೂಲೆ 2), ಗದ್ದೆ/ಹೊಲ (ಮೂಲೆ 3), ಅಂಗಡಿ (ಮೂಲೆ 4)
2. ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡುವುದು,
3. 'ನಾವು ನಮ್ಮ ಮನೆಯಿಂದ ಹಳ್ಳಿಯ ಒಳಗೆ ಹೋಗೋಣ. ನಾನು ಮಧ್ಯದಲ್ಲಿ ನಿಲ್ಲುತ್ತೇನೆ, ಇದು ಮನೆ. ನೀವು ಕೋಣೆಯಲ್ಲಿ ಯಾವುದಾದರೂ ಮೂಲೆಯನ್ನು ಆರಿಸಿಕೊಳ್ಳೋದಕ್ಕೆ 30 ಸೆಕೆಂಡ್ ಸಮಯ ಕೊಡ್ತೀನಿ, ನೀವು ಆರಿಸಿಕೊಂಡ ಮೂಲೆಗೆ ಹೋಗಿ, ಅಲ್ಲಿ ನಿಲ್ಲಬೇಕು'
4. 'ನೀವು ಆರಿಸಿಕೊಂಡ ಮೂಲೆಯಲ್ಲಿ ನಿಂತಾಗ, ಆಸ್ಪತ್ರೆ, ಶಾಲೆ, ಹೊಲ ಅಥವಾ ಅಂಗಡಿಯಲ್ಲಿ ಇರುವ ಜನರು ಏನು ಕೆಲಸ ಮಾಡುತ್ತಾರೆ ಎಂಬುದನ್ನು ಅಭಿನಯಿಸಬೇಕು, ನಾನು ಒಂದು ಮೂಲೆಯ ಹೆಸರನ್ನು ಹೇಳಿದಾಗ, ಆ ಮೂಲೆಯಲ್ಲಿ ನಿಂತ ಮಕ್ಕಳು ಒಬ್ಬರಾದ ನಂತರ ಇನ್ನೊಬ್ಬರು ಅಭಿನಯಿಸಿ ತೋರಿಸಬೇಕು. ನೀವು ಅಭಿನಯಿಸಿ ತೋರಿಸಿದ ನಂತರ, ಮಧ್ಯದಲ್ಲಿ ಬಂದು ಕೂರಬಹುದು.'
5. 'ಇನ್ನುಳಿದ ಮೂಲೆಯ ಮಕ್ಕಳು ಮಧ್ಯಕ್ಕೆ ಬರಬೇಕು, ನಾನು ಕಣ್ಣು ಮುಚ್ಚಿದಾಗ, ಮತ್ತೆ ಹೋಗಿ ಮೂಲೆಯನ್ನು ಆಯ್ಕೆ ಮಾಡಿಕೊಂಡು ನಿಲ್ಲಬೇಕು. ನಾನು ಮತ್ತೆ ಇನ್ನೊಂದು ಮೂಲೆಯ ಹೆಸರನ್ನು ಕರೆಯುತ್ತೇನೆ, ಆಗ ಆ ಮೂಲೆಯಲ್ಲಿದ್ದವರು ಆ ಸ್ಥಳದಲ್ಲಿದ್ದ ಜನರು ಮಾಡುವ ಕೆಲಸವನ್ನು ಅಭಿನಯಿಸಿ ತೋರಿಸುವುದು. ಮೂಲೆಯಲ್ಲಿದ್ದ ಮಕ್ಕಳು ಒಬ್ಬರಾದ ನಂತರ ಇನ್ನೊಬ್ಬರು ಅಭಿನಯಿಸಿ ತೋರಿಸಿ, ವಾಪಸು ಬಂದು ಕೂರುವುದು.'
6. ಶಿಕ್ಷಕರು ಒಂದು ಮೂಲೆಯ ಹೆಸರನ್ನು ಕರೆದಾಗ, ಆ ಮೂಲೆಯಲ್ಲಿದ್ದ ಮಕ್ಕಳು ಆ ಹೆಸರಿನ ಸ್ಥಳದಲ್ಲಿರುವ ಜನರು ಮಾಡುವ ಕೆಲಸವನ್ನು ಅಭಿನಯಿಸಿ ತೋರಿಸಿದ ನಂತರ ಆಟದಲ್ಲಿ ಮುಂದುವರೆಯಬಾರದು, ಅವರು ಈಚೆ ಬಂದು ಕುಳಿತುಕೊಳ್ಳಬೇಕು. ಇನ್ನುಳಿದ ಮಕ್ಕಳು ತರಗತಿಯ ಮಧ್ಯದಲ್ಲಿ ಮೊದಲಿನಂತೆ ಸೇರುವುದು. ಮತ್ತೆ ಶಿಕ್ಷಕರು ಮೂವತ್ತು ಸೆಕೆಂಡ್ ಸಮಯ ಕೊಟ್ಟಾಗ, ಯಾವುದಾದರೂ ಮೂಲೆಯನ್ನು ಆರಿಸಿಕೊಂಡು ನಿಲ್ಲುವುದು.
7. ಇನ್ನೊಂದು ಮೂಲೆಯ ಹೆಸರನ್ನು ಕರೆದಾಗ, ಅಲ್ಲಿದ್ದ ಮಕ್ಕಳು ಅಭಿನಯಿಸಿ ತೋರಿಸುವ ಅವಕಾಶ ಪಡೆಯುತ್ತಾರೆ.
8. ಕೇವಲ ನಾಲ್ಕು ಮಕ್ಕಳು ಉಳಿದಾಗ, ಅವರು ಒಂದೊಂದು ಮೂಲೆಯನ್ನು ಆಯ್ಕೆ ಮಾಡಿಕೊಂಡು ನಿಲ್ಲುವುದು.
9. ಯಾವ ಮಗುವೂ ಉಳಿಯದಂತೆ ಆಟವನ್ನು ಮುಂದುವರೆಸುವುದು.

ಚಟುವಟಿಕೆ 3

## ಜೊತೆಗಾರರನ್ನು ಹುಡುಕಿಕೊಳ್ಳುವುದು

1. ಮಧ್ಯದಲ್ಲಿ 2 ಮಕ್ಕಳು ನಿಲ್ಲುವಷ್ಟು ದೊಡ್ಡದಾದ ಒಂದು ವೃತ್ತವನ್ನು ಎಳೆಯುವುದು.
2. ಎಲ್ಲ ಮಕ್ಕಳಿಗೂ ಅವರು ಹಿಡಿದು ನಿಲ್ಲುವ ಒಂದು ಬಣ್ಣದ ಕಾರ್ಡನ್ನು ಕೊಡುವುದು. 30 ಮಕ್ಕಳ ಒಂದು ತರಗತಿಯಲ್ಲಿ ಸುಮಾರಾಗಿ 5 ಮಕ್ಕಳು 6 ಬಣ್ಣಗಳಲ್ಲಿ ಒಂದನ್ನು ಪಡೆಯುತ್ತಾರೆ.
3. ಮಧ್ಯದಲ್ಲಿರುವ ವೃತ್ತದ ಸುತ್ತಲೂ ಮಕ್ಕಳು ವೃತ್ತಾಕಾರವಾಗಿ ಓಡುತ್ತಿರಬೇಕು, ನೀವು 'ಫೈರ್ ಇನ್ ದಿ ಫಾರೆಸ್ಟ್ ರನ್ ರನ್' ಎಂದು ಹಾಡುವುದು ಅಥವಾ ಸಂಗೀತವನ್ನು ಹಾಕುವುದು. ಇದ್ದಕ್ಕಿದ್ದಂತೆ ಹಾಡು/ಸಂಗೀತ ನಿಲ್ಲಿಸಿ, 6ರಲ್ಲಿ ಯಾವುದಾದರೂ ಒಂದು ಬಣ್ಣದ ಹೆಸರನ್ನು ಹೇಳುವುದು. ಆ ಬಣ್ಣದ ಕಾರ್ಡ್ ಇರುವ ಎಲ್ಲ 5 ಮಕ್ಕಳು ಮಧ್ಯದಲ್ಲಿರುವ ವೃತ್ತದ ಒಳಗೆ ಬರಬೇಕು. ಆದರೆ ವೃತ್ತದೊಳಗೆ ಕೇವಲ ಎರಡೇ ಮಕ್ಕಳು ಹಿಡಿಸುವುದರಿಂದ, 3 ಮಕ್ಕಳು ಔಟ್ ಆಗುತ್ತಾರೆ. ಈ ಇಬ್ಬರು ಮಕ್ಕಳು ಇನ್ನೊಂದು ಬಣ್ಣವನ್ನು ಆಯ್ಕೆ ಮಾಡಿಕೊಂಡು, ಅವರೊಂದಿಗೆ ಮತ್ತೆ ಓಡಬೇಕು. ನೀವು ಇನ್ನೊಂದು ಬಣ್ಣದ ಹೆಸರನ್ನು ಕರೆಯುವುದು ಮತ್ತು ಆಟವನ್ನು ಮುಂದುವರೆಸುವುದು.
4. ಕೊನೆಯಲ್ಲಿ ಎರಡೇ ಮಕ್ಕಳು ಉಳಿಯುವವರೆಗೂ ಆಟವನ್ನು ಮುಂದುವರೆಸುವುದು.

## ಚಟುವಟಿಕೆ 1

## ಡಂಬ್ ಚರಾಡ್/ಶರಾಡ್ (Dumb charade)

1. ಮಕ್ಕಳನ್ನು 2 ತಂಡಗಳನ್ನಾಗಿ ಮಾಡುವುದು. ಪ್ರತಿ ತಂಡಕ್ಕೂ ಆಟವಾಡಲು 4 ಅವಕಾಶ ಕೊಡುವುದು
2. ಪ್ರತಿ ತಂಡವು ಒಂದೊಂದು ಸಲಕ್ಕೆ ಒಬ್ಬರು ನಾಯಕರನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಒಂದು ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವುದು.
3. ನಾಯಕ ಕೋಣೆಯ ಮಧ್ಯಕ್ಕೆ ಬರಬೇಕು. ವಿರುದ್ಧ ತಂಡದವರು ಅವರ ಆಯ್ಕೆಯ ಒಂದು ವೃತ್ತಿಯನ್ನು ನಾಯಕನಿಗೆ/ಳಿಗೆ ಗುಟ್ಟಾಗಿ ಹೇಳುವುದು.
4. ನಾಯಕ/ಕಿ ಆ ವೃತ್ತಿಯನ್ನು ಅಭಿನಯಿಸಿ ತೋರಿಸಬೇಕು ಮತ್ತು ಅವನ/ಳ ತಂಡದವರು ಆ ವೃತ್ತ ಯಾವುದೆಂದು ಊಹೆ ಮಾಡಿ ಹೇಳಬೇಕು.
5. ತಂಡವು ಸರಿಯಾಗಿ ಊಹೆ ಮಾಡಿದರೆ, ಅವರಿಗೆ ಒಂದು ಪಾಯಿಂಟ್ ಸಿಗುತ್ತದೆ, ಗರಿಷ್ಠ ಪಾಯಿಂಟ್ ಗಳಿಸುವ ತಂಡವು ಗೆಲ್ಲುತ್ತದೆ.

## ಚಟುವಟಿಕೆ 2

## ಸ್ಕಿಟಲ್‌ಗಳನ್ನು ಒದೆಯುವುದು

1. ಸ್ಕಿಟಲ್‌ಗಳನ್ನು 5, 4, 3 ವಿನ್ಯಾಸದಲ್ಲಿ ಜೋಡಿಸುವುದು
2. ಮಕ್ಕಳಿಗೆ ವಿನ್ಯಾಸದಿಂದ 10 ಅಡಿ ದೂರದಲ್ಲಿ ನಿಲ್ಲಿಸಿ, ಚೆಂಡನ್ನು ಒದೆಯುವಂತೆ ಹೇಳುವುದು.
3. ಮಕ್ಕಳು ಎಷ್ಟು ಸ್ಕಿಟಲ್‌ಗಳನ್ನು ಬೀಳಿಸುತ್ತಾರೆ, ಅಷ್ಟು ಪಾಯಿಂಟ್‌ಗಳನ್ನು ಗಳಿಸುತ್ತಾರೆ.

## ಚಟುವಟಿಕೆ 3

## ರಿಲೇ ಓಟ

1. 6 ಮಕ್ಕಳಿರುವ ಒಂದು ತಂಡದಂತೆ ಒಟ್ಟು 5 ತಂಡಗಳನ್ನು ಮಾಡುವುದು.
2. ರೇಸ್ ಟ್ರಾಕಿನ ಎರಡು ತುದಿಗಳಲ್ಲಿ ಪ್ರತಿತಂಡದ 3 ಮಕ್ಕಳನ್ನು ನಿಲ್ಲಿಸುವುದು.
3. ಪ್ರತಿ ತಂಡಕ್ಕೂ ಒಂದು ಕೋಲಾಟದ ಕೋಲನ್ನು ಕೊಡುವುದು.
4. ರೇಸ್ ಶುರುವಾಗುವಾಗ ಪ್ರಧಾನ/ನಾಯಕ ಆಟಗಾರ/ರ್ತಿ ಇನ್ನೊಂದು ತುದಿಯನ್ನು ಮುಟ್ಟಿ, ಕೋಲನ್ನು ತನ್ನ ತಂಡದ ಆಟಗಾರ/ರ್ತಿಗೆ ಕೊಡಬೇಕು, ಅವರು ಮತ್ತೆ ಅದನ್ನು ಇನ್ನೊಂದು ತುದಿಯಲ್ಲಿರುವ ತನ್ನ ತಂಡದ ಆಟಗಾರ/ರ್ತಿಗೆ ಕೊಡಬೇಕು.
5. ಮೊದಲು ಯಾವ ತಂಡದವರು ಕೋಲನ್ನು ಮೂವರು ಆಟಗಾರೊಂದಿಗೆ ಬದಲಿಸಿಕೊಳ್ಳುವುದೋ ಅವರು ಗೆದ್ದ ಹಾಗೆ.

# ನಮಗೆ ಸಹಾಯ ಮಾಡುವ ಜನರು



## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು






## ನನ್ನ ನೆರೆಹೊರೆ ಮತ್ತು ನನ್ನ ಊರು

# ನನ್ನ ಊರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು



# ಕಲಿಕಾ ಫಲಿತಗಳು

## ಉಪವಿಷಯ 2.3: ನನ್ನ ಊರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 ಸ್ವಚ್ಛವಾದ ಮತ್ತು ಗಲೀಜಾದ ಊರಿನ ನಡುವೆ ಇರುವ ವ್ಯತ್ಯಾಸವನ್ನು ಅರಿಯುವುದು. | 1 ಸ್ವಚ್ಛವಾದ ಹಾಗೂ ಗಲೀಜಾದ ಊರಿನ ನಡುವ ಇರುವ ವ್ಯತ್ಯಾಸವನ್ನು ಮತ್ತು ಅಶುದ್ಧ ಪರಿಸರಕ್ಕೆ ಕಾರಣವಾಗುವ ವರ್ತನೆಯನ್ನು ಅರಿಯುವುದು. | 1 ಅಶುದ್ಧ ಪರಿಸರಕ್ಕೆ ಮತ್ತು ಆಹಾರ ಹಾಗೂ ನೀರು ಕಲುಷಿತಗೊಳ್ಳುವುದು ಹಾಗೂ ಆರೋಗ್ಯದ ಮೇಲೆ ಅದರ ಪರಿಣಾಮ, ಇವುಗಳ ನಡುವಣ ಸಂಬಂಧವನ್ನು ಅರಿಯುವುದು. |
| 2 ಅಶುದ್ಧ ಪರಿಸರಕ್ಕೆ ಕಾರಣವಾಗುವ ವರ್ತನೆಯನ್ನು ಅರಿಯುವುದು ಮತ್ತು ವಿವರಿಸುವುದು. | 2 ಅಶುದ್ಧ ಪರಿಸರದಲ್ಲಿ ಬದುಕುವುದರ ಪರಿಣಾಮಗಳನ್ನು ಅರಿಯುವುದು ಮತ್ತು ವಿವರಿಸುವುದು. | 2 ಹಸಿ ಮತ್ತು ಒಣತ್ಯಾಜ್ಯವನ್ನು ವರ್ಗೀಕರಿಸಿ, ಪ್ರತ್ಯೇಕಿಸುವುದು ಮತ್ತು ಅವನ್ನು ಅದಕ್ಕೆ ಅನುಗುಣವಾಗಿ ವಿಲೇವಾರಿ ಮಾಡುವುದನ್ನು ಅರಿಯುವುದು. |
| 3 ಊರು ಗಲೀಜಾಗುವುದನ್ನು ತಡೆಯುವ ಕ್ರಮಗಳು. (ಹೊರಗೆ ಕಸಕಡ್ಡಿ ಹಾಕುವುದನ್ನು ತಪ್ಪಿಸುವುದು ಮತ್ತು ತ್ಯಾಜ್ಯದ ಸೂಕ್ತ ವಿಲೇವಾರಿ) | 3 ಊರನ್ನು ಸ್ವಚ್ಛವಾಗಿಟ್ಟುಕೊಳ್ಳಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು (ತ್ಯಾಜ್ಯದ ಸೂಕ್ತ ವಿಲೇವಾರಿ ಮತ್ತು ಪರಿಸರವನ್ನು ಸ್ವಚ್ಛಪಡಿಸುವುದು) | |
| | 4 ಕಸದ ವಿವಿಧ ರೂಪಗಳನ್ನು ಮತ್ತು ಅವುಗಳ ಮೂಲವನ್ನು ಹೆಸರಿಸಬಲ್ಲರು. (ಪ್ಲಾಸ್ಟಿಕ್ ಬಾಟಲಿಗಳು, ಕಾಗದ, ಸಗಣಿ, ತ್ಯಾಜ್ಯ ನೀರು ಮತ್ತು ಮನೆಯ ತ್ಯಾಜ್ಯ) | |

ಉಪವಿಷಯ 2.3

# ನನ್ನ ಊರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು





## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಸ್ವಚ್ಛವಾದ ಹಾಗೂ ಗಲೀಜಾದ ಊರಿನ ನಡುವ ಇರುವ ವ್ಯತ್ಯಾಸವನ್ನು ಮತ್ತು ಅಶುದ್ಧ ಪರಿಸರಕ್ಕೆ ಕಾರಣವಾಗುವ ವರ್ತನೆಯನ್ನು ಅರಿಯುವುದು
- ಅಶುದ್ಧ ಪರಿಸರದಲ್ಲಿ ಬದುಕುವುದರ ಪರಿಣಾಮಗಳನ್ನು ಅರಿಯುವುದು ಮತ್ತು ವಿವರಿಸುವುದು
- ಊರನ್ನು ಸ್ವಚ್ಛವಾಗಿಟ್ಟುಕೊಳ್ಳಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು (ತ್ಯಾಜ್ಯದ ಸೂಕ್ತ ವಿಲೇವಾರಿ ಮತ್ತು ಪರಿಸರವನ್ನು ಸ್ವಚ್ಛಪಡಿಸುವುದು)
- ಕಸದ ವಿವಿಧ ರೂಪಗಳನ್ನು ಮತ್ತು ಅವುಗಳ ಮೂಲವನ್ನು ಹೆಸರಿಸಬಲ್ಲರು. (ಪ್ಲಾಸ್ಟಿಕ್ ಬಾಟಲಿಗಳು, ಕಾಗದ, ಸಗಣಿ, ತ್ಯಾಜ್ಯ ನೀರು ಮತ್ತು ಮನೆಯ ತ್ಯಾಜ್ಯ)

ಸಂಭಾಷಣೆ 1

# ಸ್ವಚ್ಛವಾದ ಮತ್ತು ಗಲೀಜಾದ ಊರಿನ ನಡುವೆ ವ್ಯತ್ಯಾಸವನ್ನು ಅರಿಯುವುದು




## ಕಲಿಕಾ ಫಲಿತಗಳು

ಈ ವಿಷಯದ ಕೊನೆಯಲ್ಲಿ, ಮಕ್ಕಳು ಕೆಳಗಿನ ಕಲಿಕಾ ಫಲಿತಗಳನ್ನು ಸಾಧಿಸುವರು.

- ಸ್ವಚ್ಛ ಮತ್ತು ಗಲೀಜು ಪರಿಸರದ ಲಕ್ಷಣಗಳನ್ನು ಅರಿಯುವರು ಮತ್ತು ವಿವರಿಸುವರು.
- ಅಶುದ್ಧ ಪರಿಸರದ ಕಾರಣವನ್ನು ಮತ್ತು ಆರೋಗ್ಯದ ಮೇಲೆ ಅದರ ಪರಿಣಾಮವನ್ನು ವಿವರಿಸುವರು.

## ಕಲಿಕಾ ಸಾಮಗ್ರಿಗಳು

**ಪೋಸ್ಟರ್ P2.3.1** ಒಂದು ಸ್ವಚ್ಛ ಮತ್ತು ಗಲೀಜು ಊರನ್ನು ತೋರಿಸುವ ಚಿತ್ರ ಕಾರ್ಡ್ ಅಥವಾ ಪೋಸ್ಟರ್ (ಚಿತ್ರದ ಅರ್ಧಭಾಗದಲ್ಲಿ ಗಲೀಜು ಊರು ಮತ್ತು ಇನ್ನರ್ಧ ಭಾಗದಲ್ಲಿ ಸ್ವಚ್ಛವಾದ ಊರು) ಗಲೀಜಾದ ಭಾಗವು ಬೀದಿಯಲ್ಲಿ ಸುತ್ತಲೂ ಬಿದ್ದಿರುವ ಕಸಕಡ್ಡಿ, ಬಿಸಾಕಿದ ಪ್ಲಾಸ್ಟಿಕ್ ಬಾಟಲಿಗಳು, ಕೆರೆಯಲ್ಲಿ ತೇಲುತ್ತಿರುವ ಕಸ, ಮೂಲೆಯಲ್ಲಿ ಬಿದ್ದಿರುವ ಮಲಮೂತ್ರ, ಒಣಗಿದ ಎಲೆಗಳು, ಸಗಣಿ, ಬಾಕಿ ಉಳಿದ ಆಹಾರ, ದೇವಾಲಯದ ಒಣಗಿದ ಹೂಗಳು ಇತ್ಯಾದಿಯನ್ನು ತೋರಿಸುತ್ತದೆ. ಚಿತ್ರವು ಇವನ್ನೂ ತೋರಿಸುತ್ತದೆ – ರಸ್ತೆಯಲ್ಲಿಯೇ ಕಸ ಸುರಿಯುತ್ತಿರುವ ಜನರು, ರಸ್ತೆಯ ಮೇಲೆ ಹಣ್ಣಿನ ಸಿಪ್ಪೆಗಳನ್ನು, ಖಾಲಿಯಾದ ಬಿಸ್ಕೆಟ್ ಪೊಟ್ಟಣ ಮತ್ತು ಇನ್ನಿತರ ಕವರ್‌ಗಳನ್ನು ಎಸೆಯುತ್ತಿರುವುದು, ಮರಗಳಿಂದ ಎಲೆಗಳು ಉದುರುತ್ತಿರುವುದು/ ಜನರು ಕಸದ ಬುಟ್ಟಿ ಮತ್ತು ಕೆರೆಯತ್ತ ಕಸವನ್ನು ಬಿಸಾಕುತ್ತಿರುವುದು, ದಾರಿಯಲ್ಲಿ ಹೋಗುತ್ತಿರುವ ಹಸು ಉದ್ದಕ್ಕೂ ಸಗಣಿ ಹಾಕುತ್ತ ಹೋಗುವುದು, ಜನರು ಕಸವನ್ನು ಗುಡಿಸಿ ಚರಂಡಿಗೆ ದಬ್ಬುವುದು, ವ್ಯಕ್ತಿಯೊಬ್ಬರು ದಾರಿ ಬದಿಯಲ್ಲಿಯೇ ಶೌಚಕ್ಕೆ ಕೂಳಿತಿರುವುದು ಇತ್ಯಾದಿ)




## ಶಿಕ್ಷಕರ ಪೂರ್ವಸಿದ್ಧತೆ

- ಆರಂಭಿಸುವುದಕ್ಕಿಂತ ಮೊದಲು ಸೂಚನೆಗಳನ್ನು ನೋಡಿಕೊಂಡು, ತಿಳಿದಿರುವುದು
- ಎಲ್ಲ ಮಕ್ಕಳಿಗೂ ಕಾಣುವಂತೆ ಪೋಸ್ಟರ್‌ನ್ನು ತೂಗು ಹಾಕುವುದು.

## ಸೂಚನೆಗಳು

1. ಮಕ್ಕಳನ್ನು ಅರ್ಧ ವೃತ್ತಾಕಾರವಾಗಿ ಕೂರಿಸುವುದು
2. ಪೋಸ್ಟರ್‌ನ್ನು ಕೈಯಲ್ಲಿ ಹಿಡಿದು, ಊರಿನ ಎರಡು ಭಾಗಗಳ ನಡುವಣ ವ್ಯತ್ಯಾಸವನ್ನು ವಿವರಿಸುವಂತೆ ಕೇಳುವುದು. ಮಕ್ಕಳಿಗೆ ಹೋಲಿಸಿ, ವ್ಯತ್ಯಾಸವನ್ನು ವಿವರಿಸಲು ಅಸ್ವದ ನೀಡುವುದು. (ಇಡೀ ಚಿತ್ರದ ಮೇಲೆ ಗಮನವಿರಲಿ).
3. ಆಮೇಲೆ ಚಿತ್ರದ ಅರ್ಧ ಭಾಗದತ್ತ ಗಮನ ಕೊಡುವುದು. ಮಕ್ಕಳಿಗೆ ಚಿತ್ರದಲ್ಲಿ ಅವರು ನೋಡುವ ಒಂದು ಕಸ, ತ್ಯಾಜ್ಯ ಅಥವಾ ಗಲೀಜನ್ನು ಹೆಸರಿಸಲು ಹೇಳುವುದು. ಗುಂಪಿನ ನಡುವೆ ಓಡಾಡಿ, ಮಕ್ಕಳಿಗೆ ಅದನ್ನು ತೋರಿಸಲು ಅಸ್ವದ ಕೊಡುವುದು. ಎಲ್ಲ ಮಕ್ಕಳೂ ತೋರಿಸಿದ ನಂತರ, ಅವರು ಹೇಳದೇ ಉಳಿದಿರುವ ಯಾವುದಾದರೂ ಅಂಶಗಳಿದ್ದರೆ, ಅವನ್ನು ಬೆರಳು ಮಾಡಿ ತೋರಿಸಿ, ಮಕ್ಕಳಿಗೆ ಅವನ್ನು ಹೆಸರಿಸಲು ಹೇಳುವುದು.
4. ಮೊದಲಿನ ಮತ್ತು ಎರಡನೇ ಅರ್ಧ ಭಾಗದ ಚಿತ್ರಗಳ ನಡುವಣ ವ್ಯತ್ಯಾಸ ಎಂದರೆ ಮೊದಲಿನ ಅರ್ಧಭಾಗದ ಚಿತ್ರದಲ್ಲಿ ಎಲ್ಲ ಗಲೀಜು, ಕಸಕಡ್ಡಿಗಳು ರಸ್ತೆಯ ಮೇಲೆ ಇವೆ, ಅವು ಇರಬೇಕಾದ ಜಾಗದಲ್ಲಿ ಇಲ್ಲ ಎಂಬುದನ್ನು ವಿವರಿಸುವುದು.
5. ನೀವು ಯಾವ ಬಗೆಯ ಸ್ಥಳದಲ್ಲಿ ಬದುಕಲು ಇಷ್ಟಪಡುತ್ತೀರ ಎಂದು ಮಕ್ಕಳಿಗೆ ಕೇಳುವುದು. ಏಕೆ? ಕಾರಣ ಹೇಳಲು ಎಲ್ಲ ಮಕ್ಕಳಿಗೂ ಒಂದು ಅವಕಾಶವನ್ನು ಕೊಡುವುದು.

ಸಂಭಾಷಣೆ 2

## ಜವಾಬ್ದಾರಿಯುತ ಮತ್ತು ಬೇಜವಾಬ್ದಾರಿಯುತ ವರ್ತನೆಯನ್ನು ಅರಿಯುವುದು



### ಕಲಿಕಾ ಫಲಿತಗಳು

ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದಕ್ಕಾಗಿ ವ್ಯಕ್ತಿಗತವಾಗಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರ ಮಹತ್ವವನ್ನು ಅರಿಯುವುದು.

### ಸೂಚನೆಗಳು

ಹಂತ 1: **ಜನರ ವರ್ತನೆಯೊಂದಿಗೆ ಗಲೀಜಿನ ಪರಿಸರವನ್ನು ಸಂಬಂಧೀಕರಿಸುವುದು**

- ಎಲ್ಲ ಬಗೆಯ ಗಲೀಜು ಎಲ್ಲಿಂದ ಬರುತ್ತದೆ ಎಂದು ನೀವು ಯೋಚಿಸುತ್ತೀರಿ ಎಂದು ಮಕ್ಕಳಿಗೆ ಕೇಳುವುದು. ಯಾರು ಅವನ್ನೆಲ್ಲ ಹಾಕಿದ್ದಾರೆ ಅಥವಾ ಯಾರು ಬಿಸಾಕಿದ್ದಾರೆ ಎಂದು ವಿವರಿಸುತ್ತೀರಾ ಎಂದು ಕೇಳುವುದು. ಜಾಗವು ಅಷ್ಟು ಕೊಳಕಾಗಿದ್ದು ಹೇಗೆ ಎಂಬ ಕುರಿತು ಮಕ್ಕಳು ತಾವು ಅರ್ಥ ಮಾಡಿಕೊಂಡಿದ್ದನ್ನು? ತಮ್ಮ ವಿವರಣೆಯನ್ನು ನೀಡಲು ಸಮಯ ಕೊಡುವುದು.
- ಕಸವನ್ನು ಎಲ್ಲೆಂದರಲ್ಲಿ ಬಿಸಾಕಿರುವುದರ ಮೂಲ ಕಾರಣವನ್ನು ಅವರು ವಿವರಿಸುವುದು ಪೂರ್ಣಗೊಳಿಸಿದ ನಂತರ, ಜನರ ಕೆಲವು ವರ್ತನೆ ಅಥವಾ ಕೆಲಸಗಳಿಂದಾಗಿ ಹೀಗೆ ಗಲೀಜಾಗುತ್ತಿದೆಯೇ ಎಂದು ಮಕ್ಕಳಿಗೆ ಕೇಳುತ್ತ ಸಂಭಾಷಣೆಯನ್ನು ಮುಂದುವರೆಸುವುದು. (ದೂರದಲ್ಲಿ ನಿಂತು ಕಸದಬುಟ್ಟಿಯತ್ತ ಕಸವನ್ನು ಗುರಿಯಿಟ್ಟು ಎಸೆಯುತ್ತಿರುವ ವ್ಯಕ್ತಿಯನ್ನು ತೋರಿಸುವುದು. ಹೀಗೆ ಮಾಡಿದಾಗ, ಅದು ಕಸದ ಬುಟ್ಟಿಗೇ ಬೀಳುವುದೇ? ಏನಾಯಿತು? ಈ ವರ್ತನೆಯ ಪರಿಣಾಮವೇನಾಯಿತು? ಈ ಎಲ್ಲ ಪ್ರಶ್ನೆ ಕೇಳಿದಾಗ, ಮಕ್ಕಳು ಆ ವರ್ತನೆಯನ್ನು ಅಥವಾ ಕ್ರಿಯೆಯನ್ನು ಹಾಗೂ ಅದರ ಪರಿಣಾಮವನ್ನು ವಿವರಿಸುವುದು.

ಹಂತ 2: **ಜವಾಬ್ದಾರಿಯುತ ವರ್ತನೆಯೊಂದಿಗೆ ಸ್ವಚ್ಛ ಪರಿಸರವನ್ನು ಸಂಬಂಧೀಕರಿಸುವುದು**

- ಮಕ್ಕಳಿಗೆ ಈಗ ಚಿತ್ರದ ಎರಡೂ ಅರ್ಧಭಾಗಗಳನ್ನು ಗಮನವಿಟ್ಟು ನೋಡುವಂತೆ ಕೇಳುವುದು.
- ಸ್ವಚ್ಛ ಮತ್ತು ಗಲೀಜು ಪರಿಸರದ ನಡುವಣ ವ್ಯತ್ಯಾಸವನ್ನು ವಿವರಿಸಲು ಅವರಿಗೆ ಅವಕಾಶ ಕೊಡುವುದು
- ಚಿತ್ರದಲ್ಲಿ ತೋರಿಸಿರುವ ಎಲ್ಲ ಜನರು ಹಾಗೂ ಪ್ರಾಣಿಗಳನ್ನು ತೋರಿಸುತ್ತ, (ಪ್ರಾಣಿಗಳು ಏಕೆ – ಅದು ಅವುಗಳ ಸಹಜ ಪ್ರವೃತ್ತಿ ಅಲ್ಲವೇ?), ಈ ವ್ಯಕ್ತಿ ಏನು ಮಾಡಿದರೆ ಗಲೀಜು ನೆಲದ ಮೇಲೆ ಇರುವುದಿಲ್ಲ ಎಂದು ನೀವು ಯೋಚಿಸುತ್ತೀರಿ ಎಂದು ಕೇಳುವುದು.
- ಸ್ಥಳವನ್ನು ಸ್ವಚ್ಛವಾಗಿಡುವುದಕ್ಕೆ ಕಾರಣವಾಗುವ ಜನರ ವರ್ತನೆಯ ಮೇಲೆ ಗಮನವಿಡುವುದನ್ನು ಚರ್ಚಿಸುತ್ತ ಸಾರಾಂಶೀಕರಿಸುವುದು.

ಹಂತ 3: **ಪೋಸ್ಟರಿನಲ್ಲಿರುವ ವ್ಯಕ್ತಿಗಳ ವರ್ತನೆಯನ್ನು ವೈಯಕ್ತಿಕ ವರ್ತನೆಗೆ ಅನ್ವಯಿಸಿದರೆ, ಅದು ಸ್ವಚ್ಛ ಪರಿಸರವನ್ನು ಉಂಟು ಮಾಡುವುದು**

ಈ ಕೆಳಗಿನ ಸನ್ನಿವೇಶಗಳಲ್ಲಿ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಬೇಕು ಅಥವಾ ಬಿಸಾಡಬೇಕು ಎಂಬುದನ್ನು ಮಕ್ಕಳಿಗೆ ಕೇಳುವುದು:

- ನೀವು ಚಾಕೋಲೇಟ್ ಮೇಲಿನ ಹಾಳೆಯನ್ನು ತೆಗೆಯುತ್ತೀರಿ / ಪೇಪರ್ ಪ್ಲೇಟಿನಲ್ಲಿದ್ದ ತಿಂಡಿಯನ್ನು ತಿಂದು ಮುಗಿಸುತ್ತೀರಿ, ನಂತರ ಏನು ಮಾಡುವಿರಿ?
- ನಿಮ್ಮ ತಾಯಿ ಮನೆಯನ್ನು ಸ್ವಚ್ಛಪಡಿಸಿ, ಕಸದ ಪೊಟ್ಟಣವನ್ನು ನಿಮ್ಮ ಕೈಗೆ ಕೊಟ್ಟಿದ್ದಾರೆ ಎಂದುಕೊಳ್ಳಿ. ಆಗ ಏನು ಮಾಡುವಿರಿ?
- ನಿಮ್ಮ ಮನೆಯ ಮುಂದಿರುವ ಮರದಿಂದ ಎಲೆಗಳು ಕೆಳಗೆ ಉದುರುತ್ತವೆ.
- ನಿಮ್ಮ ಮನೆಯ ಮುಂದಿನ ಬೀದಿಯನ್ನು ಸ್ವಚ್ಛಪಡಿಸುವಿರಿ.
- ನೀವು ನೆಲವನ್ನು ಒರೆಸಿದ ನಂತರ, ಬಕೇಟಿನಲ್ಲಿ ಗಲೀಜಾದ ನೀರು ಇದೆ.
- ನಿಮ್ಮ ಬಟ್ಟೆಗಳನ್ನು ಒಗೆದ ನಂತರ ಬಕೀಟಿನಲ್ಲಿ ಸೋಪಿನ ನೀರು ಇದೆ.
- ನೀವು ಬಾಳೆಹಣ್ಣಿನ ಅಥವಾ ಕಿತ್ತಳೆ ಹಣ್ಣಿನ ಸಿಪ್ಪೆಯನ್ನು ಬಿಡಿಸಿ, ಹಣ್ಣನ್ನು ತಿನ್ನುವಿರಿ. ಸಿಪ್ಪೆಯನ್ನು ಏನು ಮಾಡುವಿರಿ?

## ಸಂಭಾಷಣೆ 3

## ಗಲೀಜು ಪರಿಸರದಲ್ಲಿ ವಾಸಿಸುವುದರ ಪರಿಣಾಮಗಳು

### ಕಲಿಕಾ ಫಲಿತಗಳು

ಗಲೀಜು ಪರಿಸರದಲ್ಲಿ ವಾಸಿಸುವುದರ ಪರಿಣಾಮಗಳನ್ನು ಅರಿಯುತ್ತಾರೆ ಮತ್ತು ಅವನ್ನು ಹೇಳಲು ಸಮರ್ಥರಾಗುವುದು

### ಕಲಿಕಾ ಸಾಮಗ್ರಿಗಳು

**P2.3.1** ಹಳ್ಳಿಯ ಪೋಸ್ಟರ್

**F2.3.1** ಈ ಕೆಳಗಿನ ಮಿಂಚುಪಟ್ಟಿಗಳು 1–3










### ಸೂಚನೆಗಳು

ಇವತ್ತು ನಾವು ಕೊಳಕಾದ ಸ್ಥಳವು ಉಂಟುಮಾಡುವ ಕೆಲವು ಪರಿಣಾಮಗಳ ಕುರಿತು ಮತ್ತು ಜನರು ಕೊಳಕು ಜಾಗಗಳಲ್ಲಿ ವಾಸಿಸುತ್ತಿದ್ದರೆ ಏನಾಗುತ್ತದೆ ಎಂಬ ಬಗ್ಗೆ ಮಾತನಾಡೋಣ ಎಂದು ಮಕ್ಕಳಿಗೆ ಹೇಳುವುದು.

ಪೋಸ್ಟರಿನಲ್ಲಿ ಒಂದು ಮನೆಯನ್ನು ತೋರಿಸಿ, ಮನೆಯ ಒಳಗಡೆ ತುಂಬ ಸ್ವಚ್ಛವಾಗಿದೆ, ಈ ಮನೆಯಲ್ಲಿ ತಾಯಿ ಮತ್ತು ತಂದೆ ಇಬ್ಬರೂ ಮನೆಯನ್ನು ಗುಡಿಸುತ್ತ, ಒರೆಸುತ್ತ ಸ್ವಚ್ಛವಾಗಿಟ್ಟುಕೊಂಡಿದ್ದಾರೆ ಎಂದು ವಿವರಿಸುವುದು. ಆದರೆ ಏನಾಗುತ್ತದೆ ಎಂಬುದನ್ನು ನಾವೀಗ ನೋಡೋಣ

1. ಮಕ್ಕಳಿಗೆ ಮಿಂಚುಪಟ್ಟಿಯನ್ನು ತೋರಿಸಿ – ಈ ಮಗು ಏಕೆ ತನ್ನ ಮೂಗನ್ನು ಮುಚ್ಚಿಕೊಂಡಿದ್ದಾನೆ? ಯಾವ ವಾಸನೆಯು ಮಗುವಿಗೆ ತನ್ನ ಮೂಗು ಮುಚ್ಚಿಕೊಳ್ಳುವಂತೆ ಮಾಡುತ್ತಿದೆ ಎಂದು ನೀವು ಯೋಚಿಸುತ್ತೀರಿ? ಯಾವುದರಿಂದ ವಾಸನೆಯು ಉಂಟಾಗುತ್ತಿದೆ? ಮಕ್ಕಳಿಗೆ ಈ ಪ್ರಶ್ನೆಗಳನ್ನು ಕೇಳುವುದು.
2. ಪೋಸ್ಟರನ್ನು ತೋರಿಸುತ್ತ, ಯಾವೆಲ್ಲ ಸಂಗತಿಗಳು ಸೇರಿ ಸ್ಥಳದಲ್ಲಿ ವಾಸನೆಯನ್ನು ಉಂಟುಮಾಡುತ್ತದೆ ಎಂದು ನೀವು ಯೋಚಿಸುತ್ತೀರಿ ಎಂದು ಮಕ್ಕಳನ್ನು ಕೇಳುವುದು. ಕಸವನ್ನು ಚರಂಡಿಗೆ ಸುರಿದಾಗ ಅದು ನೀರು ಹೋಗುವುದನ್ನು ತಡೆಯುತ್ತದೆ, ಚರಂಡಿಯ ನೀರು ಮೇಲೆ ಹರಿಯುತ್ತದೆ; ಆಗ ಅದು ವಾಸನೆಯುಂಟು ಮಾಡುತ್ತದೆ ಮತ್ತು ಅಲ್ಲಿ ಹತ್ತಿರದಲ್ಲಿ ವಾಸವಿರುವ ಜನರಿಗೆ ಬದುಕಲಿಕ್ಕೆ ಕಷ್ಟವಾಗುತ್ತದೆ ಎಂದು ವಿವರಿಸುವುದು.
3. ನೊಣಗಳತ್ತ ಮಕ್ಕಳ ಗಮನ ಸೆಳೆಯುವುದು. ಇಲ್ಲಿ ನೊಣಗಳು ಏನು ಮಾಡುತ್ತಿವೆ? ನೊಣಗಳು ಮತ್ತೆಲ್ಲಿ ಕುಳಿತುಕೊಳ್ಳುತ್ತವೆ? ಸ್ಥಳವು ಗಲೀಜಾಗಿದ್ದರೆ, ಅದರಿಂದ ನೊಣಗಳು ಬರುತ್ತವೆ, ಅವು ಮನೆಯೊಳಗೂ ಬಂದು ಆಹಾರ ವಸ್ತುಗಳ ಮೇಲೆ ಕುಳಿತುಕೊಳ್ಳುತ್ತವೆ.
4. ನಾಲ್ಕನೇ ಮಿಂಚುಪಟ್ಟಿಯನ್ನು ತೋರಿಸುವುದು ಮತ್ತು ಮಕ್ಕಳಿಗೆ ಕೇಳುವುದು – ಇಲ್ಲಿ ಏನು ಆಗುತ್ತಿದೆ ಎಂದು ಯೋಚಿಸುತ್ತೀರಿ? ನೆಲವು ಹೇಗೆ ಗಲೀಜಾಯಿತು? ಚಪ್ಪಲಿಯು ಏಕೆ ಗಲೀಜಾಗಿದೆ ಎಂದು ನೀವು ಯೋಚಿಸುತ್ತೀರಿ? ನೆಲವು ಗಲೀಜಾಗುವುದನ್ನು ನಾವು ಹೇಗೆ ತಡೆಯಬಹುದು?

ಸ್ವಚ್ಛವಿಲ್ಲದ, ಕಲುಷಿತ ಪರಿಸರದಲ್ಲಿ ವಾಸಿಸುವುದರಿಂದ ಜನರಿಗೆ ಬರುವ ರೋಗಗಳ ಕುರಿತು ಸ್ವಲ್ಪ ಚರ್ಚೆ ಮಾಡುವುದು.

ಜನರು ತಮ್ಮ ಮನೆಯ ಒಳಗೆ ಸ್ವಚ್ಛವಾಗಿಟ್ಟುಕೊಂಡಿದ್ದರೂ, ಮನೆಯ ಹೊರಗೆ ಗಲೀಜು ಇದ್ದರೆ, ನೊಣಗಳು ಮತ್ತು ಚಪ್ಪಲಿಗಳ ಮೂಲಕ ಹೊರಗಿನ ಗಲೀಜು ಮನೆಯ ಒಳಗೆ ಬರುತ್ತದೆ? ಮತ್ತು ಇದನ್ನು ಮನೆಯನ್ನು ಗಲೀಜು ಮಾಡುತ್ತದೆ ಎಂಬುದನ್ನು ಹೇಳುತ್ತ, ಸಂಭಾಷಣೆಯನ್ನು ಸಾರಾಂಶೀಕರಿಸುವುದು.

## ನನ್ನ ಶಾಲೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು

1. ಮಕ್ಕಳಿಗೆ ಅವರು ಮನೆಗೆ ಹೋಗುವ ದಾರಿಯಲ್ಲಿ ಯಾವ ರೀತಿಯ ಕಸ, ಗಲೀಜು ನೋಡುತ್ತಾರೆ ಎಂಬುದನ್ನು ಗಮನಿಸಲು ಹೇಳುವುದು. (ಮಕ್ಕಳನ್ನು ಶಾಲೆಗೆ ಬಿಡಲು ಮತ್ತು ಕರೆದುಕೊಂಡು ಹೋಗಲು ಬರುವ ತಾಯಂದಿರಿದ್ದರೆ, ಅವರನ್ನು ಈ ಅಭ್ಯಾಸದ ಭಾಗವಾಗಿರುವಂತೆ ಕೇಳುವುದು) ಅವರು ಗಲೀಜು ಏನಿದೆ ಎಂದು ಗಮನಿಸಿದ ನಂತರ, ಗಲೀಜಿನ ಹತ್ತಿರದಲ್ಲಿರುವ ಮುಖ್ಯ ಜಾಗ ಅಥವಾ ಸ್ಥಳಗುರುತನ್ನು ಟಿಪ್ಪಣಿ ಮಾಡಿಕೊಳ್ಳುವುದು (ಮರ, ಬಾವಿ, ಕೈಪಂಪು, ಅಂಗಡಿ, ದೇವಸ್ಥಾನ ಇತ್ಯಾದಿ)
2. ಮರುದಿನ ಮಕ್ಕಳು ಶಾಲೆಗೆ ಬಂದ ನಂತರ, ಅವರು ನೋಡಿದ ಗಲೀಜನ್ನು ಹೆಸರಿಸಿ, ಅದನ್ನು ಎಲ್ಲಿ ನೋಡಿದ್ದಾರೆಂದು ಕೇಳುವುದು. ಆ ಸ್ಥಳಕ್ಕೆ ಬರುವ ಜನರಿಗೆ ಗಲೀಜಿನಿಂದ ಏನು ಆಗುತ್ತದೆ ಎಂಬುದನ್ನು ವಿವರಿಸಲು ಮಕ್ಕಳಿಗೆ ಆಸ್ಪದ ನೀಡುವುದು.
3. ಮೊದಲ ದಿನವೇ ಮಕ್ಕಳು ಉತ್ತರವನ್ನು ಹೇಳಲು ಸಾಧ್ಯವಾಗದೇ ಇರಬಹುದು, ಚರ್ಚೆಯನ್ನು ಇನ್ನೂ ಎರಡು ದಿನದವರೆಗೆ ನಡೆಸುವುದು.
4. ಒಮ್ಮೆ ಮಕ್ಕಳು ಶಾಲೆಯ ಸುತ್ತ ಹೋಗಿ, ಗಮನವಿಟ್ಟು ನೋಡಿಕೊಂಡು ಬರಲಿ. ನಂತರ ಶಾಲೆಯ ಕಾಂಪೌಂಡಿನಲ್ಲಿ ಮತ್ತು ಸುತ್ತಮುತ್ತ ಗಲೀಜನ್ನು ಉಂಟು ಮಾಡುತ್ತಿರುವ ಎಲ್ಲ ಸಂಗತಿಗಳನ್ನು ಗಮನಿಸಿ, ಚರ್ಚಿಸುವಂತೆ ಮಾಡುವುದು. ಆ ಗಲೀಜುಗಳು ಅಲ್ಲಿ ಹೇಗೆ ಬಂದಿರಬಹುದು ಎಂದು ಯೋಚಿಸುವಂತೆ ಕೇಳುವುದು.
5. ಮುಖ್ಯ ಜಾಗ/ಸ್ಥಳ ಗುರುತುಗಳಿಗೆ ಸಂಬಂಧಿಸಿದಂತೆ ಅವರು ಗಮನಿಸಿದ್ದನ್ನು ಚಿತ್ರಿಸಲು ಮಕ್ಕಳಿಗೆ ಹೇಳುವುದು. ಗಲೀಜಿಗೆ ಮತ್ತು ಮುಖ್ಯ ಜಾಗ/ಸ್ಥಳ ಗುರುತುಗಳಿಗೆ ಹೆಸರು ನೀಡಿ, ಅವುಗಳೆಲ್ಲವನ್ನು ಒಂದು ದೊಡ್ಡ ಚಾರ್ಟ್ ಹಾಳೆಯ ಮೇಲೆ ಅಂಟಿಸಿ, ಅವರ ಹಳ್ಳಿಯ ಒಂದು ಚಿತ್ರವನ್ನು ಸಿದ್ಧಪಡಿಸುವುದು ಮತ್ತು ಗಲೀಜು ಅಲ್ಲಿಗೆ ಹೇಗೆ ಉಂಟಾಗಿರಬಹುದು, ಅದನ್ನು ಹೇಗೆ ಸ್ವಚ್ಛಪಡಿಸುವುದು ಎಂಬ ಬಗ್ಗೆ ಚರ್ಚಿಸುವುದು.

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು **"ಅಣ್ಣ"** ಶಿಶುಗೀತೆಯನ್ನು ಸರಿಯಾದ ಉಚ್ಚಾರಣೆ, ಹಾವಭಾವ ಮತ್ತು ಅಭಿನಯಗಳೊಂದಿಗೆ, ಹಾಡಲು ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

ಕೈಪಿಡಿಯಲ್ಲಿ ಕೊಟ್ಟಿರುವ ಶಿಶುಗೀತೆಯನ್ನು ಬಳಸಿಕೊಳ್ಳುವುದು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದರ ಜೊತೆಗೆ ಮಾಡಬೇಕಿರುವ ಅಭಿನಯ, ಹಾವಭಾವದ ಕುರಿತು ತಿಳಿದುಕೊಳ್ಳುವುದು.

### ಸೂಚನೆಗಳು

1. "ಅಣ್ಣ" ಶಿಶುಗೀತೆಯನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿ ಇದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಪೂರ್ಣವಾಗಿ ಲಯಬದ್ಧವಾದ ಅಭಿನಯದೊಂದಿಗೆ ಧ್ವನಿಯ ಏರಿಳಿತದೊಂದಿಗೆ ಹೇಳುವುದು ಮತ್ತು ಮಕ್ಕಳು ಗಮನವಿಟ್ಟು ಆಲಿಸುವುದು
3. ನೀವು ಹೇಳಿದ ನಂತರ ಪ್ರತಿಯೊಂದೂ ಸಾಲನ್ನು ಮಕ್ಕಳಿಗೆ ಪುನರಾವರ್ತನೆ ಮಾಡಲು ಹೇಳಿ, ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಶಿಶುಗೀತೆಯ ಜೊತೆಗೆ ಮಾಡುವ ಅಭಿನಯವನ್ನು ತೋರಿಸಿ, ನಿಮ್ಮಂತೆಯೇ ಮಾಡಲು ಮಕ್ಕಳಿಗೆ ಹೇಳುವುದು.
5. ಮಕ್ಕಳು ಈಗ ನಿಮ್ಮೊಂದಿಗೆ ಅಭಿನಯಿಸುತ್ತ ಹಾಡುವುದು.
6. ಮಕ್ಕಳಿಗೆ ಗುಂಪುಗಳಲ್ಲಿ ಅಥವಾ ಒಬ್ಬೊಬ್ಬರಾಗಿ ಅವರೇ ಹಾಡಲು ಪ್ರೋತ್ಸಾಹಿಸುವುದು.

ಶಿಶುಗೀತೆ 1

ಅಣ್ಣ

# ಅಣ್ಣ





ಅಣ್ಣ ಅಣ್ಣ ಬಾರಣ್ಣ
ದಿನಾಲೂ ಸ್ನಾನವ ಮಾಡಣ್ಣ
ಮನೆಯನು ಸ್ವಚ್ಛವ ಮಾಡಣ್ಣ



ಅಣ್ಣ ಅಣ್ಣ ಬೇಡಣ್ಣ
ಕಸವನು ಬೀದೀಲಿ ಎಸಿಬೇಡಣ್ಣ
ಅಣ್ಣ ಅಣ್ಣ ಹಾಕಣ್ಣ
ಕಸವನು ಗುಂಡಿಯಲಿ ಹಾಕಣ್ಣ





ಅಣ್ಣ ಅಣ್ಣ ಬೇಡಣ್ಣ
ದನಗಳ ಕೆರೆಯಲಿ ತೊಳೆಯದಿರಣ್ಣ
ಅಣ್ಣ ಅಣ್ಣ ಹೋಗಣ್ಣ
ಗಿಡವನೊಂದು ನೆಡು ಅಣ್ಣ
ಹಸಿರಿಗೆ ಉಸಿರು ನೀ ತಾರಣ್ಣ

ಶಿಶುಗೀತೆ ೨

# Colours



## Colours


Green is the colour known to you
The trees are green, and the leaves are too

Red is the colour known to you
The roses are red and the chillies are too

Blue is the colour known to you
The sea is blue, and the sky is too

Yellow is the colour known to you
Marigolds are yellow and lemons are too

## ಗಲೀಜು ಮಾಡಿದ ಮಕ್ಕಳು



### ಕಲಿಕಾ ಫಲಿತಗಳು

ಮಕ್ಕಳು **'ಗಲೀಜು ಮಾಡಿದ ಮಕ್ಕಳು'** ಕಥೆಯನ್ನು ಅರ್ಥ ಮಾಡಿಕೊಳ್ಳುವುದು; ನೆನಪಿಸಿಕೊಳ್ಳುವುದು ಹಾಗೂ ಅರ್ಥೈಸಿಕೊಳ್ಳಲು ಅಗತ್ಯವಿರುವ ಏಕೆ, ಏನು, ಹೇಗೆ ಮತ್ತು ಯಾವಾಗ ಕುರಿತು ಸರಳ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು.

### ಕಲಿಕಾ ಸಾಮಗ್ರಿಗಳು

ಕಥೆಯ ಕಾರ್ಡುಗಳು




### ಶಿಕ್ಷಕರ ಪೂರ್ವಸಿದ್ಧತೆ

ಕಥೆಯ ಕಾರ್ಡುಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು

### ಕಥೆ

**ಗಲೀಜು ಮಾಡಿದ ಮಕ್ಕಳು**

ರಾಧಾ, ಸೀತಾ, ಗಣೇಶ, ದೀಪಕ್ ಮತ್ತು ಅಪ್ಪು ಒಂದು ಹೊರಸಂಚಾರ ಅಥವಾ ಪಿಕ್‌ನಿಕ್ಕಿಗೆ ಹೋದರು. ಅವರು ಸ್ವಚ್ಛವಾಗಿದ್ದ, ಚೆನ್ನಾಗಿದ್ದ ಒಂದು ಮೈದಾನಕ್ಕೆ ಹೋಗಿ, ಅಲ್ಲಿ ಆಟವಾಡಲು ನಿರ್ಧರಿಸಿದರು. ಆಟ ಆಡಿ ಸುಸ್ತಾದ ನಂತರ ಅವರು ಊಟ ಮಾಡಲು ಕುಳಿತರು. ಆದರೆ ಮಕ್ಕಳಿಗೆ ತಾವೇನು ಮಾಡುತ್ತಿದ್ದೇವೆ ಎಂಬ ಬಗ್ಗೆ ಗಮನವೇ ಇರಲಿಲ್ಲ. ಅವರು ಕಿತ್ತಳೆ ಹಣ್ಣನ್ನು ಸುಲಿದು ತಿಂದು, ಸಿಪ್ಪೆಯನ್ನು ಒಬ್ಬರ ಮೇಲೊಬ್ಬರು ಬಿಸಾಡುತ್ತ ಆಟವಾಡಿದರು. ಬಾಳೆಹಣ್ಣು ಸುಲಿದು, ತಿಂದ ನಂತರ ಸಿಪ್ಪೆಯನ್ನು ಯಾರು ಹೆಚ್ಚು ದೂರಕ್ಕೆ ಎಸೆಯುತ್ತಾರೆ ಎಂದು ಪೈಪೋಟಿ ನಡೆಸಿದರು. ಗಾಜಿನ ನೀರಿನ ಬಾಟಲಿಯನ್ನು ಬಂಡೆಯೊಂದರ ಮೇಲೆ ಇಟ್ಟು, ಯಾರು ಅದನ್ನು ಒಂದೇ ಏಟಿಗೆ ಕಲ್ಲಿಟ್ಟು ಹೊಡೆದು, ಒಡೆಯುತ್ತಾರೆ ಎಂದು ನೋಡಲು ಪ್ರಯತ್ನಿಸಿದರು. ಅವರು ತಿಂಡಿಯನ್ನು ಕಟ್ಟಿಕೊಂಡು ಬಂದಿದ್ದ ಕಾಗದವನ್ನು ಹರಿದು, ಚೂರು ಮಾಡಿ, ಎಲ್ಲಡೆ ಬಿಸಾಡಿದರು. ಸ್ವಲ್ಪ ಹೊತ್ತು ಹೀಗೆಲ್ಲ ಆಟವಾಡಿದ ಮಕ್ಕಳು, ಸುಸ್ತಾಗಿ ಸ್ವಲ್ಪ ಆರಾಮು ಮಾಡಲೆಂದು ಮಲಗಿದರು.

ಆಗ ಅಲ್ಲಿಗೆ ವಾಯುರಾಜ ಬಂದ. ಮಕ್ಕಳು ಅಲ್ಲಿ ಉಂಟು ಮಾಡಿದ್ದ ಗಲೀಜನ್ನು, ಅವ್ಯವಸ್ಥೆಯನ್ನು ನೋಡಿದ. ಆತನಿಗೆ ತುಂಬಾ ಸಿಟ್ಟು ಬಂದಿತು. ವಾಯುರಾಜನಿಗೆ ಕೋಪ ಬಂದರೆ ಏನಾಗುತ್ತದೆ ಎಂದು ನಿಮಗೆ ಗೊತ್ತೆ? ಆತ ಜೋರಾಗಿ ಉಸಿರಾಡುತ್ತ, ಹೂಂಕರಿಸುತ್ತಾನೆ. ವಾಯುರಾಜ ಜೋರಾಗಿ ಹೂಂಕರಿಸ ತೊಡಗಿದೊಡನೆ, ಅಲ್ಲಿ ಮಕ್ಕಳು ಬಿಸಾಕಿದ್ದ ಗಲೀಜು ವಸ್ತುಗಳೆಲ್ಲ ಮೈದಾನದಲ್ಲಿ ಸುತ್ತಲಿದ್ದ ದೂಳಿನೊಂದಿಗೆ ಸೇರಿ, ಹಾರಾಡಲಾರಂಭಿಸಿತು.

ಹೀಗೆ ಹೂಂಕರಿಸುವ ಸದ್ದಿಗೆ ಮಕ್ಕಳಿಗೆ ಎಚ್ಚರವಾಯಿತು. ಅವರು ಎದ್ದು ನೋಡಿದರೆ ಅಲ್ಲಿ ಬಿರುಗಾಳಿ ಎದ್ದಿತ್ತು ಮತ್ತು ಅವರ ಕಣ್ಣಿನಲ್ಲೆಲ್ಲ ದೂಳು ತುಂಬಿತು.

'ಅಯ್ಯೋ ದೇವರೇ.... ಇದೇನಾಗ್ತಿದೆ?' ದೂಳು ಅವರ ಕಣ್ಣುಗಳನ್ನು ತುಂಬಿಕೊಂಡು, ಅವರಿಗೆ ಏನೂ ಕಾಣಿಸಲೇ ಇಲ್ಲ. ಕಾಗದದ ಚೂರುಗಳು ರಾಧಾಳ ಮುಖಕ್ಕೆ ಮೆತ್ತಿಕೊಂಡು, ಅವಳ ಮುಖವೆಲ್ಲ ಗಲೀಜಾಯಿತು. ಕಿತ್ತಳೆಯ ಸಿಪ್ಪೆಗಳು ಸೀತಾಳ ಮುಖಕ್ಕೆ ರಪ್ಪನೆ ಬಡಿದು, ಸಿಪ್ಪೆಯ ರಸವು ಕಣ್ಣಿಗೆ ಸಿಡಿದು, ಅವಳ ಕಣ್ಣಿನಲ್ಲಿ ನೀರು ತುಂಬಿತು. ದೀಪಕ್ ಬಾಳೆ ಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು, ಜಾರಿ ಬಿದ್ದನು. ಅಪ್ಪು ಒಡೆದ ಗಾಜಿನ ಬಾಟಲಿಯ ಚೂರಿನ ಮೇಲೆ ಕಾಲಿಟ್ಟು, ಗಾಯ ಮಾಡಿಕೊಂಡನು. (ಮೇಲಿನದನ್ನು ತೋರಿಸಲು ಚಿತ್ರವನ್ನು ಇಟ್ಟುಕೊಳ್ಳುವುದು)

ಇದ್ದಕ್ಕಿದ್ದಂತೆ ಬಿರುಗಾಳಿ ನಿಂತಿತು ಮತ್ತು ಮಕ್ಕಳು ಕಣ್ಣುಗಳನ್ನು ಒರೆಸಿಕೊಂಡರು. ಕಣ್ಣಿಗೆ ಆವರಿಸಿದ್ದ ದೂಳು ಕಡಿಮೆಯಾಯಿತು. ಅವರು ತಮ್ಮ ಸುತ್ತಲೂ ತಾವೇ ಉಂಟುಮಾಡಿದ್ದ ಗಲೀಜನ್ನು ನೋಡಿದರು. ಅವರು ಅಲ್ಲಿ ಬಿದ್ದಿದ್ದ ಒಣಗಿದ ಮರದ ರೆಂಬೆಗಳನ್ನು ತೆಗೆದುಕೊಂಡು, ಮಾತಾಡದೇ ಇಡೀ ಮೈದಾನವನ್ನು ಗುಡಿಸಿ, ಸ್ವಚ್ಛ ಮಾಡಿದರು. ಎಲ್ಲ ಕಸವನ್ನು ಒಂದು ಕಡೆ ರಾಶಿ ಹಾಕಿದರು. ಆಮೇಲೆ ಅವನ್ನು ಎತ್ತಿ ಅಲ್ಲಿಯೇ ಇದ್ದ ಕಸದ ತೊಟ್ಟಿಗೆ ಸುರಿದರು.

## ಗಲೀಜು ಮಾಡಿದ ಮಕ್ಕಳು



### ಸೂಚನೆಗಳು

**ಹಂತ 1:** ಕಥೆಯ ಪರಿಚಯ: (ಮಕ್ಕಳೊಂದಿಗೆ ವಿಷಯದ ಕುರಿತು, ಅವರ ಬದುಕಿನ ಅನುಭವಗಳಿಗೆ ಸಂಬಂಧಿಸಿದಂತೆ ಚರ್ಚಿಸುವುದು. ಮಕ್ಕಳು ತಿಂದು ಮುಗಿಸಿದ ನಂತರ ಏನು ಮಾಡಬೇಕಿತ್ತು? ಯಾವುದೇ ಏನಾದರೂ ತಿಂದ ನಂತರ ಉಳಿಯುವುದನ್ನು ಅಥವಾ ಹಣ್ಣನ್ನು ತಿಂದ ನಂತರ ಸಿಪ್ಪೆಯನ್ನು ಅವರು ಏನು ಮಾಡಬೇಕಿತ್ತು? ಮುಖಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇದೆ ಎಂದು ಚರ್ಚಿಸುವುದು) ಇದಾದ ನಂತರ ಕಥೆಯನ್ನು ಅವರದೇ ಮಾತುಗಳಲ್ಲಿ ಹೇಳುವುದು.

**ಹಂತ 2:** ಕಥೆಯನ್ನು ಒಮ್ಮೆ ಪೂರ್ಣ ಓದುವುದು, ಯಾವುದೇ ಅಡೆತಡೆಯಿಲ್ಲದೇ ಮಕ್ಕಳು ಪೂರ್ಣ ಕಥೆಯನ್ನು ಕೇಳಿಸಿಕೊಳ್ಳುವಂತೆ ಓದುವುದು.

**ಹಂತ 3:** ಕಥೆಯನ್ನು ಮತ್ತೆ ಓದುತ್ತ, ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು, ಕೀಳಿ ಪದಗಳನ್ನು ವಿವರಿಸುತ್ತ ಎತ್ತಿ ತೋರಿಸುವುದು. ಜೊತೆಗೆ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು. ಪ್ರತಿಧ್ವನಿ ಪ್ರಶ್ನೆಗಳ ಕೆಲವು ಉದಾಹರಣೆಗಳನ್ನು ಇಲ್ಲಿ ಕೆಳಗೆ ನೀಡಲಾಗಿದೆ:

- ಅವರು ಸ್ವಚ್ಛವಾಗಿದ್ದ, ಚೆನ್ನಾಗಿದ್ದ ಒಂದು ಮೈದಾನಕ್ಕೆ ಹೋಗಿ, ಅಲ್ಲಿ ಆಟವಾಡಲು ನಿರ್ಧರಿಸಿದರು. ಮಕ್ಕಳು ಹೊರಸಂಚಾರಕ್ಕೆ ಎಲ್ಲಿಗೆ ಹೋದರು?
- ಅವರು ಕಿತ್ತಳೆ ಹಣ್ಣನ್ನು ಸುಲಿದು ತಿಂದು, ಸಿಪ್ಪೆಯನ್ನು ಒಬ್ಬರ ಮೇಲೊಬ್ಬರು ಬಿಸಾಡುತ್ತ ಆಟವಾಡಿದರು. ಅವರು ಕಿತ್ತಳೆ ಹಣ್ಣಿನ ಸಿಪ್ಪೆಯೊಂದಿಗೆ ಏನು ಮಾಡಿದರು?
- ಅವರು ತಿಂಡಿಯನ್ನು ಕಟ್ಟಿಕೊಂಡು ಬಂದಿದ್ದ ಪತ್ರಿಕೆಯನ್ನು ಹರಿದು, ಚೂರು ಮಾಡಿ, ಎಲ್ಲಡೆ ಬಿಸಾಡಿದರು. ತಿಂದು ಮುಗಿಸಿದ ನಂತರ ಮಕ್ಕಳು ಪತ್ರಿಕೆಯನ್ನು ಏನು ಮಾಡಿದರು?
- ವಾಯುರಾಜ ಜೋರಾಗಿ ಹೂಂಕರಿಸ ತೊಡಗಿದೊಡನೆ, ಅಲ್ಲಿ ಮಕ್ಕಳು ಬಿಸಾಡಿದ್ದ ಗಲೀಜು ವಸ್ತುಗಳೆಲ್ಲ ಮೈದಾನದಲ್ಲಿ ಸುತ್ತಲಿದ್ದ ದೂಳಿನೊಂದಿಗೆ ಸೇರಿ, ಹಾರಾಡಲಾರಂಭಿಸಿತು. ವಾಯುರಾಜ ಏನು ಮಾಡಿದ?

**ಹಂತ 4:** ಕಥೆಯ ಕೊನೆಯಲ್ಲಿ, ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳಿಗೆ ಕೆಲವು ಉದಾಹರಣೆಗಳು:

- ಮಕ್ಕಳು ಹೊರಸಂಚಾರಕ್ಕೆ ಎಲ್ಲಿಗೆ ಹೋದರು?
- ಹಣ್ಣಿನ ಸಿಪ್ಪೆಗಳನ್ನು ಮಕ್ಕಳು ಏನು ಮಾಡಿದರು?
- ಗಾಜಿನ ಬಾಟಲಿಯೊಂದಿಗೆ ಮಕ್ಕಳು ಯಾವ ಆಟ ಆಡಿದರು?
- ರಾಧಾಗೆ ಏನಾಯಿತು? ಸೀತಾಗೆ ಏನಾಯಿತು?
- ದೀಪಕ್ ಹೇಗೆ ಜಾರಿ ಬಿದ್ದನು?

**ಹಂತ 5:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

- ಆಟವಾಡುತ್ತಿದ್ದಾಗ ಮಕ್ಕಳಿಗೆ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?
- ಮಕ್ಕಳಿಗೆ ತಾವು ಅಲ್ಲಿ ಉಂಟುಮಾಡಿದ ಗಲೀಜನ್ನು, ಅವ್ಯವಸ್ಥೆಯನ್ನು ನೋಡಿದಾಗ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?

**ಹಂತ 6:** ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು

- ಮಕ್ಕಳು ಮೈದಾನವನ್ನು ಹೇಗೆ ಗಲೀಜು ಮಾಡಿದರು?
- ಮಕ್ಕಳು ವಾಪಸು ಮನೆಗೆ ಹೋಗುವಾಗ ಮೈದಾನವು ಸ್ವಚ್ಛವಾಯಿತೇ ಅಥವಾ ಗಲೀಜಾಗಿತ್ತೆ? ಏಕೆ?

**ಹಂತ 7:** ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಸಹಾಯ ಮಾಡುವುದು.

ಚಟುವಟಿಕೆ 1

## ದಾರದಿಂದ ಬಣ್ಣ ಹಚ್ಚುವುದು

### ಕಲಿಕಾ ಸಾಮಗ್ರಿಗಳು

ದಾರ, ಕಾಗದದ ಹಾಳೆ, ಬಣ್ಣಗಳು (ಪ್ರಾಥಮಿಕ ಬಣ್ಣಗಳು ಮತ್ತು ಬಿಳಿ)

### ಶಿಕ್ಷಕರ ಪೂರ್ವಸಿದ್ಧತೆ

1. ಹಾಳೆಯ ಅಡ್ಡವಾಗಿ 3 ಗೆರೆಗಳನ್ನು ಎಳೆಯುವುದು. (ಅಂದರೆ ಹಾಳೆಯನ್ನು ಮೂರು ಭಾಗ ಮಾಡಿದಂತೆ)
2. ಮಕ್ಕಳಿಗೆ ಅವರಿಗೆ ಇಷ್ಟವಾದ ಬಣ್ಣವನ್ನು ಆರಿಸಿಕೊಳ್ಳುವಂತೆ ಹೇಳುವುದು.
3. ದಾರವನ್ನು ಬಣ್ಣದಲ್ಲಿ ಅದ್ದಿ, ಹಾಳೆಯ ಮೇಲಿನ ಮೂರನೇ ಒಂದು ಭಾಗದಲ್ಲಿ ಬಣ್ಣದಿಂದ ಚಿತ್ರಿಸುವಂತೆ ಹೇಳುವುದು,
4. ಬಿಳಿಯ ಪೇಂಟ್‌ಅನ್ನು ಬಣ್ಣದಲ್ಲಿ ಮಿಶ್ರಮಾಡುವಂತೆ ಮಕ್ಕಳಿಗೆ ಹೇಳುವುದು.
5. ಈಗ ಹಾಳೆಯ ಮಧ್ಯಭಾಗದಲ್ಲಿ ದಾರವನ್ನು ಈ ಬಣ್ಣದಲ್ಲಿ ಅದ್ದಿ, ಚಿತ್ರಿಸುವಂತೆ ಹೇಳುವುದು.
6. ಇನ್ನೂ ಹೆಚ್ಚು ಪೇಂಟ್ ಅನ್ನು ಬಣ್ಣಕ್ಕೆ ಸೇರಿಸಿ, ಹಾಳೆಯ ಕೆಳಭಾಗವನ್ನು ಚಿತ್ರಿಸುವಂತೆ ಹೇಳುವುದು.

ಮೂರು ಪದರಗಳ ನಡುವೆ ಬಣ್ಣದಲ್ಲಿ ಇರುವ ವ್ಯತ್ಯಾಸವನ್ನು ಮತ್ತು ಅದನ್ನು ಹೇಗೆ ಅವರು ಉಂಟುಮಾಡಿದರು ಎಂದು ವಿವರಿಸುವಂತೆ ಮಕ್ಕಳಿಗೆ ಹೇಳುವುದು

ಚಟುವಟಿಕೆ 2

## ಎಲೆಗಳನ್ನು ಅಂಟಿಸುವುದು

### ಕಲಿಕಾ ಸಾಮಗ್ರಿಗಳು

ಕಾಗದದ ಹಾಳೆ, ಬೇರೆ ಬೇರೆ ಬಣ್ಣದ ಎಲೆಗಳು

### ಶಿಕ್ಷಕರ ಪೂರ್ವಸಿದ್ಧತೆ

1. ಒಂದಿಷ್ಟು ಬೇರೆ ಬೇರೆ ಗಾತ್ರದ ಮತ್ತು ಆಕಾರದ ಎಲೆಗಳನ್ನು ಕೆಲವು ದಿನಗಳವರೆಗೆ ಸಂಗ್ರಹಿಸುವುದು
2. ಮಕ್ಕಳನ್ನು ತರಗತಿಕೋಣೆಯ ಬೇರೆ ಬೇರೆ ಭಾಗಗಳಲ್ಲಿ ಕುಳಿತು ಕೆಲಸ ಮಾಡಲು ಅನುವಾಗುವಂತೆ ಕೂರಿಸುವುದು ಮತ್ತು ಅವರು ಕುಳಿತ ಕಡೆಗಳಲ್ಲಿ ಒಂದಿಷ್ಟು ಎಲೆಗಳನ್ನು ಗುಡ್ಡೆ ಹಾಕುವುದು
3. 2 ಮಕ್ಕಳಿಗೆ ಒಂದು ಹಾಳೆಯನ್ನು ಕೊಡುವುದು, ಅವರು ಬೇರೆ ಬೇರೆ ಗಾತ್ರದ 3 ಎಲೆಗಳನ್ನು ಆಯ್ಕೆ ಮಾಡಿಕೊಂಡು, ಹಾಳೆಯ ಮೇಲು ಭಾಗದಲ್ಲಿ ಅಂಟಿಸಬೇಕು.
4. ಆಮೇಲೆ ಬೇರೆ ಬೇರೆ ಬಣ್ಣದ 3 ಎಲೆಗಳನ್ನು ಆಯ್ಕೆ ಮಾಡಿಕೊಂಡು ಕೆಳಗಿನ ಅರ್ಧ ಭಾಗದಲ್ಲಿ ಅಂಟಿಸಬೇಕು.
5. ಮಕ್ಕಳು ಮೇಲಿನ ಮತ್ತು ಕೆಳಗಿನ ಅರ್ಧ ಭಾಗದಲ್ಲಿ ಅವರು ಮಾಡಿರುವ ವಿನ್ಯಾಸವನ್ನು ಮತ್ತು ಹೇಗೆ 3 ಎಲೆಗಳು ಭಿನ್ನವಾಗಿವೆ ಎಂಬುದನ್ನು ವರ್ಣಿಸುವುದು

ಚಟುವಟಿಕೆ 3

# ಬಾಹ್ಯರೇಖೆ ಚಿತ್ರಿಸುವುದು/ಟ್ರೇಸ್ ಮಾಡುವುದು

## ಕಲಿಕಾ ಸಾಮಗ್ರಿಗಳು

ದೊಡ್ಡ ದೊಡ್ಡ ಅಕ್ಷರಗಳಿರುವ ಪತ್ರಿಕೆಗಳ ಅಥವಾ ಜಾಹೀರಾತುಗಳ ಶೀರ್ಷಿಕೆಗಳು; ಕ್ರೆಯಾನ್‌ಗಳು ಅಥವಾ ಬಣ್ಣ

## ಶಿಕ್ಷಕರ ಪೂರ್ವಸಿದ್ಧತೆ

ಪ್ರತಿ ಮಗುವಿಗೂ ಒಂದೊಂದು ಶೀರ್ಷಿಕೆ/ಜಾಹೀರಾತು ದೊರೆಯುವಂತೆ ಸಾಕಷ್ಟು ಪತ್ರಿಕೆ ಅಥವಾ ಜಾಹೀರಾತುಗಳನ್ನು ಕತ್ತರಿಸಿ, ಇಟ್ಟುಕೊಳ್ಳುವುದು.

## ಸೂಚನೆಗಳು

1. ಮಕ್ಕಳಿಗೆ ಯಾವುದಾದರೂ ಎರಡು ಬಣ್ಣದ ಪೆನ್ಸಿಲ್‌ಗಳನ್ನು ಆಯ್ಕೆ ಮಾಡಿಕೊಂಡು, ಮುದ್ರಿತ ಅಕ್ಷರಗಳ ಬಾಹ್ಯರೇಖೆಯನ್ನು ಚಿತ್ರಿಸಿ, ಅಂದರೆ ಟ್ರೇಸ್ ಮಾಡಿ, ಅಕ್ಷರಗಳ ಒಳಗಿನ ಜಾಗಕ್ಕೆ ಬಣ್ಣ ತುಂಬಿ, ಅದು ಬಹುವರ್ಣದಿಂದ ಕಾಣುವಂತೆ ಮಾಡಲು ತಿಳಿಸುವುದು.
2. ಬಣ್ಣದ ಪೆನ್ಸಿಲ್ ಅಕ್ಷರಗಳನ್ನು ಮುಟ್ಟದೇ ಇರುವ ರೀತಿಯಲ್ಲಿ, ಅಕ್ಷರಗಳ ಹೊರಅಂಚಿನ ಮೇಲೆ ಗೆರೆ ಎಳೆದು, ಬಾಹ್ಯರೇಖೆಯನ್ನು ಚಿತ್ರಿಸಬೇಕು ಎಂದು ಮಕ್ಕಳಿಗೆ ವಿವರಿಸುವುದು.
3. ಮಕ್ಕಳು ಮಾಡಿದ ಕೆಲಸಕ್ಕೆ ಹೆಸರು ನೀಡಿ, ಅವನ್ನು ನೇತುಹಾಕುವುದು.

### ಚಟುವಟಿಕೆ 1

## ನಗರವನ್ನು ಗಲೀಜು ಮಾಡುವುದು

1. ಮಕ್ಕಳನ್ನು ತರಗತಿಕೋಣೆಯಲ್ಲಿ ದೊಡ್ಡ ವೃತ್ತಾಕಾರದಲ್ಲಿ ನಿಲ್ಲಿಸಿ, ನೀವೂ ಮಕ್ಕಳೊಂದಿಗೆ ವೃತ್ತದಲ್ಲಿ ನಿಲ್ಲುವುದು. ವೃತ್ತದ ಒಳಗಿನ ಜಾಗವು ನಗರ/ಪಟ್ಟಣ/ಹಳ್ಳಿ ಎಂದು ಹೇಳುವುದು.
2. ಜನರು ನಮ್ಮ ಹಳ್ಳಿಯನ್ನು ಅಥವಾ ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಹೇಗೆ ಹಲವಾರು ರೀತಿಯಲ್ಲಿ ಗಲೀಜು ಜಾಗವನ್ನಾಗಿ ಮಾಡುತ್ತಾರೆ ಎಂಬುದನ್ನು ಈಗ ಮಕ್ಕಳು ಅಭಿನಯಿಸಿ ತೋರಿಸಬೇಕು ಎಂದು ಅವರಿಗೆ ವಿವರಿಸುವುದು. ಸುತ್ತಮುತ್ತಲಿನಲ್ಲಿ ಏನೇನು ಕೊಳಕು ವಸ್ತುಗಳು ಕಾಣುತ್ತವೆ ಎಂದು ಮಕ್ಕಳು ಆಲೋಚಿಸಿ, ಆ ವಸ್ತುಗಳು ಅಲ್ಲಿ ಹೇಗೆ ಬಿದ್ದವು ಎಂಬುದನ್ನು ಅಭಿನಯಿಸಿ ತೋರಿಸುತ್ತ ಮಾಡಬೇಕು, ಅಂದರೆ ಆ ವಸ್ತುಗಳನ್ನು ಮಕ್ಕಳು ವೃತ್ತದೊಳಗೆ ಎಸೆಯಬೇಕು.
3. ಮೊದಲನೇ ಸುತ್ತು ಕಾಗದದ ಚೂರುಗಳೊಂದಿಗೆ ಶುರುವಾಗುತ್ತದೆ. ನೀವು ಜಾಗವನ್ನು ಗಲೀಜು ಮಾಡುವುದನ್ನು ತೋರಿಸಿ ಎಂದಾಗ, ಕಾಗದವನ್ನು ಹರಿದು, ಚೂರುಗಳನ್ನು ವೃತ್ತದೊಳಗೆ ಹಾಕುತ್ತ ಅಭಿನಯಿಸಬೇಕು ಎಂದು ಮಕ್ಕಳಿಗೆ ಹೇಳುವುದು.
4. ಎರಡನೇ ಸುತ್ತು ಪ್ಲಾಸ್ಟಿಕ್ ಬಾಟಲಿಗಳು, ನೀವು ಜಾಗವನ್ನು ಗಲೀಜು ಮಾಡುವುದನ್ನು ತೋರಿಸಿ ಎಂದಾಗ, ಮಕ್ಕಳು ಪ್ಲಾಸ್ಟಿಕ್ ಬಾಟಲಿಗಳನ್ನು ನಜ್ಜುಗುಜ್ಜು ಮಾಡಿ, ವೃತ್ತದೊಳಗೆ ಎಸೆಯುತ್ತ ಅಭಿನಯಿಸಬೇಕು ಎಂದು ಹೇಳುವುದು.
5. ಮೂರನೇ ಸುತ್ತು ಕೊಳಕು ನೀರು, ನೀವು ಜಾಗವನ್ನು ಗಲೀಜು ಮಾಡುವುದನ್ನು ತೋರಿಸಿ ಎಂದಾಗ, ಮಕ್ಕಳು ಒಂದು ಬಕೆಟ್ ಕೊಳಕು ನೀರನ್ನು ತೆಗೆದುಕೊಂಡು, ವೃತ್ತದೊಳಗೆ ಹಾಕುತ್ತ ಅಭಿನಯಿಸಬೇಕು ಎಂದು ಹೇಳುವುದು.
6. ನಾಲ್ಕನೇ ಸುತ್ತಿನಲ್ಲಿ, ಮಕ್ಕಳು ಹಸುವಿನ ಸಗಣಿಯನ್ನು ವೃತ್ತದೊಳಗೆ ಎಸೆದು ಅಥವಾ ವೃತ್ತದೊಳಗೆ ಕೂತು ಮೂತ್ರ ಮಾಡುತ್ತ ಗಲೀಜು ಮಾಡುವ ಅಭಿನಯ ಮಾಡುವುದು.
7. ಐದನೇ ಸುತ್ತಿನಲ್ಲಿ, ಮಕ್ಕಳು ಬಾಳೆಹಣ್ಣನ್ನು ತಿನ್ನುತ್ತ, ಸಿಪ್ಪೆಯನ್ನು ವೃತ್ತದೊಳಗೆ ಎಸೆಯುವ ಅಭಿನಯ ಮಾಡುವುದು.
8. ಆರನೇ ಸುತ್ತಿನಲ್ಲಿ ಮಕ್ಕಳು ಏನಾದರೂ ತಿಂದ ನಂತರ, ಆಹಾರದ/ಪ್ಲಾಸ್ಟಿಕ್ ಕವರುಗಳನ್ನು ಹರಿದು ವೃತ್ತದೊಳಗೆ ಎಸೆಯುವ ಅಭಿನಯ ಮಾಡುವುದು.
9. ಏಳನೇ ಸುತ್ತಿನಲ್ಲಿ ಮಕ್ಕಳು ನೆಲವನ್ನು ಗುಡಿಸಿ, ಮನೆಯೊಳಗಿನ ಕಸವನ್ನು ಒಟ್ಟುಗೂಡಿಸಿ, ಅದನ್ನು ವೃತ್ತದ ಒಳಗೆ ಎಸೆಯುವುದು.
10. ಕೊನೆಯ ಸುತ್ತಿನಲ್ಲಿ ಶಿಕ್ಷಕರು ಜಾಗವನ್ನು ಗಲೀಜು ಮಾಡುವ ಇನ್ನೂ ಹಲವಾರು ವಿಧಾನಗಳ ಕುರಿತು ಆಲೋಚಿಸುವ ಅವಕಾಶವನ್ನು ಮಕ್ಕಳಿಗೆ ನೀಡುವುದು.

### ಚಟುವಟಿಕೆ 2

## ನಡೆ ಮತ್ತು ನಿಲ್ಲು (ವಾಕ್ ಆಂಡ್ ಫ್ರೀಜ್) – ಗಲೀಜು ನಗರದ ನಡುವೆ ನಡೆದಾಡುವುದು

**ಕಲಿಕಾ ಸಾಮಗ್ರಿಗಳು:** ಸಂಗೀತ, ಮ್ಯೂಸಿಕ್ ಸಿಸ್ಟಮ್

### ಸೂಚನೆಗಳು

1. ಮಕ್ಕಳನ್ನು ತರಗತಿಕೋಣೆಯಲ್ಲಿ ವೃತ್ತಾಕಾರವಾಗಿ ನಿಲ್ಲಿಸುವುದು. ಸಂಗೀತವನ್ನು ಹಾಕುವುದು. ಮೊದಲ ಸುತ್ತಿನಲ್ಲಿ, ಸಂಗೀತವನ್ನು ಹಾಕಿದಾಗ ಮಕ್ಕಳು ತರಗತಿಕೋಣೆಯಲ್ಲಿ ವೃತ್ತದ ಹೊರಗೆ ಮಾತ್ರವೇ ನಡೆಯಬೇಕು (ಮಕ್ಕಳು ಒಬ್ಬರನ್ನೊಬ್ಬರು ತಳ್ಳುವುದು, ಜಗ್ಗುವುದು ಇತ್ಯಾದಿ ಮಾಡಬಾರದು) ಸಂಗೀತವು ಶುರುವಾದಾಗ ಮಕ್ಕಳು ವೃತ್ತದ ಹೊರಗೆ ನಡೆಯುತ್ತಿರಬೇಕು ಮತ್ತು ಸಂಗೀತವು ನಿಂತಾಗ ಮಕ್ಕಳು ನಿಂತ ಜಾಗದಲ್ಲಿಯೇ ಅಲ್ಲಾಡದೇ ನಿಲ್ಲಬೇಕು, ಅಂದರೆ ಫ್ರೀಜ್ ಆಗಬೇಕು.
2. ಈಗ ಮುಂದಿನ ಸುತ್ತು – ವೃತ್ತದ ಒಳಗಿನದು 'ಗಲೀಜು ನಗರ' ಎಂದು ಭಾವಿಸುವುದು. ಮಕ್ಕಳು 'ಗಲೀಜು ವೃತ್ತ/ನಗರ'ದ ಒಳಗೆ ಜಾಗ ಮಾಡಿಕೊಂಡು ನಡೆಯಬೇಕು ಎಂದು ತಿಳಿಸುವುದು. ಅವರು ಈಗ 'ನಡೆ ಮತ್ತು ನಿಲ್ಲು' (ವಾಕ್ ಆಂಡ್ ಫ್ರೀಜ್) ಚಟುವಟಿಕೆಯನ್ನು ವೃತ್ತದ ಒಳಗೆ ಮಾಡಬೇಕು, ಒಳಗಿನ ಸ್ಥಳದಲ್ಲಿ ನಡೆಯುವಾಗ ಅಷ್ಟು ಗಲೀಜಾದ ಸ್ಥಳದಲ್ಲಿ ಹೇಗೆ ನಡೆಯುತ್ತೇವೆ ಎಂಬುದನ್ನು ಅಭಿನಯಿಸುತ್ತ ನಡೆಯಬೇಕು ಎಂದು ತಿಳಿಸುವುದು.

ಚಟುವಟಿಕೆ 2

## ನಡೆ ಮತ್ತು ನಿಲ್ಲು (ವಾಕ್ ಆಂಡ್ ಫ್ರೀಜ್) – ಗಲೀಜು ನಗರದ ನಡುವೆ ನಡೆದಾಡುವುದು

3. ಸಂಗೀತವನ್ನು ಹಾಕುವುದು ಮತ್ತು ಅದು ನಿಂತಾಗ ಮಕ್ಕಳು ಅವರು ಎಲ್ಲಿ ನಡೆಯುತ್ತಿದ್ದಾರೋ ಅಲ್ಲಿಯೇ ನಿಲ್ಲಲು ಹೇಳುವುದು, ಹಾಗೆ ನಿಲ್ಲುವಾಗ ಅವರು ಈ ಕೆಳಗಿನ ವಿವಿಧ ಸನ್ನಿವೇಶಗಳಲ್ಲಿ ಅವರು ಹೇಗೆ ಅಭಿನಯಿಸುತ್ತಾರೆ ಎಂಬುದನ್ನು ತೋರಿಸಬೇಕು ಎಂದು ಹೇಳುವುದು.
   - **ಸನ್ನಿವೇಶ 1:** ಇಡೀ ಸ್ಥಳವು ಕಾಗದದಿಂದ ತುಂಬಿಹೋಗಿದೆ ಎಂದು ಊಹೆ ಮಾಡಿಕೊಳ್ಳಬೇಕು. ಅವರು ಫ್ರೀಜ್ ಆಗಿ ನಿಂತಾಗ, ಅವರು ಅಂತಹ ಜಾಗದಲ್ಲಿ ನಡೆಯುತ್ತಿದ್ದಾರೆ ಎಂಬುದನ್ನು ನಟಿಸಬೇಕು
   - **ಸನ್ನಿವೇಶ 2:** ಈಗ ಮಕ್ಕಳು ಇಡೀ ಜಾಗವು ಒಡೆದ ಗಾಜಿನ ಚೂರುಗಳಿಂದ ತುಂಬಿಹೋಗಿದೆ ಎಂದು ಭಾವಿಸಿ, ಅದರಲ್ಲಿ ನಡೆಯುವ ಹಾಗೆ ನಟಿಸಬೇಕು ಮತ್ತು ಅವರಿಗೆ ಏನು ಅನ್ನಿಸುತ್ತದೆ ಎಂದು ಹೇಳುವಂತೆ ತಿಳಿಸುವುದು. ಅವರಿಗೆ ತಮ್ಮ ಕಾಲು, ಕೈ ಮತ್ತು ಮುಖವನ್ನು ಬಳಸಿಕೊಂಡು, ಅಭಿನಯಿಸುವಂತೆ ಪ್ರೋತ್ಸಾಹಿಸುವುದು.
   - **ಸನ್ನಿವೇಶ 3:** ಇಡೀ ಜಾಗವು ಸಗಣಿ, ಜನರ ಮಲಮೂತ್ರ, ಗೋಡೆಯ ಮೇಲೆ ಮೂತ್ರದಿಂದ ತುಂಬಿಹೋಗಿದೆ ಎಂದು ಕಲ್ಪನೆ ಮಾಡಿಕೊಂಡು, ಮಕ್ಕಳು ಅಂತಹ ಸ್ಥಳದಲ್ಲಿ ನಡೆಯುವಾಗ ಹೇಗೆ ನಡೆಯುತ್ತೇವೆ ಎಂಬುದನ್ನು ಅಭಿನಯಿಸುತ್ತ ನಡೆಯಲು ಹೇಳುವುದು.
   - **ಸನ್ನಿವೇಶ 4:** ಇಡೀ ಸ್ಥಳದಲ್ಲಿ ಬಾಳೆಹಣ್ಣಿನ ಸಿಪ್ಪೆಯು ತುಂಬಿ ಹೋಗಿದೆ ಎಂದು ಕಲ್ಪಿಸಿಕೊಂಡು, ಅದಕ್ಕೆ ಅನುಗುಣವಾಗಿ ಅಭಿನಯಿಸುವಂತೆ ಹೇಳುವುದು
   - **ಸನ್ನಿವೇಶ 5:** ಇಡೀ ಇಡೀ ಸ್ಥಳವು ಕಸದ ಚೀಲಗಳಿಂದ ತುಂಬಿಹೋಗಿದ್ದು, ಕೊಳೆತ ವಾಸನೆ ಬರುತ್ತಿದೆ ಮತ್ತು ಆ ಚೀಲಗಳಿಂದ ರಸ ಅಂದರೆ ತ್ಯಾಜ್ಯದ್ರವವು ಸೋರುತ್ತಿದೆ ಎಂಬುದನ್ನು ಕಲ್ಪಿಸಿಕೊಂಡು, ಅದರಲ್ಲಿ ನಡೆಯುತ್ತಿರುವಂತೆ ಅಭಿನಯಿಸುವುದು.

ಪ್ರತಿಯೊಂದು ಸನ್ನಿವೇಶ ಪೂರ್ಣಗೊಂಡ ನಂತರ, ಮಕ್ಕಳು ಸಂಗೀತದ ಜೊತೆ ನಡೆಯುವುದು ಮತ್ತು ಸಂಗೀತ ನಿಂತಾಗ ನಿಲ್ಲುವುದು ಮಾಡಬೇಕು ಎನ್ನುವುದು ನೆನಪಿಡುವುದು. ಪ್ರತಿಯೊಂದು ಸನ್ನಿವೇಶದ ನಂತರ ಮಕ್ಕಳಿಗೆ ಏನು ಅನ್ನಿಸಿತು ಮತ್ತು ಸ್ಥಳವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಅವರು ಏನು ಮಾಡಬೇಕು ಎನ್ನುವುದನ್ನು ಚರ್ಚಿಸುವುದು

ಚಟುವಟಿಕೆ 3

## ನೆಲವನ್ನು ಸ್ವಚ್ಛಪಡಿಸುವುದು

**ಕಲಿಕಾ ಸಾಮಗ್ರಿಗಳು:** ಮುದ್ದೆಮುದ್ದೆಯಾದ ಕಾಗದ

### ಸೂಚನೆಗಳು

1. ಕಾಗದವನ್ನು ಚೂರು ಚೂರು ಮಾಡಿ, ಆಮೇಲೆ ಮುದ್ದೆಮುದ್ದೆ ಮಾಡಿ ಚಿಕ್ಕ ಕಾಗದದ ಉಂಡೆಗಳನ್ನಾಗಿ ಮಾಡಿ, ಅವನ್ನು ತರಗತಿಕೋಣೆಯಲ್ಲಿ ಎಲ್ಲೆಂದರಲ್ಲಿ ಬಿಸಾಕುವುದು.
2. 5 ಮಕ್ಕಳ ಒಂದು ತಂಡವನ್ನಾಗಿ ಮಾಡಿ, ಪ್ರತೀ ತಂಡದಿಂದ ಒಬ್ಬರನ್ನು ಮಧ್ಯದಲ್ಲಿ ನಿಲ್ಲಿಸುವುದು.
3. ಚಟುವಟಿಕೆ ಆರಂಭಿಸಲು ಸೀಟಿಯನ್ನು ಬಳಸುವುದು. ನೀವು ಸೀಟಿಯನ್ನು ಊದಿದೊಡನೆ, ಮಧ್ಯದಲ್ಲಿ ನಿಂತಿರುವ 5 ಮಕ್ಕಳು ಬೇಗನೆ ಸುತ್ತ ಓಡಾಡಿ, ಸಾಧ್ಯವಿದ್ದಷ್ಟು ಕಾಗದದ ಉಂಡೆಗಳನ್ನು ಹೆಕ್ಕಬೇಕು.
4. ಯಾರು ಹೆಚ್ಚು ಸಂಖ್ಯೆಯ ಕಾಗದದ ಉಂಡೆಗಳನ್ನು ಹೆಕ್ಕಿ, ನೆಲವನ್ನು ಸ್ವಚ್ಛಪಡಿಸುತ್ತಾರೋ ಅವರು ತಮ್ಮ ತಂಡಕ್ಕೆ ಒಂದು ಅಂಕವನ್ನು ಗಳಿಸುತ್ತಾರೆ.

**ಚಟುವಟಿಕೆ 1**

## ಟಿಪ್ಪಿ–ಟಿಪ್ಪಿ ಟ್ಯಾಪ್ – ನಿಂಗೆ ಯಾವ ಬಣ್ಣ ಬೇಕು?



1. ಒಂದು ಮಗುವನ್ನು ನಾಯಕ ಎಂದು ಆಯ್ಕೆ ಮಾಡುವುದು ಮತ್ತು ಇನ್ನುಳಿದ ಮಕ್ಕಳು ಮೈದಾನದಲ್ಲಿ ಅಲ್ಲಿ ಇಲ್ಲಿ ನಿಲ್ಲವುದು.
2. ನಾಯಕ 'ಟಿಪ್ಪಿ–ಟಿಪ್ಪಿ ಟ್ಯಾಪ್' ಎಂದು ಹೇಳಬೇಕು; ಉಳಿದ ಮಕ್ಕಳು 'ನಿಂಗೆ ಯಾವ ಬಣ್ಣ ಬೇಕು?' ಎಂದು ಕೇಳಬೇಕು.
3. ನಾಯಕ: 'ನಂಗೆ ________ ಬಣ್ಣ ಬೇಕು.' (ಯಾವುದಾದರೂ ಒಂದು ಬಣ್ಣವನ್ನು ಹೇಳಬೇಕು)
4. 'ನಾಯಕ' ಆಯ್ಕೆ ಮಾಡಿಕೊಂಡ ಬಣ್ಣದ ಯಾವುದಾದರೂ ಒಂದು ವಸ್ತುವನ್ನು ಹುಡುಕಲು ಪ್ರಯತ್ನಿಸಬೇಕು ಮತ್ತು ನಾಯಕ ಅವರನ್ನು ಹಿಡಿಯಲು ಪ್ರಯತ್ನಿಸಬೇಕು. ಆ ಬಣ್ಣದ ಯಾವುದಾದರೂ ವಸ್ತುವನ್ನು ಕಂಡುಹಿಡಿದು, ಅದನ್ನು ಕೈಗೆತ್ತಿಕೊಳ್ಳುವ ಮೊದಲೇ ನಾಯಕನ ಕೈಗೆ ಸಿಕ್ಕಿಬೀಳುವ ಮಗು 'ಔಟ್' ಆದಂತೆ ಮತ್ತು ಮುಂದಿನ ನಾಯಕ ಆಗುವುದು.

## ಚಟುವಟಿಕೆ 2: ಬಣ್ಣಗಳ ಸಂಗೀತ

**ಕಲಿಕಾ ಸಾಮಗ್ರಿಗಳು:** 15 ಅಥವಾ 18 ಕುರ್ಚಿಗಳನ್ನು ವೃತ್ತಾಕಾರವಾಗಿ ಇಡುವುದು ಅಥವಾ ಸೀಮೆಸುಣ್ಣದಿಂದ ವೃತ್ತವನ್ನು ಎಳೆಯುವುದು. 3 ಬೇರೆ ಬೇರೆ ಬಣ್ಣಗಳ ಸ್ಟಿಕರ್‌ಗಳು. ಕುರ್ಚಿಗಳ ಮೇಲೆ ಅಥವಾ ನೆಲದ ಮೇಲೆ (ನೀಲಿ, ಕೆಂಪು ಮತ್ತು ಹಳದಿ) ಬಣ್ಣಗಳ ಸ್ಟಿಕರ್‌ಗಳನ್ನು ಅಂಟಿಸುವುದು

### ಸೂಚನೆಗಳು

1. ಬಣ್ಣಗಳ ಸಂಗೀತ ಆಟವನ್ನು ಆಡುವುದು (ಮ್ಯುಸಿಕಲ್ ಚೇರ್ ಹಾಗೆಯೇ)
2. 2 ಅಥವಾ 3 ಮಕ್ಕಳು ಒಂದು ಕುರ್ಚಿಯಲ್ಲಿ ಕೂರುವುದು ಅಥವಾ ನೆಲದ ಮೇಲೆ ಇರುವ ಸ್ಟಿಕರ್ ಬಳಿ ನಿಲ್ಲುವುದು ಎಂದು ಮೊದಲೇ ನಿರ್ಧರಿಸಿ, ಮಕ್ಕಳಿಗೆ ತಿಳಿಸುವುದು.
3. ಮಕ್ಕಳು ಓಡುವಾಗ ಚಪ್ಪಾಳೆ ಹಾಕಲು ಶುರು ಮಾಡಿ, ಚಪ್ಪಾಳೆ ಹೊಡೆಯುವುದನ್ನು ಅಥವಾ ಸಂಗೀತ ಹಾಕಿರುವುದನ್ನು ನಿಲ್ಲಿಸಿ, ಮೂರರಲ್ಲಿ ಯಾವುದಾದರೂ ಒಂದು ಬಣ್ಣದ ಹೆಸರನ್ನು ಜೋರಾಗಿ ಹೇಳುವುದು, ಉದಾ: 'ಹಸಿರು'.
4. ಆಗ ಮಕ್ಕಳು ಓಡಿ ಬಂದು, ಆ ಬಣ್ಣದ ಕುರ್ಚಿಯ ಮೇಲೆ ಕೂರುವುದು ಅಥವಾ ನೆಲದ ಮೇಲೆ ಇರುವ ಆ ಬಣ್ಣದ ಸ್ಟಿಕರ್ ಬಳಿ ನಿಲ್ಲುವುದು.
5. ಯಾವುದಾದರೂ ಮಗುವಿಗೆ ತಕ್ಷಣವೇ 'ಹಸಿರು' ಸ್ಟಿಕರ್ ಬಳಿ ಜಾಗ ಸಿಗದಿದ್ದರೆ ಅಥವಾ ಬೇರೆ ಬಣ್ಣದ ಸ್ಟಿಕರ್ ಬಳಿ ನಿಂತರೆ ಅಥವಾ ಕೂತರೆ, ಆ ಮಗು ಆಟದಿಂದ ಔಟ್ ಆಗುವುದು.
6. ಆಮೇಲೆ ಮತ್ತೆ ಚಪ್ಪಾಳೆ ಅಥವಾ ಸಂಗೀತವನ್ನು ಶುರು ಮಾಡಿ, ಇನ್ನೊಂದು ಸುತ್ತ ಆಟವನ್ನು ಆಡಿ, ಈಗ ಇನ್ನೊಂದು ಬಣ್ಣವನ್ನು ಆಯ್ಕೆ ಮಾಡಿಕೊಳ್ಳಿ. ಹೀಗೆಯೇ ಆಟವನ್ನು ಪುನರಾವರ್ತಿಸುತ್ತ, ಕಡಿಮೆ ಸಂಖ್ಯೆಯ ಮಕ್ಕಳು ಉಳಿಯುವವರೆಗೂ ಆಡುವುದು.

## ಚಟುವಟಿಕೆ 3: ಕಳೆದು ಹೋದ ಪತ್ರ

**ಕಲಿಕಾ ಸಾಮಗ್ರಿಗಳು:** ಒಂದು ಕರವಸ್ತ್ರ

### ಸೂಚನೆಗಳು

ಮಕ್ಕಳು ವೃತ್ತಾಕಾರವಾಗಿ ಕುಳಿತು ಈ ಶಿಶುಗೀತೆಯನ್ನು ಹಾಡುತ್ತಿರುವುದು ಮತ್ತು ಒಂದು ಮಗು ಕೈಯಲ್ಲೊಂದು ಕರವಸ್ತ್ರ ಹಿಡಿದು ಓಡುತ್ತಿರಬೇಕು. ಮಗು ಸದ್ದು ಮಾಡದೇ, ಕರವಸ್ತ್ರವನ್ನು ಮೆಲ್ಲಗೆ ಯಾವುದಾದರೂ ಮಗುವಿನ ಹಿಂದೆ ಬೀಳಿಸಬೇಕು. ಬೆನ್ನಿನ ಹಿಂದೆ ಕರವಸ್ತ್ರ ಬಿದ್ದಿರುವ ಮಗು ಎದ್ದು ನಿಂತು, ಮೊದಲ ಮಗುವನ್ನು ಬೆನ್ನಟ್ಟಿ ಹೋಗಬೇಕು, ಮೊದಲ ಮಗು ಎರಡನೇ ಮಗು ಎದ್ದುನಿಂತು ಖಾಲಿಯಾಗಿರುವ ಜಾಗದಲ್ಲಿ ಕುಳಿತುಕೊಳ್ಳಲು ಪ್ರಯತ್ನಿಸಬೇಕು. ಎರಡನೇ ಮಗು ಮೊದಲನೇ ಮಗುವನ್ನು ಹಿಡಿದರೆ, ಮೊದಲ ಮಗು ಮತ್ತೆ ಕರವಸ್ತ್ರ ಹಿಡಿದು ಓಡಬೇಕು.

ಮಕ್ಕಳಿಗೆ ಕೆಳಗಿನ ಶಿಶುಗೀತೆ ಹೇಳಿಕೊಡುವುದು.

*ನಾನು ಗೆಳತಿಗೊಂದು ಪತ್ರ ಬರೆದೆನು*
*ಎಲ್ಲೋ ಕಳೆಯಿತದು ದಾರಿಯೊಳು*
*ಬೇರೆ ಯಾರೋ ಬಂದರು,*
*ಪತ್ರ ತೆಗೆದುಕೊಂಡರು,*
*ಜೇಬೊಳಗೆ ಇಟ್ಟುಕೊಂಡರು,*
*ಅದು ನೀನೇನಾ? ಅದು ನೀನೇನಾ?*

# ನನ್ನ ಊರನ್ನು ಸ್ವಚ್ಛವಾಗಿಟ್ಟುಕೊಳ್ಳುವುದು

## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

## ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು

1. Touch your shoulder
2. Touch your knees
3. Touch your head

1. Touch your shoulder
2. Touch your knees
3. Touch your head

1. Touch your shoulder
2. Touch your knees
3. Touch your head

1. Touch your neck
2. Touch your back
3. Touch your stomach

1. Touch your neck
2. Touch your back
3. Touch your stomach

1. Touch your neck
2. Touch your back
3. Touch your stomach

Say
gesture
model

1. Touch your shoulder
2. Touch your knees
3. Touch your head
4. Touch your neck
5. Touch your back
6. Touch your stomach

1. Touch your stomach
2. Touch your back
3. Touch your neck
4. Touch your head
5. Touch your knees
6. Touch your shoulder

## ನನ್ನ ನೆರೆಹೊರೆ ಮತ್ತು ನನ್ನ ಊರು

# ಬಣ್ಣಗಳೊಂದಿಗೆ ಆಡೋಣ

# ಕಲಿಕಾ ಫಲಿತಗಳು

## ಬಣ್ಣಗಳೊಂದಿಗೆ ಆಡೋಣ

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1 **ಗುರುತಿಸುವಿಕೆ:** 6 ಬಣ್ಣಗಳನ್ನು ಗುರುತಿಸಿ, ಹೆಸರಿಸುವುದು. (ಕಪ್ಪು, ಬಿಳಿ, ಕೆಂಪು, ನೀಲಿ, ಹಸಿರು ಮತ್ತು ಹಳದಿ) | 1 **ಗುರುತಿಸುವಿಕೆ:** 6 ಬಣ್ಣಗಳನ್ನು ಗುರುತಿಸಿ, ಹೆಸರಿಸುವುದು. (ಕಪ್ಪು, ಬಿಳಿ, ಕೆಂಪು, ನೀಲಿ, ಹಸಿರು ಮತ್ತು ಹಳದಿ) | 1 **ಗುರುತಿಸುವಿಕೆ:** ಬಣ್ಣ ಮತ್ತು ಆಕಾರ ಅಥವಾ ಗಾತ್ರದಂತಹ 2 ಆಯಾಮಗಳನ್ನು ಆಧರಿಸಿ, ವಸ್ತುಗಳನ್ನು ಹೋಲಿಸಿ, ವರ್ಗೀಕರಿಸುವುದು. |
| 2 **ವರ್ಗೀಕರಣ:** ವಸ್ತುಗಳನ್ನು ಬಣ್ಣದ ಆಧಾರದ ಮೇಲೆ ಪ್ರತ್ಯೇಕಿಸಿ, ವರ್ಗೀಕರಿಸುವುದು. | 2 **ವರ್ಗೀಕರಣ:** ವಸ್ತುಗಳನ್ನು ಬಣ್ಣದ ಆಧಾರದ ಮೇಲೆ ಪ್ರತ್ಯೇಕಿಸಿ, ವರ್ಗೀಕರಿಸುವುದು. | 2 **ಅನುಕ್ರಮವಾಗಿಡುವುದು:** ಬಣ್ಣಗಳ ಛಾಯೆಗಳನ್ನು ಹೋಲಿಕೆ ಮಾಡಿ, ಅವುಗಳನ್ನು ತಿಳಿ ಬಣ್ಣದ ಪ್ರಮಾಣದ ಮೇಲೆ ಅಥವಾ ಗಾಢತೆಯ ಪ್ರಮಾಣದ ಆಧಾರದ ಮೇಲೆ 5 ಹಂತಗಳವರೆಗೆ ಕ್ರಮವಾಗಿ ಜೋಡಿಸುವುದು. |
| 3 **ವಿನ್ಯಾಸ ಮಾಡುವುದು:** 2–3 ಬಣ್ಣಗಳನ್ನು ಬಳಸಿಕೊಂಡು, ಒಂದು ಸರಳವಾದ ವಿನ್ಯಾಸವನ್ನು ನಕಲು ಅಥವಾ ಮರುಪ್ರತಿ ಮಾಡುವುದು. (ಕೆಂಪು, ನೀಲಿ, ಹಸಿರು – ಕೆಂಪು, ನೀಲಿ, ಹಸಿರು) | 3 **ಅನುಕ್ರಮವಾಗಿಡುವುದು:** ಬಣ್ಣಗಳ ಛಾಯೆಗಳನ್ನು ಹೋಲಿಕೆ ಮಾಡಿ, ಅವುಗಳನ್ನು ತಿಳಿ ಬಣ್ಣದ ಪ್ರಮಾಣದ ಮೇಲೆ ಅಥವಾ ಗಾಢತೆಯ ಪ್ರಮಾಣದ ಆಧಾರದ ಮೇಲೆ 3 ಹಂತಗಳವರೆಗೆ ಕ್ರಮವಾಗಿ ಜೋಡಿಸುವುದು ಮತ್ತು ಸೂಕ್ತವಾದ ಭಾಷೆಯನ್ನು ಬಳಸಿಕೊಂಡು ವ್ಯತ್ಯಾಸವನ್ನು ವಿವರಿಸುವುದು. | 3 **ವಿನ್ಯಾಸ ಮಾಡುವುದು:** ಬಣ್ಣ ಮತ್ತು ಇನ್ನೊಂದು ಆಯಾಮವನ್ನು ಬಳಸಿಕೊಂಡು, ಒಂದು ಮಿಶ್ರ ಕ್ರಮದಲ್ಲಿ ವಿನ್ಯಾಸವೊಂದನ್ನು ರಚಿಸಿ, ಪುನರಾವರ್ತಿಸುವುದು. |
| 4 **ಅನ್ವಯ:** ಸಾಮಾನ್ಯ ವಸ್ತುಗಳ ಬಣ್ಣಗಳನ್ನು ಅರಿಯುವರು– ಉದಾ: ಮರಗಳು, ಹುಲ್ಲು, ಬಾಳೆಹಣ್ಣು, ಕೂದಲು ಇತ್ಯಾದಿ. | 4 **ವಿನ್ಯಾಸ ಮಾಡುವುದು:** 3 ಬೇರೆಬೇರೆ ಬಣ್ಣಗಳನ್ನು ಬಳಸಿಕೊಂಡು, ಒಂದು ವಿನ್ಯಾಸವನ್ನು ರಚಿಸುವುದು ಮತು ಅದನ್ನು ವಿಸ್ತರಿಸುವುದು. (ವಿವಿಧ ಬಗೆಯ ಸಾಮಗ್ರಿಗಳನ್ನು ಬಳಸಿಕೊಂಡು) | 4 ಬಣ್ಣಗಳ ಸಂಯೋಜನೆಗಳ ಒಂದು ಕ್ರಮದಲ್ಲಿ ಗುಂಪಿಗೆ ಸೇರದ ಒಂದನ್ನು ಗುರುತಿಸುವುದು. |
| 5 ಬಣ್ಣವನ್ನು ಅಂದಾಜು ಮಾಡುವ ಪರಿಕಲ್ಪನೆಯನ್ನು ಬಳಸಿಕೊಂಡು ಸರಳವಾದ ಪಜಲ್‌ಗಳನ್ನು ಬಿಡಿಸುವುದು. | 5 **ಅನ್ವಯ:** ದೈನಂದಿನ ಬದುಕಿನಲ್ಲಿ ಬಣ್ಣವನ್ನು ಹೇಗೆ ಬಳಸಲಾಗುವುದು ಎಂಬುದನ್ನು ವಿವರಿಸುವುದು. ಉದಾ: ಸಮವಸ್ತ್ರಗಳು. | 5 ಒಂದು ಸರಳವಾದ ಕ್ರಮವನ್ನು ತಿರುವುಮುರುವು/ಉಲ್ಟಾ ಆಗಿಸುವುದು. ಉದಾ:–ಒಂದು ಕ್ರಮವನ್ನು ನೋಡಿ, ಅದನ್ನು ಅದರ ವಿರುದ್ಧ ಕ್ರಮದಲ್ಲಿ ಇಡಲು ಹೇಳುವುದು. |
| | | 6 ಇದಾದ ನಂತರ, ಮೊದಲು, ಮೇಲೆ ಇತ್ಯಾದಿ ಸೂಚನೆಗಳನ್ನು ಆಧರಿಸಿ ಒಂದು ಸರಳವಾದ ವಿನ್ಯಾಸವನ್ನು ರಚಿಸುವುದು. |
| | | 7 **ಅನ್ವಯ:** ದೈನಂದಿನ ಬದುಕಿನಲ್ಲಿ ಬಣ್ಣದ ವಿವಿಧ ಛಾಯೆಗಳನ್ನು ಹೇಗೆ ಬಳಸಲಾಗುವುದು ಎಂಬುದನ್ನು ವಿವರಿಸುವುದು. (ಉದಾ: ಪತ್ರಿಕೆಯಲ್ಲಿ ಯಾವ ಬಣ್ಣಗಳ ಸಂಯೋಜನೆಗಳನ್ನು ಬಳಸಿಕೊಳ್ಳುತ್ತಾರೆ?) |



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- **ಗುರುತಿಸುವಿಕೆ:** 6 ಬಣ್ಣಗಳನ್ನು ಗುರುತಿಸಿ, ಹೆಸರಿಸುವುದು. (ಕಪ್ಪು, ಬಿಳಿ, ಕೆಂಪು, ನೀಲಿ, ಹಸಿರು ಮತ್ತು ಹಳದಿ)
- **ವರ್ಗೀಕರಣ:** ವಸ್ತುಗಳನ್ನು ಬಣ್ಣದ ಆಧಾರದ ಮೇಲೆ ಪ್ರತ್ಯೇಕಿಸಿ, ವರ್ಗೀಕರಿಸುವುದು.
- **ಅನುಕ್ರಮವಾಗಿಡುವುದು:** ಬಣ್ಣಗಳ ಛಾಯೆಗಳನ್ನು ಹೋಲಿಕೆ ಮಾಡಿ, ಅವುಗಳನ್ನು ತಿಳಿ ಬಣ್ಣದ ಪ್ರಮಾಣದ ಮೇಲೆ ಅಥವಾ ಗಾಢತೆಯ ಪ್ರಮಾಣದ ಆಧಾರದ ಮೇಲೆ 3 ಹಂತಗಳವರೆಗೆ ಕ್ರಮವಾಗಿ ಜೋಡಿಸುವುದು ಮತ್ತು ಸೂಕ್ತವಾದ ಭಾಷೆಯನ್ನು ಬಳಸಿಕೊಂಡು ವ್ಯತ್ಯಾಸವನ್ನು ವಿವರಿಸುವುದು.
- **ವಿನ್ಯಾಸ ಮಾಡುವುದು:** 3 ಬೇರೆಬೇರೆ ಬಣ್ಣಗಳನ್ನು ಬಳಸಿಕೊಂಡು, ಒಂದು ವಿನ್ಯಾಸವನ್ನು ರಚಿಸುವುದು ಮತು ಅದನ್ನು ವಿಸ್ತರಿಸುವುದು. (ವಿವಿಧ ಬಗೆಯ ಸಾಮಗ್ರಿಗಳನ್ನು ಬಳಸಿಕೊಂಡು)
- **ಅನ್ವಯ:** ದೈನಂದಿನ ಬದುಕಿನಲ್ಲಿ ಬಣ್ಣವನ್ನು ಹೇಗೆ ಬಳಸಲಾಗುವುದು ಎಂಬುದನ್ನು ವಿವರಿಸುವುದು. ಉದಾ: ಸಮವಸ್ತ್ರಗಳು.

## ಸಿದ್ಧತಾ ಚಟುವಟಿಕೆ

**ಕಲಿಕಾ ಫಲಿತಗಳು:** 6 ಬಣ್ಣಗಳನ್ನು ಗುರುತಿಸಿ, ಹೆಸರಿಸುವುದು (ಕಪ್ಪು, ಬಿಳಿ, ಕೆಂಪು, ನೀಲಿ, ಹಸಿರು ಮತ್ತು ಹಳದಿ)

**ಕಲಿಕಾ ಸಾಮಗ್ರಿಗಳು:** ಖಾಲಿ ಕಾಗದ, ಕಪ್ಪುಗಳಲ್ಲಿ ಮಿಶ್ರ ಮಾಡಿದ ಜಲವರ್ಣ, ನೀರಿನ ಬಟ್ಟಲು, ಕುಂಚ ಅಥವಾ ಕ್ರೆಯಾನ್‌ಗಳು ಅಥವಾ ಸ್ಕೆಚ್‌ಪೆನ್ನುಗಳು. ಎಲ್ಲ 6 ಬಣ್ಣಗಳ, ಪ್ರತಿಯೊಂದರದ್ದು 3 ಬಣ್ಣದ ವಸ್ತುಗಳಿರುವ ಒಂದು ಚೀಲ. ಬಣ್ಣದ ಕಾರ್ಡುಗಳ ಸೆಟ್.

**ಶಿಕ್ಷಕರ ಪೂರ್ವಸಿದ್ಧತೆ:** ತರಗತಿಕೋಣೆಯಲ್ಲಿ ಮಕ್ಕಳಿಗಾಗಿ ಸ್ವಲ್ಪ ಜಾಗವನ್ನು ತೆರವುಗೊಳಿಸುವುದು. ಜಲವರ್ಣದ ಕೆಲಸ ಮಾಡಲು ನೆಲದ ಮೇಲೆ ಹಳೆಯ ಪತ್ರಿಕೆಗಳನ್ನು ಹರಡುವುದು.

### ಸೂಚನೆಗಳು

1. ಮಕ್ಕಳಿಗೆ ಸೃಜನಶೀಲ ಕೆಲಸ ಮಾಡುವಾಗ ಮುಕ್ತವಾಗಿ ಬಣ್ಣ ಹಚ್ಚಲು ಅವಕಾಶ ಕೊಡುವುದು. ಖಾಲಿ ಹಾಳೆಯನ್ನು ಮತ್ತು ಜಲವರ್ಣವನ್ನು ಕೊಟ್ಟು, ಅವರಿಗೆ ಬಣ್ಣಗಳೊಂದಿಗೆ ಆಡಲು ಬಿಡುವುದು. ಅವರಿಗೆ ಇಷ್ಟವಾದ ಯಾವುದಾದರೂ ಬಣ್ಣದಲ್ಲಿ ಬೆರಳನ್ನು ಅದ್ದಿ ಅಥವಾ ಕುಂಚವನ್ನು ಅದ್ದಿ, ಮನಸ್ಸಿಗೆ ಬಂದ ಚಿತ್ರವನ್ನು ಬಿಡಿಸಲು ಅವಕಾಶ ಕೊಡುವುದು. ಮಕ್ಕಳಿಗೆ ಅವರು ಬಿಡಿಸಿದ್ದನ್ನು ವಿವರಿಸಲು ಅವಕಾಶ ಕೊಟ್ಟು, ಸಂಭಾಷಣೆಯ ನಡುವೆ ಮಕ್ಕಳಿಗೆ ಇದರಲ್ಲಿ ನಿಮಗೆ ಯಾವ ಬಣ್ಣಗಳು ಕಾಣುತ್ತಿವೆ ? ಅವನ್ನು ತೋರಿಸುವಿರಾ? ಅವು ಕಾಗದದ ಮೇಲೆ ಎಲ್ಲಿವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು. ಇದು ಮಕ್ಕಳಿಗೆ ಬಣ್ಣಗಳ ಹೆಸರಿನ ಕುರಿತು ಸ್ವಲ್ಪವಾದರೂ ಕಲ್ಪನೆ ಇದೆಯೇ ಮತ್ತು ಪ್ರಾಥಮಿಕ ಹಂತದ ಹೊಂದಾಣಿಕೆಯನ್ನಾದರೂ ಮಾಡಬಲ್ಲರೇ ಎಂಬುದನ್ನು ಅರಿಯಲು ಸಹಾಯಕವಾಗುತ್ತದೆ. ನಂತರ ಚಿತ್ರಗಳಿಗೆ ಹೆಸರು ನೀಡಿ ಅವುಗಳನ್ನು ತರಗತಿಯಲ್ಲಿ ಬೋರ್ಡ್ ಮೇಲೆ ಪ್ರದರ್ಶಿಸುವುದು.
2. ಮೊದಲಿಗೆ 2 ಬಣ್ಣಗಳ ಹೆಸರುಗಳನ್ನು ಪರಿಚಯಿಸುವುದು. ಕೆಂಪು ಮತ್ತು ಹಳದಿಯಿಂದ ಶುರು ಮಾಡುವುದು. ಈ ದಿನ ಬಣ್ಣಗಳ ಬಗ್ಗೆ ತಿಳಿದುಕೊಳ್ಳೋಣ ಎಂದು ಹೇಳುತ್ತಾ, ಬಣ್ಣದ ಕಾರ್ಡುಗಳನ್ನು ಬಳಸಿಕೊಂಡು, ಮಕ್ಕಳಿಗೆ ಈ ಬಣ್ಣಗಳ ಹೆಸರುಗಳು ಗೊತ್ತಿದೆಯೇ ಎಂದು ಕೇಳುವುದು. ಕೆಲವು ಮಕ್ಕಳು ಬಣ್ಣಗಳ ಹೆಸರುಗಳನ್ನು ಹೇಳಲು ಸಮರ್ಥರಿರಬಹುದು. ಮಕ್ಕಳಿಗೆ ಈ ಬಣ್ಣದ ಕಾರ್ಡ್‌ಗಳು ಕೆಂಪು ಮತ್ತು ಹಳದಿ ಎಂದು ಹೇಳಿ, ಅವರಿಗೆ ನೀವು ಹೇಳಿದ್ದನ್ನು ಪುನರಾವರ್ತಿಸಲು ತಿಳಿಸುವುದು. ಬಣ್ಣದ ಚೀಲವನ್ನು ಪರಿಚಯಿಸುವುದು ಮತ್ತು ಒಂದಾದ ನಂತರ ಒಂದು ಕೆಂಪು ಬಣ್ಣದ ವಸ್ತುಗಳನ್ನು ಹೊರತೆಗೆದು, ಹೊರಗೆ ತೆಗೆದ ವಸ್ತುವಿನ ಬಣ್ಣವನ್ನು ಹೇಳುವಂತೆ ಮಕ್ಕಳಿಗೆ ತಿಳಿಸುವುದು. ಹೀಗೆಯೇ ಹಳದಿ ಬಣ್ಣದ ವಸ್ತುಗಳಿಗೂ ಮಾಡುವುದು.
3. ಈಗ ಮಕ್ಕಳಿಗೆ ತರಗತಿಕೋಣೆಯಲ್ಲಿರುವ ಕೆಂಪು ಮತ್ತು ಹಳದಿ ಬಣ್ಣದ ವಸ್ತುಗಳನ್ನು ಗುರುತಿಸಿ, ಅವುಗಳನ್ನು ನಿಮ್ಮ ಬಳಿ ತರುವಂತೆ ಹೇಳುವುದು. ಮಕ್ಕಳಿಗೆ ವಸ್ತುಗಳ ಗುಂಪಿನಿಂದ ತಾವು ಆಯ್ದುಕೊಳ್ಳುತ್ತಿರುವ ಅಥವಾ ತೆಗೆದುಕೊಳ್ಳುತ್ತಿರುವ ವಸ್ತುಗಳ ಬಣ್ಣವನ್ನು ಹೆಸರಿಸುವಂತೆ ಹೇಳುವುದು, ಆಗ ಬಣ್ಣಗಳ ಹೆಸರು ನೆನಪಿನಲ್ಲಿ ಉಳಿಯುತ್ತದೆ. ಜೊತೆಗೆ ಮಕ್ಕಳಿಗೆ ಅದೇ ಬಣ್ಣವನ್ನು ಹೋಲುವ ಬೇರೆ ವಸ್ತುಗಳನ್ನು ನೆನಪಿಸಿಕೊಂಡು ಹೇಳುವಂತೆ ತಿಳಿಸಬಹುದು. ಉದಾ: ಕೆಂಪು – ಸೇಬು, ಟೊಮೆಟೋ, ಸರ್ಕಾರಿ ಬಸ್ಸು ಇತ್ಯಾದಿ.
4. ನಂತರ ಇನ್ನೂ 2 ಬಣ್ಣಗಳ ಹೆಸರುಗಳನ್ನು ಪರಿಚಯಿಸುವುದು: ನೀಲಿ ಮತ್ತು ಹಸಿರು. ಮಕ್ಕಳಿಗೆ ಬಣ್ಣದ ಚೀಲವನ್ನು ಪರಿಚಯಿಸುವುದು ಮತ್ತು ಒಂದಾದ ನಂತರ ಒಂದು ನೀಲಿ ಅಥವಾ ಹಸಿರು ಬಣ್ಣದ ವಸ್ತುಗಳನ್ನು ಹೊರತೆಗೆದು, ಹೊರಗೆ ತೆಗೆದ ವಸ್ತುವಿನ ಬಣ್ಣವನ್ನು ಹೇಳುವಂತೆ ಮಕ್ಕಳಿಗೆ ತಿಳಿಸುವುದು. ತರಗತಿಕೋಣೆಯಲ್ಲಿರುವ ನೀಲಿ ಮತ್ತು ಹಸಿರು ಬಣ್ಣದ ವಸ್ತುಗಳನ್ನು ಗುರುತಿಸುವಂತೆ ಮಕ್ಕಳಿಗೆ ಹೇಳುವುದು.
5. ಮಕ್ಕಳಿಗೆ ತರಗತಿಕೋಣೆಯಲ್ಲಿರುವ ನೀಲಿ ಮತ್ತು ಹಸಿರು ಬಣ್ಣದ ವಸ್ತುಗಳನ್ನು ಗುರುತಿಸಿ, ಅವುಗಳನ್ನು ನಿಮ್ಮ ಬಳಿ ತರುವಂತೆ ಹೇಳುವುದು. ಹೀಗೆಯೇ ಬಿಳಿ ಮತ್ತು ಕಪ್ಪು ಬಣ್ಣವನ್ನು ಪರಿಚಯಿಸುವುದು ಮತ್ತು ಈ ಮೊದಲು ಮಾಡಿದ ಚಟುವಟಿಕೆಯನ್ನೇ ಪುನರಾವರ್ತನೆ ಮಾಡುವುದು.
6. **ಮಕ್ಕಳ ಆಟ – ಯಾರ ಬಳಿ ಬಣ್ಣವಿದೆ?** ಮಕ್ಕಳನ್ನು ಒಂದು ಸಾಲಿನಲ್ಲಿ ನಿಲ್ಲಿಸುವುದು. ಪ್ರತಿ ಮಗುವಿಗೂ ಒಂದು ಚಿಕ್ಕ ಬಣ್ಣದ ಕಾರ್ಡ್‌ನ್ನು ಕೊಡುವುದು. ನೀವು ದೂರದಲ್ಲಿ ನಿಂತು, ಬಣ್ಣದ ದೊಡ್ಡ ಮಿಂಚುಪಟ್ಟಿಯನ್ನು ತೋರಿಸುತ್ತ, ಅದರ ಹೆಸರು ಹೇಳುವುದು.ನೀವು ತೋರಿಸಿದ ಬಣ್ಣದ ಕಾರ್ಡ್ ಹೊಂದಿದ ಮಕ್ಕಳು ನಿಮ್ಮ ಹತ್ತಿರ ಓಡಿ ಬರುವುದು ಅಥವಾ ತಮ್ಮ ಕೈಎತ್ತುವುದು ಅಥವಾ ಕೆಳಗೆ ಕೂರುವುದು.ಆಮೇಲೆ ಇನ್ನೊಂದು ಬಣ್ಣದ ಮಿಂಚುಪಟ್ಟಿಯನ್ನು ತೋರಿಸುವುದು.ಇದನ್ನು ಹಲವಾರು ಸಲ ಮಾಡಿದ ನಂತರ, ಮಿಂಚುಪಟ್ಟಿಯನ್ನು ತೋರಿಸದೆಯೇ, ನೀವು ಬಣ್ಣದ ಹೆಸರನ್ನು ಹೇಳಬೇಕು ಮತ್ತು ಆ ಬಣ್ಣದ ಕಾರ್ಡ್ ಹೊಂದಿರುವ ಮಕ್ಕಳು ನಿಮ್ಮ ಹತ್ತಿರ ಓಡಿ ಬರುವುದು ಅಥವಾ ತಮ್ಮ ಕೈಎತ್ತುವುದು ಅಥವಾ ಕೆಳಗೆ ಕೂರುವುದು.


## ಅನ್ವೇಷಣಾ ಚಟುವಟಿಕೆಗಳು

### ಕಲಿಕಾ ಫಲಿತಗಳು

ದೈನಂದಿನ ಬದುಕಿನಲ್ಲಿ ನಡೆಯುತ್ತಿರುವ ಹಾಗೆ ಪರಿಕಲ್ಪನೆಯನ್ನು ವಿವರಿಸಲು ಮತ್ತು ಅದರ ಕುರಿತು ನಿರ್ಣಯಗಳನ್ನು ರೂಪಿಸುವಂತೆ ಆಲೋಚಿಸಲು ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

1. ಶಿಶುಗೀತೆ ಗಿಳಿ
2. ಮಿಂಚುಪಟ್ಟಿ ಕಾರ್ಡುಗಳ ಸರಣಿ **F4.1.2:** ಕಾಡು ಪ್ರಾಣಿಗಳು – 2. ಹುಲಿ, 11. ಜೀಬ್ರಾ
3. ಮಿಂಚುಪಟ್ಟಿ ಕಾರ್ಡುಗಳ ಸರಣಿ **F4.1.3:** ಹಕ್ಕಿಗಳು – 1. ಕಾಗೆ, 2. ಕೋಳಿ, 3. ಗಿಳಿ, 4. ನವಿಲು, 5. ಬಾತುಕೋಳಿ.
4. ಮಣಿಗಳು, ಗುಂಡಿಗಳು ಮತ್ತು ಬ್ಲಾಕ್‌ಗಳು.




**ಚಟುವಟಿಕೆ 1**

## ನನ್ನ ಮನೆಯಲ್ಲಿರುವ ಬಣ್ಣಗಳು

1. ಐದು ಮಕ್ಕಳು ಒಂದು ಗುಂಪಿನಲ್ಲಿ ಇರುವಂತೆ ಮಕ್ಕಳನ್ನು ಆರು ಗುಂಪುಗಳನ್ನಾಗಿ ಮಾಡಿ ಮತ್ತು ಪ್ರತಿ ಗುಂಪಿಗೂ ಒಂದು ಬಣ್ಣವನ್ನು ಕೊಡುವುದು.
2. ಪ್ರತಿ ಗುಂಪಿಗೂ ಅವರಿಗೆ ನೀಡಿದ ಬಣ್ಣದ ಏನಾದರೊಂದು ವಸ್ತುವನ್ನು ಮನೆಯಿಂದ ತರುವಂತೆ ಹೇಳುವುದು.

   **ಟಿಪ್ಪಣಿ:** ಆರಂಭಿಕ ಹಂತಗಳಲ್ಲಿ ಮಕ್ಕಳಿಗೆ ಮನೆಯಿಂದ ಏನಾದರೂ ವಸ್ತುವನ್ನು ತರಲು ಹೇಳಿದಾಗ, ಅವರು ಮರೆಯಬಹುದು. ಹೆಚ್ಚಿನ ಮಕ್ಕಳು ಏನಾದರೊಂದು ವಸ್ತುವನ್ನು ತರುವವರೆಗೂ ಮೊದಲಿನ ಚಟುವಟಿಕೆಗಳನ್ನು ಮುಂದುವರೆಸುವುದು. ಮಕ್ಕಳಿಗೆ ರೂಢಿ ಮಾಡಲು ಇದು ಬಹಳ ಮುಖ್ಯ. ಕಿರಿಯ ಮಕ್ಕಳಿಗೆ ಏನಾದರೊಂದು ವಸ್ತುವನ್ನು ತೆಗೆದುಕೊಂಡು ಬರಲು ಹಿರಿಯ ಮಕ್ಕಳು ಸಹಾಯ ಮಾಡುವಂತೆ ತಿಳಿಸುವುದು. ಶಿಕ್ಷಕರು ಯಾವ ವಸ್ತುವನ್ನು ಕೊಟ್ಟು ಕಳಿಸುವುದು ಎಂಬ ಬಗ್ಗೆ ಪೋಷಕರಿಗೆ ಸಲಹೆಯನ್ನೂ ನೀಡಬಹುದು – ಉದಾ: ನಿಂಬೆಹಣ್ಣು, ಹಳದಿ ಚೆಂಡು, ಹಸಿರು ಎಲೆ, ಕೆಂಪು ಟೊಮೆಟೋ, ನೀಲಿ ಬಟ್ಟೆ ಇತ್ಯಾದಿ.

3. ಪ್ರತಿದಿನ ಒಂದೊಂದು ಗುಂಪಿನ 5–6 ಮಕ್ಕಳಿಗೆ ತಾವು ಏನು ತಂದಿದ್ದೇವೆ ಎಂಬುದನ್ನು ಪ್ರಸ್ತುತಪಡಿಸಲು ಹೇಳುವುದು. ಮಕ್ಕಳು ತಾವು ತಂದಿದ್ದನ್ನು ತೋರಿಸುವಾಗ ಹೀಗೆ ಹೇಳಬೇಕೆಂದು ತಿಳಿಸುವುದು – ಆ ವಸ್ತುವನ್ನು ಏನೆಂದು ಕರೆಯುತ್ತಾರೆ? ಅದು ಯಾವ ಬಣ್ಣದ್ದು ? ಎಲ್ಲಿ? ಮತ್ತು ಹೇಗೆ ಅದನ್ನು ಬಳಸುತ್ತೇವೆ? ಎಂಬ ಪ್ರಶ್ನೆಗಳ ಮೂಲಕ ಪ್ರತಿ ಗುಂಪಿನ ಎಲ್ಲ ಮಕ್ಕಳು ತಾವು ತಂದಿದ್ದನ್ನು ತೋರಿಸುವವರೆಗೆ 2–3 ದಿನಗಳ ಕಾಲ ಪುನರಾವರ್ತಿಸುವುದು. ಮಕ್ಕಳು ಪ್ರಸ್ತುತಪಡಿಸುತ್ತಿರುವಂತೆ, ಆ ವಸ್ತು ಇನ್ನೂ ಬೇರೆ ಬಣ್ಣದಲ್ಲಿ ಇರಬಲ್ಲದೇ ಎಂದು ಚರ್ಚಿಸುವುದು. ಇದನ್ನು ಪೋಷಕರೊಂದಿಗೆ ಮಾತನಾಡಿ, ಮೊದಲೇ ವ್ಯವಸ್ಥಿತಗೊಳಿಸಬಹುದು. ಉದಾ: ಒಂದು ಮಗು ಹಸಿರು ಮೆಣಸಿನ ಕಾಯಿ ತಂದರೆ, ಇನ್ನೊಂದು ಮಗು ಕೆಂಪು ಮೆಣಸಿನ ಕಾಯಿ ತರುವುದು. ಒಂದು ಮಗು ಕೆಂಪು ಟೊಮೆಟೋ ಹಣ್ಣು ತಂದರೆ ಇನ್ನೊಂದು ಮಗು ಹಸಿರು ಟೊಮೆಟೋ ಕಾಯಿ ತರುವುದು.

   **ಶಿಕ್ಷಕರಿಗೆ ಟಿಪ್ಪಣಿ:** ಮಕ್ಕಳು ಮನೆಯಿಂದ ವಸ್ತುಗಳನ್ನು ತಂದಾಗ, ಅವುಗಳನ್ನು ಒಂದು ಚೀಲದಲ್ಲಿ ಹಾಕಿಟ್ಟು, ಹೆಸರು ಬರೆದಿಡುವುದು, ಆಗ ಮಕ್ಕಳಿಗೆ ಅವುಗಳನ್ನು ತೆಗೆದುಕೊಂಡು ವಿವರಿಸುವ ಅಗತ್ಯ ಬಂದಾಗ, ಅವನ್ನು ಹುಡುಕುವುದು ಸುಲಭವಾಗುತ್ತದೆ. ಎಲ್ಲ ಮಕ್ಕಳು ವಸ್ತುಗಳನ್ನು ತೋರಿಸಿದ ನಂತರ, ತಾವು ತಂದಿರುವ ಬಾಕ್ಸಿನಲ್ಲಿ ಇಡುವುದನ್ನು ಖಾತ್ರಿಪಡಿಸಿಕೊಳ್ಳುವುದು.

4. ಎಲ್ಲಮಕ್ಕಳು ತಾವು ತಂದಿರುವ ಒಂದು ಬಣ್ಣದ ವಸ್ತುಗಳನ್ನು ತೋರಿಸುವುದನ್ನು ಪೂರ್ಣಗೊಳಿಸಿದ ನಂತರ, ಮಕ್ಕಳಿಗೆ ವಸ್ತುಗಳನ್ನು ಹೋಲಿಕೆ ಮಾಡಲು ಹೇಳುವುದು. ಎಲ್ಲ ಕೆಂಪು ಬಣ್ಣದ ಅಥವಾ ಹಳದಿ ಬಣ್ಣದ ವಸ್ತುಗಳು ಒಂದೇ ರೀತಿಯ ಬಣ್ಣದವೇ ಎಂದು ಕೇಳುವುದು. ಪ್ರತಿಯೊಂದು ಬಣ್ಣದ ಒಳಗೆ ಛಾಯೆಯಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಲು ಅವರಿಗೆ ಅವಕಾಶ ನೀಡುವುದು.

## ಚಟುವಟಿಕೆ 2

## ಶಿಶುಗೀತೆ

1. ಶಿಶುಗೀತೆಯನ್ನು ಪರಿಚಯಿಸುವುದು.
2. ಮೇಲಿನ ಶಿಶುಗೀತೆಯನ್ನು ಮಕ್ಕಳಿಗೆ ಹೇಳಿಕೊಡುವುದು ಮತ್ತು ಚರ್ಚಿಸುವುದು. ಪ್ರಾಣಿಗಳ ಜಗತ್ತಿನಲ್ಲಿ ಬಣ್ಣಗಳ ಕುರಿತು ಶಿಶುಗೀತೆಯು ಏನು ಹೇಳುತ್ತದೆ ಎಂದು ಮಕ್ಕಳನ್ನು ಕೇಳುವುದು.
3. ಪ್ರಾಣಿಗಳ ಮಿಂಚುಪಟ್ಟಿಗಳನ್ನು ಹೊರತೆಗೆಯುವುದು – ಹುಲಿ, ಜೀಬ್ರಾ, ಗಿಳಿ, ಕಾಗೆ, ಬಾತುಕೋಳಿ, ಹುಂಜ ಇವುಗಳನ್ನು ತೋರಿಸುವುದು ಮತ್ತು ಮಕ್ಕಳಿಗೆ ಬಣ್ಣಗಳನ್ನು ತೋರಿಸುವಂತೆ ಹೇಳುವುದು.
4. ಹೂವುಗಳ ಹಾಗೂ ಹಣ್ಣುಗಳ ಮಿಂಚುಪಟ್ಟಿಗಳನ್ನು ಹೊರತೆಗೆಯುವುದು – ಮತ್ತು ಮಕ್ಕಳಿಗೆ ಅವರು ನೋಡುತ್ತಿರುವ ಬಣ್ಣಗಳನ್ನು ಬೆರಳು ಮಾಡಿ ತೋರಿಸಲು ಹೇಳುವುದು.
5. ನಮ್ಮ ಸುತ್ತಲೂ ಇರುವ ಸ್ವಾಭಾವಿಕ ಜಗತ್ತಿನಲ್ಲಿ ಬಣ್ಣಗಳನ್ನು ನೋಡುತ್ತೇವೆ ಎಂಬುದನ್ನು ಮಕ್ಕಳಿಗೆ ವಿವರಿಸುವುದು.

### ಗಿಳಿ

**ಕೇಳೋ ಕೇಳೋ ಅಣ್ಣ, ಹಸಿರು ಗಿಳಿಯ ಬಣ್ಣ**
**ಕೇಳೋ ಕೇಳೋ ಅಣ್ಣ, ನೀಲಿ ಮುಗಿಲ ಬಣ್ಣ**
**ಕೇಳೋ ಕೇಳೋ ಅಣ್ಣ, ಹಳದಿ ಅರಶಿನ ಬಣ್ಣ**
**ಕೇಳೋ ಕೇಳೋ ಅಣ್ಣ, ಕೆಂಪು ಕುಂಕುಮ ಬಣ್ಣ**
**ಕೇಳೋ ಕೇಳೋ ಅಣ್ಣ, ಕಪ್ಪು ಕಾಗೆ ಬಣ್ಣ**
**ಕೇಳೋ ಕೇಳೋ ಅಣ್ಣ, ಬಿಳಿಯ ಹಾಲಿನ ಬಣ್ಣ**



## ಚಟುವಟಿಕೆ 3

## ರಂಗೋಲಿಯಲ್ಲಿ ಬಣ್ಣ ತುಂಬುವುದು

1. ಮಕ್ಕಳನ್ನು ಆರು ಗುಂಪುಗಳನ್ನಾಗಿ ಮಾಡುವುದು.
2. ನೆಲದ ಮೇಲೆ ರಂಗೋಲಿಯಂತಹ ರೇಖಾಚಿತ್ರಗಳನ್ನು ಬಿಡಿಸುವುದು, ಅದರಲ್ಲಿ ಕನಿಷ್ಠ 3 ಭಾಗಗಳಿರುವಂತೆ ಬಿಡಿಸುವುದು.
3. ಪ್ರತಿಗುಂಪಿಗೂ ಒಂದು ಚಿತ್ರವನ್ನು ನೀಡುವುದು ಮತ್ತು ಅವರಿಗೆ 3 ಬೇರೆ ಬೇರೆ ಬಣ್ಣಗಳನ್ನು ಹಾಗೂ ಬಿಳಿಯ ಬಣ್ಣವನ್ನು ನೀಡುವುದು.
4. ರೇಖಾಚಿತ್ರ/ರಂಗೋಲಿಯ ಬಾಹ್ಯರೇಖೆಗೆ ಬಿಳಿ ಬಣ್ಣವನ್ನು ಬಳಸಲು ಮತ್ತು ಇನ್ನುಳಿದ ಮೂರು ಭಾಗವನ್ನು ಮೂರು ಬಣ್ಣಗಳಿಂದ ತುಂಬಲು ತಿಳಿಸುವುದು. (ಉದಾ: ಕೆಂಪು, ಹಸಿರು ಮತ್ತು ಹಳದಿ)
5. ಮಣಿಗಳು, ಗುಂಡಿಗಳು, ಬ್ಲಾಕ್‌ಗಳ ಬಟ್ಟಲನ್ನು ಸಿದ್ಧವಾಗಿಟ್ಟುಕೊಳ್ಳುವುದು. ಮಕ್ಕಳಿಗೆ ಬಣ್ಣದ ಮಣಿ, ಗುಂಡಿ ಅಥವಾ ಬ್ಲಾಕ್ ಆಯ್ಕೆ ಮಾಡಿಕೊಂಡು, ಆಕೃತಿಗಳಲ್ಲಿ ತುಂಬುವಂತೆ ಹೇಳುವುದು.
6. ಎಲ್ಲ ಮಕ್ಕಳು ಪೂರ್ಣಗೊಳಿಸಿದ ನಂತರ, ಮಕ್ಕಳೊಂದಿಗೆ ಗುಂಪಿನಲ್ಲಿ ನಡೆದಾಡುತ್ತ, ಅವರು ಬಿಡಿಸಿದ್ದನ್ನು ವಿವರಿಸುವಂತೆ ಮತ್ತು ಅವರು ಬಳಸಿದ ಬಣ್ಣಗಳನ್ನು ಹೆಸರಿಸಲು ಹೇಳುವುದು.

ನಿಸರ್ಗದಲ್ಲಿ ನಮ್ಮ ಸುತ್ತಲೂ ಎಲ್ಲೆಡೆಯೂ ಬಣ್ಣಗಳಿವೆ, ಬಣ್ಣಗಳು ಪರಿಸರದಲ್ಲಿರುವ ವಸ್ತುಗಳಿಗೆ/ಸಂಗತಿಗಳಿಗೆ ವಿಶಿಷ್ಟ ಗುಣಲಕ್ಷಣಗಳನ್ನು ನೀಡುತ್ತವೆ; ಬಣ್ಣಗಳು ನಿಸರ್ಗಕ್ಕೆ ಹೊಳಪನ್ನು ಅಥವಾ ಪ್ರಖರತೆಯನ್ನು ತುಂಬುತ್ತವೆ, ಮನೆಯಲ್ಲಿ ಮತ್ತು ವಿಶೇಷ ಸಂದರ್ಭಗಳಲ್ಲಿ ಸೃಜನಶೀಲತೆ ಮತ್ತು ಸೌಂದರ್ಯದ ಉದ್ದೇಶಗಳಿಗಾಗಿ, ಉದಾಹರಣೆಗೆ ರಂಗೋಲಿ ಹಾಕುವಂತಹ ಸಂದರ್ಭಗಳಲ್ಲಿ ಬಣ್ಣಗಳನ್ನು ಬಳಸುತ್ತೇವೆ ಎಂಬ ಅಂಶಗಳನ್ನು ಒತ್ತಿ ಹೇಳುತ್ತ, ಚರ್ಚೆಯನ್ನು ಸಾರಾಂಶೀಕರಿಸುವುದು.

## ವರ್ಗೀಕರಣ, ವಿಂಗಡನೆ ಮತ್ತು ಹೊಂದಿಸುವುದು

### ಕಲಿಕಾ ಫಲಿತಗಳು

ಬಣ್ಣದ ಆಧಾರದ ಮೇಲೆ ವಸ್ತುಗಳನ್ನು ಪ್ರತ್ಯೇಕಿಸಲು (ವಿಂಗಡಿಸುವುದು ಮತ್ತು ಹೊಂದಿಸುವುದು) ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

ವಿಂಗಡಿಸುವುದು ಮತ್ತು ಹೊಂದಿಸುವುದಕ್ಕೆ ಸಾಮಗ್ರಿಗಳು:

1. ಮನೆಯಿಂದ ತಂದ ಸಾಮಗ್ರಿಗಳು.
2. ಮಣಿಗಳು, ಬೀಜಗಳು, ಧಾನ್ಯಗಳು, ಕಾಳುಗಳು, ಎಲೆಗಳು, ಹೂಗಳು, ತರಕಾರಿಗಳು, ಬೇರೆ ಬೇರೆ ಬಣ್ಣದ ದಾರಗಳು.

### ತರಗತಿ ಕೋಣೆ ನಿರ್ವಹಣೆ

1. ಸಾಮಗ್ರಿಗಳ ಜೊತೆ ಏನು ಕೆಲಸ ಮಾಡಬೇಕು ಎನ್ನುವುದನ್ನು ವಿವರಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುವುದು.
2. ತಮ್ಮ ಕೆಲಸ ಮುಗಿಸಿದ ನಂತರ ಕೈ ಎತ್ತಬೇಕು ಅಥವಾ ಕರೆಯಬೇಕು ಎಂದು ಮಕ್ಕಳಿಗೆ ತಿಳಿಸುವುದು. ಇದು ಮೊದಲನೇ ಹಂತವಾಗಿದ್ದರಿಂದ, ನಿಯಮಗಳನ್ನು ರೂಪಿಸಿ, ಮಕ್ಕಳು ಅವುಗಳನ್ನು ಪಾಲಿಸುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು.
3. ಮಕ್ಕಳು ಮುಂದಿನ ಕೆಲಸ ಶುರು ಮಾಡುವುದಕ್ಕಿಂತ ಮೊದಲು ಅವರು ಈಗಾಗಲೇ ಮಾಡಿರುವ ಕೆಲಸವನ್ನು ಪರಿಶೀಲಿಸುವುದು.

---

**ಚಟುವಟಿಕೆ 1**

## ಮನೆಯಿಂದ ತಂದಿರುವ ವಸ್ತುಗಳನ್ನು ವಿಂಗಡಿಸುವುದು (ಗುಂಪು ಕೆಲಸ)

1. ಹಿಂದಿನ ವಾರ ತೋರಿಸಿದಂತೆ/ಚರ್ಚಿಸಿದಂತೆ ಮಕ್ಕಳು ಮನೆಯಿಂದ ತಂದಿರುವ ವಸ್ತುಗಳನ್ನು ವಿಂಗಡಿಸುವ ಮೂಲಕ ಕೆಲಸವನ್ನು ಶುರು ಮಾಡುವುದು. ಎಲ್ಲ ವಸ್ತುಗಳನ್ನು ಒಂದು ದೊಡ್ಡ ಬಾಕ್ಸಿನಲ್ಲಿ ಇಡುವುದು. ಸ್ವಲ್ಪ ವಸ್ತುಗಳನ್ನು ಒಂದೆರಡು ಚಿಕ್ಕ ಬಾಕ್ಸ್‌ಗಳಿಗೆ ಹಾಕುವುದು.
2. ಬಣ್ಣಗಳ ಆಧಾರದ ಮೇಲೆ ವಸ್ತುಗಳನ್ನು ಹೇಗೆ ವಿಂಗಡಿಸುವುದು ಎಂಬುದನ್ನು ಮಕ್ಕಳಿಗೆ ತೋರಿಸಲುಒಂದು ಚಿಕ್ಕ ಬಾಕ್ಸಿನಲ್ಲಿರುವ ವಸ್ತುಗಳನ್ನು ಬಳಸಿಕೊಳ್ಳುವುದು. ಪ್ರತಿಯೊಂದು ವಸ್ತುವನ್ನು ಹೊರಗೆ ತೆಗೆದು, 'ಇದು ಯಾವ ಬಣ್ಣ ಹೇಳಿ?' ಎಂದು ಕೇಳುವುದು. ಅವನ್ನು ಒಂದು ಕಡೆ ಒಟ್ಟುಗೂಡಿಸಿ ಇಡುವುದು? ಮತ್ತು ಹೀಗೆ ಹೇಳುವುದು, 'ಸರಿ, ಈಗ ನೀಲಿ ಬಣ್ಣ ಈ ರಾಶಿಗೆ/ಗುಂಪಿಗೆ ಸೇರುತ್ತದೆ', ಹೀಗೆಯೇ ಹೇಳುತ್ತ ಬೇರೆ ಬೇರೆ ಬಣ್ಣದ ವಸ್ತುಗಳನ್ನು ಬೇರೆ ಬೇರೆ ಗುಂಪು ಮಾಡುವುದು.
3. ಐದು ಮಕ್ಕಳ ಒಂದು ಗುಂಪಿನಂತೆ ಮಕ್ಕಳನ್ನು ಗುಂಪುಗಳನ್ನಾಗಿ ಮಾಡುವುದು ಮತ್ತು ಪ್ರತಿಯೊಂದು ಗುಂಪಿಗೂ ಒಂದೊಂದು ಬಾಕ್ಸ್ ಕೊಟ್ಟು, ಅವುಗಳಲ್ಲಿರುವ ವಸ್ತುಗಳನ್ನು ಬಣ್ಣಗಳ ಆಧಾರದಲ್ಲಿ ವಿಂಗಡಿಸುವಂತೆ ಹೇಳುವುದು. ಈ ವಸ್ತುಗಳನ್ನು ಈಗಾಗಲೇ ತರಗತಿಯಲ್ಲಿ ಮಕ್ಕಳಿಗೆ ತೋರಿಸಿ, ವಿವರಿಸಿರುವುದರಿಂದ ಅವರಿಗೆ ಈ ವಸ್ತುಗಳ ಪರಿಚಯವಿರುತ್ತದೆ.
4. ಮಕ್ಕಳು ಒಮ್ಮೆ ಈ ವಿಂಗಡಿಸುವ ಚಟುವಟಿಕೆ ಮುಗಿಸಿದ ನಂತರ, ಗುಂಪುಗಳ ಬಳಿ ನೀವು ಹೋಗುವುದು ಮತ್ತು ಮಕ್ಕಳು ಪ್ರತಿ ಗುಂಪನ್ನು/ರಾಶಿಯನ್ನು ತೋರಿಸಿ, ಸೂಕ್ತವಾದ ಪದಗಳನ್ನು ಬಳಸಿಕೊಂಡು, ವಿವರಿಸುವುದು. ವಿಂಗಡಿಸಿದ ಗಂಪುಗಳಿಗೆ ಏನು ಆಧಾರ ಎಂದು ಚರ್ಚಿಸುವುದು. ವಸ್ತುಗಳನ್ನು ಅವರು ಯಾವ ಬಣ್ಣಗಳಿಂದ ವಿಂಗಡಿಸಲು ಸಾಧ್ಯವಾಯಿತು? ಒಂದು ವಸ್ತು ಅದೇ ಗುಂಪಿಗೆ ಏಕೆ ಸೇರುವುದು?
5. ಮಕ್ಕಳಿಗೆ ಬೇರೆ ಗುಂಪಿನವರು ವಿಂಗಡಿಸಿದ ವಸ್ತುಗಳ ರಾಶಿಗಳನ್ನು ನೋಡಲು ಅವಕಾಶ ನೀಡುವುದು ಮತ್ತು ಬೇರೆ ಮಕ್ಕಳು ತಮ್ಮ ಪ್ರತಿ ಗುಂಪನ್ನು/ರಾಶಿಯನ್ನು ತೋರಿಸಿ, ಸೂಕ್ತವಾದ ಪದಗಳನ್ನು ಬಳಸಿಕೊಂಡು, ವಿವರಿಸುವುದು.

## ವರ್ಗೀಕರಣ, ವಿಂಗಡನೆ ಮತ್ತು ಹೊಂದಿಸುವುದು

ಚಟುವಟಿಕೆ 2

### ಬೇಳೆಕಾಳುಗಳನ್ನು ವಿಂಗಡಿಸುವುದು (ಗುಂಪು ಕೆಲಸ)

1. ಬೇರೆ ಬೇರೆ ಬಣ್ಣಗಳ ವಿವಿಧ ರೀತಿಯ ಬೇಳೆಕಾಳುಗಳನ್ನು ಸಂಗ್ರಹಿಸುವುದು – ಉದ್ದಿನಬೇಳೆ(ಬಿಳಿ), ಹೆಸರು ಕಾಳು(ಹಸಿರು), ತೊಗರಿಬೇಳೆ(ಹಳದಿ), ಕಡಲೆ(ಕಪ್ಪು), ಕೆಂಪು ರಾಜ್ಮಾ, ಕೇಸರಿ ಮಸೂರ್ ಬೇಳೆ ಇತ್ಯಾದಿ.
2. ಬೇಳೆಕಾಳುಗಳನ್ನು ಬಣ್ಣಗಳ ಆಧಾರದ ಮೇಲೆ ವಿಂಗಡಿಸುವುದು: ಈ ಕೆಳಗೆ ತೋರಿಸಿರುವಂತೆ ಬೇಳೆಕಾಳುಗಳನ್ನು ಒಂದು ದೊಡ್ಡ ಚಮಚೆಯಷ್ಟು/ಸೌಟಿನಷ್ಟು ತೆಗೆದುಕೊಂಡು ಮಿಶ್ರಮಾಡುವುದು
   - ಸೌಟು 1 – ಕೇಸರಿ ಮಸೂರ್ ಬೇಳೆ, ಹೆಸರು ಕಾಳು, ಉದ್ದಿನ ಬೇಳೆ
   - ಸೌಟು 2 – ತೊಗರಿ ಬೇಳೆ, ಕಡಲೆ ಬೇಳೆ ಮತ್ತು ಕೆಂಪು ರಾಜ್ಮಾ
   - ಸೌಟು 3 – ಕಪ್ಪು, ಬಿಳಿ ಮತ್ತು ಹಳದಿ ಬೇಳೆಕಾಳುಗಳು
   - ಸೌಟು 4 – ಕೇಸರಿ, ಹಳದಿ ಮತ್ತು ಹಸಿರು ಬೇಳೆಕಾಳುಗಳು
   - ಸೌಟು 5 – ಹಳದಿ, ಬಿಳಿ ಮತ್ತು ಕೆಂಪು ಬೇಳೆಕಾಳುಗಳು
   - ಸೌಟು 6 – ಕೇಸರಿ, ಹಸಿರು ಮತ್ತು ಕಪ್ಪು ಬೇಳೆಕಾಳುಗಳು
3. ಬೇಳೆಕಾಳುಗಳ ಸೌಟುಗಳನ್ನು 6 ಬೇರೆ ಬೇರೆ ಜಾಗದಲ್ಲಿಡುವುದು ಮತ್ತು ಐದು ಮಕ್ಕಳ ಒಂದು ಗುಂಪಿನಂತೆ ಮಕ್ಕಳನ್ನು ಆರು ಗುಂಪುಗಳನ್ನಾಗಿ ಮಾಡುವುದು. ಬೇಳೆಕಾಳುಗಳನ್ನು ಅವುಗಳ ಬಣ್ಣಗಳ ಆಧಾರದ ಮೇಲೆ ವಿಂಗಡಿಸಲು ಹೇಳುವುದು.
4. ಅವರು ಪೂರ್ಣಗೊಳಿಸಿದ ನಂತರ, ಗುಂಪುಗಳ ನಡುವೆ ಓಡಾಡುತ್ತ, ಮಕ್ಕಳಿಗೆ ಅವರು ವಿಂಗಡಿಸಿದ ಪ್ರತಿಯೊಂದು ಗುಂಪಿನ ಬಣ್ಣವನ್ನು ಹೆಸರಿಸಲು ಹೇಳುವುದು.
5. ಮಕ್ಕಳು ಗುಂಪುಗಳಲ್ಲಿ ಕೆಲಸವನ್ನು ಮುಗಿಸಿದ ನಂತರ, ಬೇಳೆಕಾಳುಗಳನ್ನು ಮಿಶ್ರ ಮಾಡಿ, ಗುಂಪುಗಳನ್ನು ಬದಲಿಸುವುದು, ಅವರು ಮತ್ತೆ ಬೇರೆ ಗುಂಪಿನ ಬೇಳೆಕಾಳು ಸೌಟಿನಲ್ಲಿರುವ ಮಿಶ್ರಣದೊಂದಿಗೆ ಕೆಲಸ ಮಾಡುವುದು.
6. ಎಲ್ಲ ಗುಂಪುಗಳು ಎರಡನೇ ಸಲ ಈ ಚಟುವಟಿಕೆ ಮಾಡಿದ ನಂತರ, ಅವರಿಗೆ ಬೇರೆ ಗುಂಪುಗಳು ಮಾಡಿರುವ ವಿಂಗಡನೆಯ ಕೆಲಸವನ್ನು ಗಮನಿಸುವಂತೆ ಹೇಳುವುದು ಮತ್ತು ಈ ಗುಂಪುಗಳು ಮಾಡಿರುವ ಬಣ್ಣಗಳ ಸಂಯೋಜನೆಯ ಕುರಿತು ವಿವರಿಸುವಂತೆ ಹೇಳುವುದು.

ಚಟುವಟಿಕೆ 3

### ಬಣ್ಣದ ಮಣಿಗಳು, ಗುಂಡಿಗಳು, ಬಾಟಲಿ ಮುಚ್ಚಳಗಳು, ಬ್ಲಾಕ್‌ಗಳು, ಟೈಲ್‌ಗಳನ್ನು ವಿಂಗಡಿಸುವುದು (ವೈಯಕ್ತಿಕ ಕೆಲಸ)

1. ವಸ್ತುಗಳನ್ನು ವಿಂಗಡಿಸಿ ಹೇಗೆ ರಾಶಿ/ಗುಂಪು ಮಾಡಬೇಕು ಎಂಬುದನ್ನು ಮಕ್ಕಳಿಗೆ ತೋರಿಸುವುದು. ನೀವು ಅವರಿಗೆ 3 ಬಣ್ಣಗಳ ವಸ್ತುಗಳನ್ನು ಕೊಡುತ್ತಿರುವುದಾಗಿ, ಅವುಗಳನ್ನು ವಿಂಗಡಿಸಿ ರಾಶಿ/ಗುಂಪು ಮಾಡಬೇಕು ಎಂಬುದನ್ನು ಹೇಳುವುದು. ಒಂದು ಮಗುವನ್ನು ಮುಂದೆ ತಂದು, ಹೀಗೆ ಹೇಳುವುದು – ನಾನೀಗ ರಾಮುವಿಗೆ 3 ರಾಶಿ/ಗುಂಪು ಮಾಡಲು ಹೇಳಿದ್ದೇನೆ, ಒಂದು ನೀಲಿ, ಇನ್ನೊಂದು ಹಸಿರು ಮತ್ತು ಮೂರನೆಯದು ಕೆಂಪು. ಅವನು ಈ ಬುಟ್ಟಿಯಿಂದ ಯಾವುದೇ 3 ವಸ್ತುಗಳನ್ನು ತೆಗೆದುಕೊಂಡು, ವಿಂಗಡಿಸಿ, ರಾಶಿ/ಗುಂಪು ಮಾಡಬೇಕು. ಅವನು ಹೇಗೆ ಕೆಂಪು ವಸ್ತುಗಳ ರಾಶಿ/ಗುಂಪು ಮಾಡುತ್ತಾನೆ ಎಂದು ನೋಡೋಣವೇ? ಅವನು ಈ ಗುಂಪಿನಲ್ಲಿ ಯಾವ ವಸ್ತುಗಳನ್ನು ಇಡಬೇಕು, ಮಕ್ಕಳಿಗೆ ಸಲಹೆಗಳನ್ನು ನೀಡುವಂತೆ ತಿಳಿಸುವುದು. ಒಂದೇ ಬಣ್ಣದ ಅದೇ ವಸ್ತುವಿನ ಅಥವಾ ಬೇರೆ ಬೇರೆ ವಸ್ತುಗಳ ಒಂದು ಗುಂಪನ್ನು ಹೇಗೆ ಮಾಡುವುದು ಎಂದು ಮಕ್ಕಳಿಗೆ ತೋರಿಸುವುದು.

## ವರ್ಗೀಕರಣ, ವಿಂಗಡನೆ ಮತ್ತು ಹೊಂದಿಸುವುದು

2. ಈಗ ಮಕ್ಕಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿಗೂ ಒಂದೊಂದು ಬಣ್ಣದ ಗುಂಪನ್ನು ಮಾಡಲು ಹೇಳುವುದು.
3. ಈಗ ಪ್ರತಿಗುಂಪಿನ ಒಂದೊಂದು ಮಗುವೂ ತರಗತಿಕೋಣೆಯ ಒಂದು ಮೂಲೆಯಲ್ಲಿ ಕುಳಿತುಕೊಂಡು, ತನಗೆ ಕೊಟ್ಟಿರುವ ವಸ್ತುಗಳಿಂದ ತನ್ನ ಗುಂಪಿಗೆ ಹೇಳಿದ ಬಣ್ಣದ ವಸ್ತುಗಳನ್ನು ವಿಂಗಡಿಸಿ ಒಂದೆಡೆ ರಾಶಿ ಮಾಡಬೇಕು. ಅಂದರೆ ಪ್ರತಿ ಮೂಲೆಯಲ್ಲಿ ಬೇರೆ ಬೇರೆ ಗುಂಪುಗಳಿಗೆ ಸೇರಿದ ಮಕ್ಕಳು ಅಕ್ಕಪಕ್ಕದಲ್ಲಿ ಕೂರುವುದು.
4. ಮಕ್ಕಳು ವಸ್ತುಗಳನ್ನು ವಿಂಗಡಿಸಿ, ರಾಶಿ ಮಾಡುವ ಕೆಲಸ ಪೂರ್ಣಗೊಳಿಸಿದ ನಂತರ, ನೀವು ಪ್ರತಿಮೂಲೆಗೆ ಹೋಗಿ, ಮಕ್ಕಳಿಗೆ ಅವರು ಮಾಡಿದ ಗುಂಪನ್ನು ಹೆಸರಿಸಿ, ವಿವರಿಸುವಂತೆ ಹೇಳುವುದು.
5. ಈಗ ಮಕ್ಕಳಿಗೆ ಪ್ರತಿ ಸೆಟ್/ರಾಶಿಯಿಂದ 3 ಬೇರೆ ಬೇರೆ ಬಣ್ಣದ ಒಂದು ಸೆಟ್ ಮಾಡುವಂತೆ ಹೇಳುವುದು. ಅಗತ್ಯಬಿದ್ದರೆ ಮಾಡಿ ತೋರಿಸುವುದು.

---

#### ಚಟುವಟಿಕೆ 4

### ಬಣ್ಣದ ವಿವಿಧ ಛಾಯೆಗಳನ್ನು ವಿಂಗಡಿಸುವುದು

1. ಮಕ್ಕಳು ಸೃಜನಶೀಲ ತರಗತಿಯಲ್ಲಿ ಬಣ್ಣಗಳ ವಿವಿಧ ಛಾಯೆಗಳ ಕುರಿತ ಚಿಕ್ಕ ಘಟಕಗಳನ್ನು ಪೂರ್ಣಗೊಳಿಸಿರಬಹುದು (ನನ್ನ ನೆರೆಹೊರೆ – ಚಟುವಟಿಕೆ 3). ಆ ಘಟಕಗಳನ್ನು ಚಿಕ್ಕ ಚೌಕಗಳಾಗಿ ಕತ್ತರಿಸಿ ಮತ್ತು ಅವನ್ನು ಒಟ್ಟು ಸೇರಿಸಿ, ಮಿಶ್ರ ಮಾಡಿ. ಐದು ಮಕ್ಕಳು ಒಂದೇ ಬಣ್ಣಕ್ಕೆ ಬಿಳಿಯ ಬಣ್ಣವನ್ನು ಸೇರಿಸುತ್ತ ವರ್ಣಛಾಯೆ ಉಂಟಾಗುವಂತೆ ಮಾಡಿರಬಹುದು (ಕೆಂಪು, ನೀಲಿ ಮತ್ತು ಹಸಿರು) ಮತ್ತು ಐದು ಮಕ್ಕಳು ಒಂದು ಬಣ್ಣಕ್ಕೆ ಕಪ್ಪನ್ನು ಸೇರಿಸುತ್ತ ವರ್ಣಛಾಯೆ ಉಂಟಾಗುವಂತೆ ಮಾಡಿರಬಹುದು. 30 ಮಕ್ಕಳ ಒಂದು ತರಗತಿಯಲ್ಲಿ ನಿಮಗೆ 3 ಬಣ್ಣಗಳ ವರ್ಣಛಾಯೆಗಳ ಒಟ್ಟು 90 ತುಣುಕುಗಳು ದೊರೆಯುತ್ತವೆ.
2. ಮಕ್ಕಳನ್ನು ಐದು ಗುಂಪುಗಳನ್ನಾಗಿ ಮಾಡುವುದು ಮತ್ತು ಎರಡು ಗುಂಪುಗಳಿಗೆ ಒಂದು ಬಣ್ಣದ ಮೇಲೆ ಕೆಲಸ ಮಾಡಲು ಹೇಳುವುದು. ಅವರು ವಸ್ತುಗಳ ರಾಶಿಯಿಂದ ಒಂದು ಬಣ್ಣದ ವಸ್ತುಗಳನ್ನು ವಿಂಗಡಿಸಿ, ವರ್ಣಛಾಯೆಯನ್ನು ಹೋಲಿಸಬೇಕೆಂದು ಹೇಳುವುದು.

## ಕ್ರಮವಾಗಿಡುವುದು

### ಕಲಿಕಾ ಫಲಿತಗಳು

ಬಣ್ಣದ ವಸ್ತುಗಳನ್ನು ವರ್ಣಛಾಯೆಯ ಆಧಾರದ ಮೇಲೆ ಪ್ರತ್ಯೇಕಿಸಿ (ವಿಂಗಡಿಸುವುದು ಮತ್ತು ಹೊಂದಿಸುವುದು) ಮೂರು ಹಂತದವರೆಗೆ ಅನುಕ್ರಮವಾಗಿಡುವುದಕ್ಕೆ ಮಕ್ಕಳು ಸಮರ್ಥರಾಗುವುದು.

### ಕಲಿಕಾ ಸಾಮಗ್ರಿಗಳು

1. ಸೃಜನಶೀಲ ಚುಟವಟಿಕೆ ತರಗತಿಯಲ್ಲಿ ಮಾಡಿರುವ ಕೆಂಪು, ನೀಲಿ ಮತ್ತು ಹಸಿರು ಬಣ್ಣದ 6 ವಿವಿಧ ಛಾಯೆಗಳ ಕಾಗದದ 90 ತುಣಕುಗಳು.
2. ಕಾಗದ ಮತ್ತು ಬಣ್ಣಗಳು – ಕಪ್ಪು, ಬಿಳಿ ಮತ್ತು ಹಳದಿ.

**ಚಟುವಟಿಕೆ *1***

### ಬಣ್ಣದ ವಿವಿಧ ಛಾಯೆಗಳನ್ನು ರಚಿಸುವುದು.

**ಈ ಚಟುವಟಿಕೆಯನ್ನು ಸೃಜನಶೀಲ ಚಟುವಟಿಕೆ ತರಗತಿಯಲ್ಲಿ ನಡೆಸಿರಬಹುದು (ನನ್ನ ನೆರೆಹೊರೆ – ಚಟುವಟಿಕೆ 3), ಆದರೂ ಇಲ್ಲಿ ಮತ್ತೊಮ್ಮೆ ಪರಿಕಲ್ಪನಾತ್ಮಕ ಚಟುವಟಿಕೆಯಾಗಿ ಮತ್ತೊಮ್ಮೆ ಮಾಡಬಹುದು.**

1. ಮಕ್ಕಳಿಗೆ ಪ್ರಾಥಮಿಕಬಣ್ಣಗಳೊಂದಿಗೆ, ಬಿಳಿ, ಕಪ್ಪು ಬಣ್ಣಗಳೊಂದಿಗೆ ಆಡಲು ಬಿಡುವುದು.
2. ಆಮೇಲೆ ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡುವುದು. 1ನೇ ಗುಂಪಿಗೆ ಪ್ರಾಥಮಿಕ ಬಣ್ಣಗಳ ಜೊತೆಗೆ ಬಿಳಿಯ ಬಣ್ಣವನ್ನು ಮತ್ತು 2ನೇ ಗುಂಪಿಗೆ ಪ್ರಾಥಮಿಕ ಬಣ್ಣಗಳೊಂದಿಗೆ ಕಪ್ಪು ಬಣ್ಣವನ್ನು ಕೊಡುವುದು. ಅವರಿಗೆ 4 ಚೌಕಗಳ ಒಂದು ಪಟ್ಟಿಯನ್ನು ಕೂಡ ನೀಡುವುದು.
3. ಗುಂಪಿನಲ್ಲಿ ಪ್ರತಿ ಮಗುವಿಗೂ ಒಂದು ಬಣ್ಣವನ್ನು ಕೊಟ್ಟು, ಅವರಿಗೆ ಒಂದು ಹನಿ ಬಿಳಿಯ ಬಣ್ಣ, ಎರಡು ಹನಿ ಬಿಳಿಯ ಬಣ್ಣ, ಮೂರು ಹನಿ ಬಿಳಿಯ ಬಣ್ಣ, ನಾಲ್ಕು ಹನಿ ಬಿಳಿಯ ಬಣ್ಣದೊಂದಿಗೆ ಮಿಶ್ರ ಮಾಡಲು ತಿಳಿಸುವುದು.
4. 2ನೇ ಗುಂಪಿನ ಮಕ್ಕಳಲ್ಲಿಯೂ ಪ್ರತಿ ಮಗುವಿಗೆ ಒಂದು ಬಣ್ಣವನ್ನು ಕೊಟ್ಟು, ಅವರಿಗೆ ಒಂದು ಹನಿ ಕಪ್ಪು ಬಣ್ಣ, ಎರಡು ಹನಿ ಕಪ್ಪು ಬಣ್ಣ, ಮೂರು ಹನಿ ಕಪ್ಪು ಬಣ್ಣ, ನಾಲ್ಕು ಹನಿ ಕಪ್ಪು ಬಣ್ಣದೊಂದಿಗೆ ಮಿಶ್ರ ಮಾಡಲು ತಿಳಿಸುವುದು.
5. ಮಕ್ಕಳು ಮೊದಲ ಚೌಕವನ್ನು ಪ್ರಾಥಮಿಕ ಬಣ್ಣದಿಂದ ತುಂಬಿ, ನಂತರದ ಚೌಕಗಳನ್ನು ಬೇರೆ ಬೇರೆ ಪ್ರಮಾಣದಲ್ಲಿ ಬಿಳಿ ಅಥವಾ ಕಪ್ಪು ಬಣ್ಣಗಳನ್ನು ಮಿಶ್ರಮಾಡಿದ ಛಾಯೆಗಳನ್ನು ಬಳಸಿಕೊಂಡು ಬಣ್ಣ ತುಂಬಬೇಕು.
6. ಶಿಕ್ಷಕರು ಗುಂಪುಗಳ ನಡುವೆ ಓಡಾಡುತ್ತ, ಮಕ್ಕಳಿಗೆ ಬಣ್ಣಗಳ ನಡುವಣ ವ್ಯತ್ಯಾಸಗಳನ್ನು ವಿವರಿಸುವುದು.
7. ಕಪ್ಪು ಅಥವಾ ಬಿಳಿಯ ಬಣ್ಣವನ್ನು ಸೇರಿಸಿದಾಗ, ತಿಳಿ ಅಥವಾ ಗಾಢ ಬಣ್ಣ ಉಂಟಾಗುತ್ತದೆ ಎನ್ನುವುದನ್ನು ಪರಿಚಯಿಸುವುದು.
8. ಪಟ್ಟಿಯನ್ನು ಕತ್ತರಿಸಿ, ಬೇರೆ ಬೇರೆ ವರ್ಣಛಾಯೆಯ ಚಿಕ್ಕ ಬಣ್ಣಗಳ ಚೌಕವನ್ನು ಮಾಡುವುದು.

ಇವನ್ನು ಬೋರ್ಡ್ ಮೇಲೆ ಪ್ರದರ್ಶಿಸುವುದು ಮತ್ತು ಮಕ್ಕಳಿಗೆ ಈ ಬಣ್ಣಗಳು ಹೇಗೆ ಬಂದವು ಎಂದು ಕೇಳುವುದು.ಕಪ್ಪು ಅಥವಾ ಬಿಳಿ ಬಣ್ಣವನ್ನು ಸೇರಿಸಿ, ಗಾಢ ಅಥವಾ ತಿಳಿ ಛಾಯೆಯನ್ನು ಪಡೆಯಬಹುದು ಎಂಬುದನ್ನು ವಿವರಿಸುವುದು.

## ಕ್ರಮವಾಗಿಡುವುದು

ಚಟುವಟಿಕೆ 2

### 3 ಬಣ್ಣಗಳ ಒಂದು ಸರಣಿಯನ್ನು ರಚಿಸುವುದು

1. ಸೃಜನಶೀಲ ಚಟುವಟಿಕೆ ತರಗತಿಯಲ್ಲಿ ಮಕ್ಕಳು ರಚಿಸಿದ ವಿವಿಧ ವರ್ಣಛಾಯೆಯಯನ್ನು ಸಂಗ್ರಹಿಸಿ, 3 ಬಣ್ಣಗಳ ಛಾಯೆಯ ಗುಂಪು/ರಾಶಿ ಮಾಡುವುದು. (ತಿಳಿ, ಹೆಚ್ಚು ತಿಳಿ, ಅತಿಹೆಚ್ಚು ತಿಳಿ ಮತ್ತು ಗಾಢ, ಹೆಚ್ಚು ಗಾಢ, ಅತಿಹೆಚ್ಚು ಗಾಢ)
2. ಈ ಎರಡೂ ತಿಳಿ ಛಾಯೆ ಮತ್ತು ಗಾಢ ಛಾಯೆಗಳನ್ನು ಬಳಸಿಕೊಂಡು ಹೇಗೆ ಬಣ್ಣ ಮಾದರಿಗಳ ಒಂದು ಸರಣಿಯನ್ನು ಮಾಡಬಹುದು ಎಂಬುದನ್ನು ಮಕ್ಕಳಿಗೆ ತೋರಿಸುವುದು.
3. ಈಗ ಮಕ್ಕಳನ್ನು ಮೂರು ಗುಂಪುಗಳಾಗಿ ಮಾಡುವುದು ಮತ್ತು ಒಂದೊಂದು ಗುಂಪಿಗೆ ಒಂದೊಂದು ಬಣ್ಣವನ್ನು ನೀಡಿ, ಅವರು 3 ಹಂತದವರೆಗೆ ಬಣ್ಣಗಳ ಸರಣಿಯನ್ನು ರಚಿಸಲು ಹೇಳುವುದು (ಮೊದಲ ಸಲಕ್ಕೆ ಮಕ್ಕಳು ತಿಳಿ ಮತ್ತು ಗಾಢ ಎರಡೂ ಛಾಯೆಗಳನ್ನು ರಚಿಸಬಹುದು)
4. ಮಕ್ಕಳು ಬಣ್ಣಗಳು ಮತ್ತು ಅವುಗಳ 6 ಛಾಯೆಗಳೊಂದಿಗೆ (ತಿಳಿಯಿಂದ ಗಾಢದವರೆಗೆ) ಕೆಲಸ ಮಾಡಿದ ನಂತರ, ಅವರಿಗೆ ಯಾವುದಾದರೂ ಒಂದು ಬಣ್ಣದಲ್ಲಿ ತಿಳಿ ಅಥವಾ ಗಾಢ ಛಾಯೆಯಲ್ಲಿ (ಅಂದರೆ ತಿಳಿಯಿಂದ ಅತಿಹೆಚ್ಚು ತಿಳಿ, ಅಥವಾ ಗಾಢದಿಂದ ಅತಿಹೆಚ್ಚು ಗಾಢ) 3 ಛಾಯೆಗಳ ಸರಣಿಯನ್ನು ರಚಿಸುವಂತೆ ಹೇಳುವುದು. ಮಕ್ಕಳಿಗೆ ಸರಣಿಯ ಪ್ರತಿಭಾಗವನ್ನು ವಿವರಿಸುವಂತೆ, ಯಾವುದು ತಿಳಿ, ಹೆಚ್ಚು ತಿಳಿ, ಅತಿಹೆಚ್ಚು ತಿಳಿ, ಹಾಗೆಯೇ ಗಾಢ, ಹೆಚ್ಚು ಗಾಢ,ಅತಿಹೆಚ್ಚು ಗಾಢ,ಎಂಬುದನ್ನು ತೋರಿಸುತ್ತ ವಿವರಿಸುವಂತೆ ಹೇಳುವುದು.

ಚಟುವಟಿಕೆ 3

### 3 ಬಣ್ಣಗಳ ತಿರುವು ಮುರುವು/ವಿರುದ್ಧ ಸರಣಿಯನ್ನು ರಚಿಸುವುದು

ಮಕ್ಕಳು ಮೇಲಿನ ಕೆಲಸವನ್ನು ಗುಂಪಿನಲ್ಲಿ ಮಾಡಿದ ನಂತರ, ಒಬ್ಬೊಬ್ಬರೇ ಕುಳಿತು, ತಿರುವುಮುರುವು/ಉಲ್ಟಾ ಕ್ರಮದಲ್ಲಿ ಕೆಲಸ ಮಾಡಬಹುದು. (ಅತಿಹೆಚ್ಚು ತಿಳಿಯಿಂದ ತಿಳಿ ಬಣ್ಣ, ಅತಿಹೆಚ್ಚು ಗಾಢದಿಂದ ಗಾಢ ಬಣ್ಣ). ಮಕ್ಕಳಿಗೆ ಪ್ರತಿಯೊಂದು ಛಾಯೆಯನ್ನು ತೋರಿಸುತ್ತ, ಹೆಸರಿಸಲು ಹೇಳುವುದು.

ಚಟುವಟಿಕೆ 4

### ಕಪ್ಪಿನಿಂದ ಬಿಳುಪಿನವರೆಗೆ ಒಂದು ಸರಣಿಯನ್ನು ರಚಿಸುವುದು.

1. ಮಕ್ಕಳನ್ನು ಮೂರು ಗುಂಪುಗಳನ್ನಾಗಿ ಮಾಡಿ, ಅವರಿಗೆ ಕಪ್ಪು ಅಥವಾ ಬಿಳಿ ಬಣ್ಣವನ್ನು ಕೊಡುವುದು.
2. ಅವರಿಗೆ ಬಿಳಿ ಬಣ್ಣ ಬಳಸಿಕೊಂಡು ಕಪ್ಪು ಬಣ್ಣವನ್ನು ತಿಳಿಯಾಗಿಸಲಿಕ್ಕೆ ಅಥವಾ ಕಪ್ಪು ಬಳಸಿಕೊಂಡು ಬಿಳಿಯ ಬಣ್ಣವನ್ನು ಗಾಢವಾಗಿಸಲಿಕ್ಕೆ ಹೇಳುವುದು, ಅಂದರೆ ಪ್ರಾಥಮಿಕ ಬಣ್ಣವನ್ನು ಮೊದಲು ಹಾಕಿ, ಆಮೇಲೆ ಅದಕ್ಕೆ ದ್ವಿತೀಯ ಬಣ್ಣಗಳನ್ನು ಸೇರಿಸುತ್ತ ತಿಳಿ ಅಥವಾ ಗಾಢವಾಗಿಸುವುದನ್ನು ಹೇಳಿಕೊಡುವುದು.
3. ಅವರು ಇದನ್ನು ಮಾಡಿದ ನಂತರ ತಾವು ಏನು ಮಾಡಿದೆವು ಮತ್ತು ಪ್ರತಿಸಲ ಇನ್ನೊಂದು ಬಣ್ಣವನ್ನು ಸೇರಿಸಿದಾಗ ಏನಾಯಿತು ಎಂದು ವಿವರಿಸಲು ಅವರಿಗೆ ಅವಕಾಶನೀಡುವುದು.


# ವಿನ್ಯಾಸ ಮಾಡುವುದು

## ಕಲಿಕಾ ಫಲಿತಗಳು

ಒಂದು ವಿನ್ಯಾಸವನ್ನು ಗುರುತಿಸಿ, ತಾರ್ಕಿಕ ಕ್ರಮವನ್ನು ವಿಸ್ತರಿಸಲು ಮತ್ತು ಸರಳ ವಿನ್ಯಾಸಗಳನ್ನು ರಚಿಸಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

1. ಬೇರೆ ಬೇರೆ ಬಣ್ಣಗಳ ಮಣಿಗಳು ಮತ್ತು ಗುಂಡಿಗಳು.
2. ಒಂದೇ ಗಾತ್ರದ, ಆದರೆ ಬೇರೆ ಬಣ್ಣಗಳ ಬ್ಲಾಕ್‌ಗಳು.
3. ಒಂದು ಛಾಯೆಯ ಎಲೆಗಳು ಮತ್ತು ಬೇರೆ ಬೇರೆ ಬಣ್ಣಗಳ ಹೂಗಳು.
4. ಕೆಳಗೆ ತೋರಿಸಿದ ಉದಾಹರಣೆಗಳ ಚಿತ್ರ ಪಟ್ಟಿಗಳು.
   - ಕೆಂಪು/ನೀಲಿ/ಕೆಂಪು/ನೀಲಿ/
   - ಹಳದಿಕೆಂಪು/ನೀಲಿಕೆಂಪು/
   - ನೀಲಿಹಸಿರು/ಕೆಂಪುನೀಲಿ/ಹಸಿರುಕೆಂಪು
5. **ಇನ್ನೂ ಹೆಚ್ಚಿನ ಕ್ಯೂ ಕಾರ್ಡ್‌ಗಳು**
   - ಕೆಂಪುನೀಲಿಹಸಿರು/ನೀಲಿಹಸಿರುಕೆಂಪು/ಹಸಿರುಕೆಂಪುನೀಲಿ
   - ಹಳದಿಕೆಂಪುಬಿಳಿ/ಕೆಂಪುಬಿಳಿಹಳದಿ/ಬಿಳಿಹಳದಿಕೆಂಪು
   - ಕಪ್ಪುಹಳದಿಕೆಂಪು/ಹಳದಿಕೆಂಪುಕಪ್ಪು/ಕೆಂಪುಕಪ್ಪುಹಳದಿ



## ಶಿಕ್ಷಕರ ಪೂರ್ವಸಿದ್ಧತೆ

ನಿಮ್ಮ ಬಳಿ ಎಲ್ಲರಿಗೂ ಸಾಕಾಗುವಷ್ಟು ಕ್ಯೂ ಕಾರ್ಡ್‌ಗಳು ಇರಲಿಕ್ಕಿಲ್ಲ – ಕ್ಯೂ ಕಾರ್ಡ್‌ನಲ್ಲಿ ಕೊಟ್ಟಿರುವ ವಿನ್ಯಾಸವನ್ನು ಮರುಪ್ರತಿ ಮಾಡುವ ಮೂಲಕ ಕೆಲವು ಕಾರ್ಡ್‌ಗಳನ್ನು ನೀವೇ ಮಾಡಿಕೊಳ್ಳಬಹುದು.

## ಸೂಚನೆಗಳು

ಜೊತೆಗೂಡಿ ಅಥವಾ ಜೋಡಿಯಾಗಿ ಕೆಲಸ ಮಾಡುವುದು.

ಚಟುವಟಿಕೆ 1

## ಸರಳವಾದ ಕ್ಯೂ ಕಾರ್ಡ್‌ಗಳನ್ನು ಮರುಪ್ರತಿ ಮಾಡುವುದು. (ಗುಂಪು ಕೆಲಸ)

1. ಸಾಮಗ್ರಿಗಳನ್ನು ತರಗತಿಕೋಣೆಯ ಬೇರೆಬೇರೆ ಕಡೆಗಳಲ್ಲಿ ಕ್ಯೂ ಕಾರ್ಡ್‌ಗಳ ಜೊತೆಗೆ ಸಣ್ಣ ರಾಶಿ/ಗುಂಪು ಮಾಡಿ ಇಡುವುದು.
2. ಕ್ಯೂ ಕಾರ್ಡ್‌ನಲ್ಲಿ ಕೊಟ್ಟಿರುವ ವಿನ್ಯಾಸವನ್ನು ಗುಂಡಿಗಳು ಅಥವಾ ಮಣಿಗಳನ್ನು ಬಳಸಿಕೊಂಡು ಹೇಗೆ ಮರುಪ್ರತಿ ಮಾಡುವುದು ಎಂಬುದನ್ನು ಮಕ್ಕಳಿಗೆ ಒಮ್ಮೆ ಮಾಡಿ ತೋರಿಸುವುದು. ಮಾಡುವಾಗ ಬಣ್ಣಗಳು ಮತ್ತು ಅವು ಯಾವ ರೀತಿಯಾಗಿ ಪುನರಾವರ್ತನೆ ಆಗುತ್ತಿವೆ ಎಂಬ ಬಗ್ಗೆ ಮಕ್ಕಳ ಗಮನವನ್ನು ಸೆಳೆಯುವುದು.
3. ಮಕ್ಕಳಿಗೆ ಮೊದಲು ಜೋಡಿಯಾಗಿ ಕೆಲಸ ಮಾಡುತ್ತ, ಕ್ಯೂ ಕಾರ್ಡಿನಲ್ಲಿ ತೋರಿಸಿರುವ ಬಣ್ಣಗಳನ್ನು ಮರುಪ್ರತಿ ಮಾಡಲು ತಿಳಿಸುವುದು ಮತ್ತು ಒದಗಿಸಿದ ಎಲ್ಲ ಸಾಮಗ್ರಿಗಳನ್ನು ಬಳಸಿಕೊಂಡು ಕೆಲಸವನ್ನು ಮುಗಿಸಿದ ನಂತರ ಕೈ ಎತ್ತುವಂತೆ ಹೇಳುವುದು.
4. ಇದೇವೇಳೆ ತರಗತಿಕೋಣೆಯಲ್ಲಿ ಓಡಾಡುತ್ತ, ಮಕ್ಕಳನ್ನು ಗಮನಿಸುತ್ತ, ಸೂಕ್ತವಾದ ಪದಗಳನ್ನು ಬಳಸಿಕೊಂಡು ಅವರು ಮಾಡುತ್ತಿರುವ ವಿನ್ಯಾಸವನ್ನು ವಿವರಿಸಲು ಹೇಳುವುದು.
5. ಅವರು ವಿನ್ಯಾಸವನ್ನು ಸರಿಯಾಗಿ ಮಾಡಲು ಸಮರ್ಥರಾದರೆ, ಅವರಿಗೆ ಅದೇ ವಿನ್ಯಾಸವನ್ನು ಮುಂದುವರೆಸುವಂತೆ ಹೇಳುವುದು. (ಇದೇ ವಿನ್ಯಾಸದಲ್ಲಿ ಮಣಿಗಳು ಅಥವಾ ಗುಂಡಿಗಳನ್ನು ಇಟ್ಟು, ಈ ಗೆರೆಯನ್ನು ಇನ್ನೂ ಉದ್ದ ಮಾಡುತ್ತೀಯಾ ಎಂದು ಕೇಳುವುದು)
6. ಇಲ್ಲಿ ಒಂದು ನಿರ್ದಿಷ್ಟ ರೀತಿಯಲ್ಲಿ ವಸ್ತುಗಳನ್ನು ಇಡುವುದರ ಕಾರಣವನ್ನು ವಿವರಿಸುವಂತೆ ಮಕ್ಕಳನ್ನು ಕೇಳುವುದು – ಉದಾ: ಇದಾದ ನಂತರ ಏನು ಬರುತ್ತದೆ? ಏಕೆ?
7. ಜೋಡಿಗಳಿಗೆ ಸರಳವಾದ ಕ್ಯೂ ಕಾರ್ಡ್‌ಗಳನ್ನಿಟ್ಟುಕೊಂಡು, ಮಣಿಗಳು ಮತ್ತು ಗುಂಡಿಗಳು ಅಥವಾ ಒಂದೇ ಆಕಾರ ಹಾಗೂ ಗಾತ್ರದ ಟೈಲ್‌ಗಳನ್ನು ಮರುಪ್ರತಿ ಮಾಡುತ್ತ, ವಿನ್ಯಾಸವನ್ನು ವಿಸ್ತರಿಸುತ್ತ ಕೆಲಸ ಮಾಡಲು ತಿಳಿಸುವುದು

ಚಟುವಟಿಕೆ 2

## ಮುಂದುವರಿದ ಅಥವಾ ತುಸು ಸಂಕೀರ್ಣವಾದ ವಿನ್ಯಾಸಗಳನ್ನು ಮರುಪ್ರತಿ ಮಾಡುತ್ತ, ವಿಸ್ತರಿಸುವುದು. (ವೈಯಕ್ತಿಕ ಕೆಲಸ)

1. ಒಮ್ಮೆ ಮಕ್ಕಳು ಜೋಡಿಯಾಗಿ ಅಭ್ಯಾಸ ಮಾಡಿದ ನಂತರ, ಅವರಿಗೆ ಮುಂದುವರಿದ ಅಥವಾ ತುಸು ಸಂಕೀರ್ಣವಾದ ಕ್ಯೂ ಕಾರ್ಡ್‌ಗಳನ್ನು ನೀಡಿ, ಒಬ್ಬೊಬ್ಬರೇ ಕುಳಿತು ಅವುಗಳನ್ನು ಮರುಪ್ರತಿ ಮಾಡುತ್ತ, ವಿನ್ಯಾಸವನ್ನು ವಿಸ್ತರಿಸುವಂತೆ ತಿಳಿಸುವುದು.
2. ಮಕ್ಕಳಿಗೆ ಅವರು ಮಾಡಿರುವ ವಿನ್ಯಾಸವನ್ನು ವಿವರಿಸುವಂತೆ ಹೇಳುವುದು.

ಚಟುವಟಿಕೆ 3

## ಬಣ್ಣಗಳ ಬದಲಿಗೆ ಹೂಗಳು ಮತ್ತು ಎಲೆಗಳನ್ನು ಬಳಸಿಕೊಂಡು ಮುಂದುವರಿದ ಅಥವಾ ತುಸು ಸಂಕೀರ್ಣವಾದ ವಿನ್ಯಾಸಗಳನ್ನು ಮರುಪ್ರತಿ ಮಾಡುವುದು.

- ಮಕ್ಕಳು ಕೆಂಪುನೀಲಿಹಸಿರು/ನೀಲಿಹಸಿರುಕೆಂಪು/ಹಸಿರುಕೆಂಪುನೀಲಿ ಕ್ಯೂ ಕಾರ್ಡ್‌ನಲ್ಲಿರುವ ವಿನ್ಯಾಸವನ್ನು ರಚಿಸಿ, ವಿಸ್ತರಿಸಿದ ನಂತರ, ಇದೇ ವಿನ್ಯಾಸವನ್ನು ಎಲೆಗಳನ್ನು ಬಳಸಿಕೊಂಡು ಮಾಡಲು ತಿಳಿಸುವುದು. ಹಸಿರು, ನೀಲಿಯ ಜಾಗದಲ್ಲಿ ಎಲೆಗಳನ್ನು ಮತ್ತು ಕೆಂಪು ಜಾಗದಲ್ಲಿ ಹೂವನ್ನು ಬಳಸಿಕೊಂಡು ವಿನ್ಯಾಸ ರಚನೆ ಮಾಡಿಸುವುದು.

## ಅನ್ವಯ

### ಕಲಿಕಾ ಫಲಿತಗಳು

ದೈನಂದಿನ ಸಮಸ್ಯೆಗಳೊಂದಿಗೆ ಕೆಲಸ ಮಾಡಲು ಬಣ್ಣಗಳ ಪರಿಕಲ್ಪನೆಯನ್ನು ಬಳಸುವುದು.




### ಕಲಿಕಾ ಸಾಮಗ್ರಿಗಳು

ಮಕ್ಕಳು **F2.3.2** ಮಿಂಚುಪಟ್ಟಿಗಳ ಸಹಾಯದಿಂದ ಸಮಸ್ಯೆಗಳನ್ನು ಬಗೆಹರಿಸಲು/ಬಿಡಿಸಲು ಬಣ್ಣಗಳನ್ನು ಬಳಸಿಕೊಳ್ಳುವುದು.




ಹಂತ 1: **ಗುಂಪಿಗೆ ಸೇರದೇ ಇರುವುದನ್ನು ತೆಗೆಯುವುದು**

1. ಸಮವಸ್ತ್ರದಲ್ಲಿರುವ ಆರು ಮಕ್ಕಳು ಒಂದು ಸಾಲಿನಲ್ಲಿ ನಿಲ್ಲುವುದು – ಒಂದು ಮಗು ಬೇರೆ ಬಣ್ಣದ ಬಟ್ಟೆ ಹಾಕಿಕೊಂಡಿದೆ.
2. ಕೆಂಪು ಗುಲಾಬಿಗಳ ಒಂದು ಗುಚ್ಛದಲ್ಲಿ ಇರುವ ಒಂದು ಬಿಳಿ ಗುಲಾಬಿ.
3. 5 ಬೆಕ್ಕಿನ ಮರಿಗಳ ಜೊತೆ ಇರುವ ತಾಯಿ ಬೆಕ್ಕು – 4 ಬೆಕ್ಕಿನ ಮರಿಗಳಿಗೆ ಕಪ್ಪು ಬಾಲವಿದೆ ಮತ್ತು ಒಂದು ಬೆಕ್ಕಿನ ಮರಿಗೆ ಬಿಳಿ ಬಾಲವಿದೆ.
4. ಆರು ತಟ್ಟೆಗಳು – 5ಕ್ಕೆ ಅಂಚಿನಲ್ಲಿ ಕೆಂಪು ಮತ್ತು ನೀಲಿ ಬಣ್ಣದ ವಿನ್ಯಾಸವಿದೆ – ಒಂದಕ್ಕೆ ಕೆಂಪು ಮತ್ತು ಹಸಿರು ಬಣ್ಣದ ವಿನ್ಯಾಸವಿದೆ.
5. ಒಂದು ತಟ್ಟೆಯಲ್ಲಿ ಐದು ವಡೆಗಳಿವೆ – ಒಂದು ಸೀದು ಹೋಗಿದೆ.
6. ಐದು ಜೊತೆ ಶೂ ಮತ್ತು ಸಾಕ್ಸ್‌ಗಳು – ಕಪ್ಪು ಶೂಗಳು ಮತ್ತು ಬಿಳಿ ಸಾಕ್ಸ್ – ಒಂದು ಜೊತೆ ಮಾತ್ರ ಬಿಳಿ ಶೂ ಮತ್ತು ಕಪ್ಪು ಸಾಕ್ಸ್‌ಗಳು.
7. ಐದು ಬಗೆಯ ಕೂದಲ ವಿನ್ಯಾಸಗಳು – ಒಂದು ಮಾತ್ರ ಬಾಬ್‌ಕಟ್.
8. ಆರು ಹಕ್ಕಿಗಳು – 5 ಹಕ್ಕಿಗಳಿಗೆ ಕೆಂಪು ಬಣ್ಣದ ಮೇಲೆ ಕಪ್ಪು ಚುಕ್ಕೆಗಳಿವೆ – ಒಂದಕ್ಕೆ ಮಾತ್ರ ಕೆಂಪಿನ ಮೇಲೆ ನೀಲಿ ಚುಕ್ಕೆಗಳಿವೆ.
9. ಹಳದಿ, ಕೆಂಪು ಮತ್ತು ಹಸಿರಿನ ಭಾಗಗಳಿರುವ 6 ಬಣ್ಣದ ಕೊಡೆಗಳು ಮತ್ತು ಒಂದು ಮಾತ್ರ ಕೇಸರಿ, ಹಳದಿ ಮತ್ತು ಹಸಿರು ಭಾಗಗಳನ್ನು ಹೊಂದಿದೆ.
10. ಕೈಗೆ ಹಾಕುವ 6 ಬ್ಯಾಂಡ್‌ಗಳು – 5 ಒಂದೇ ರೀತಿಯಾಗಿವೆ, ಇನ್ನೊಂದು ಅದೇ ಬಣ್ಣದ್ದು, ಆದರೆ ಬೇರೆ ವಿನ್ಯಾಸದಲ್ಲಿದೆ.










ಹಂತ 2: **ಈ ಚಿತ್ರದಲ್ಲಿ ಏನು ತಪ್ಪಾಗಿದೆ F2.3.3 ಮಿಂಚುಪಟ್ಟಿಗಳು**

1. ನೀಲಿ ಎಲೆಗಳಿರುವ ಮರ.
2. ಕೆಂಪು ಮತ್ತು ಬಿಳಿ ಪಟ್ಟೆಗಳಿರುವ ಜೀಬ್ರಾ.
3. ಮಗುವಿಗೆ ಗಾಯವಾಗಿದೆ ಮತ್ತು ನೀಲಿ ರಕ್ತ ಬರುತ್ತಿದೆ.
4. ವೈದ್ಯರು ಕೇಸರಿ ಉಡುಪು ಹಾಕಿದ್ದಾರೆ. (ಸ್ಟೆಥೋಸ್ಕೋಪ್ ಕೊರಳಿಗೆ ಹಾಕಿದ್ದಾರೆ)
5. ಬಾಸ್ಕೆಟ್ ಬಾಲ್ ಆಟಗಾರರು, ಆದರೆ ಎರಡೂ ಕಡೆಯ ಆಟಗಾರರು ಒಂದೇ ಬಣ್ಣದ ಬಟ್ಟೆ ಹಾಕಿದ್ದಾರೆ.



## ಅನ್ವಯ

ಚಟುವಟಿಕೆ 1

### ಗುಂಪಿಗೆ ಸೇರದೇ ಇರುವುದನ್ನು ತೆಗೆಯುವುದು

1. 3 ಮಕ್ಕಳು ಒಂದು ಗುಂಪಿನಲ್ಲಿ ಕೂರುವಂತೆ ಹೇಳುವುದು,
2. ಅವರಿಗೆ 'ಗುಂಪಿಗೆ ಸೇರದೇ ಇರುವುದನ್ನು ತೆಗೆಯಿರಿ' ಮಿಂಚುಪಟ್ಟಿಗಳನ್ನು ಕೊಟ್ಟು, ಈ ಗುಂಪಿಗೆ ಸೇರದೇ ಇರುವ ಒಂದು ಸಂಗತಿ/ ವ್ಯಕ್ತಿಯನ್ನು ಗುರುತಿಸಬೇಕು ಮತ್ತು ಕಾರಣವನ್ನು ಹೇಳಬೇಕು ಎಂದು ತಿಳಿಸುವುದು.
3. ಅವರು ಬಣ್ಣಗಳ ವ್ಯತ್ಯಾಸದಲ್ಲಿ ತಮ್ಮ ಉತ್ತರವನ್ನು ಹೇಳಬೇಕು.
4. ಗುಂಪುಗಳಿಗೆ ಚಿತ್ರಗಳನ್ನು ನೋಡಲು ಅವಕಾಶ ನೀಡುವುದು. ಯಾರು ಭಿನ್ನವಾಗಿದ್ದಾರೆ ಮತ್ತು ಏಕೆ ಎಂಬುದನ್ನು ಅವರು ತೋರಿಸಲು ಅವಕಾಶ ನೀಡುತ್ತ, ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಹೇಳುತ್ತ ಹೋಗುವುದು.

ಚಟುವಟಿಕೆ 2

### ಈ ಚಿತ್ರದಲ್ಲಿ ಏನು ತಪ್ಪಾಗಿದೆ

1. ಈಗ ಐದು ಮಕ್ಕಳ ಒಂದು ಗುಂಪಿನಲ್ಲಿ ಕೆಲಸ ಮಾಡಲಿ. ಒಂದೊಂದು ಗುಂಪಿಗೂ ಒಂದೊಂದು ಮಿಂಚುಪಟ್ಟಿಯನ್ನು ನೀಡಿ, ಚಿತ್ರದಲ್ಲಿ ಏನು ತಪ್ಪಾಗಿದೆ ಎಂದು ಕೇಳುವುದು. ಅವರಿಗೆ ಆಲೋಚಿಸಲು ಕೆಲವೊಮ್ಮೆ ನೀವು ಸಹಾಯ ಮಾಡುವುದು.
2. **ಪ್ರಶ್ನೆ 1:** ನೀಲಿ ಎಲೆಗಳಿರುವ ಮರ – ಚಿತ್ರದಲ್ಲಿ ಏನು ತಪ್ಪಾಗಿದೆ ಎಂದು ಅವರಿಗೆ ಹೇಳಲು ಅವಕಾಶ ನೀಡುವುದು. ಇದು ಸ್ವಲ್ಪ ಸರಳವಾಗಿದೆ, ಹೆಚ್ಚಿನ ಮಕ್ಕಳು ಇದಕ್ಕೆ ಉತ್ತರ ಹೇಳಲು ಸಮರ್ಥರಿರುತ್ತಾರೆ.
3. **ಪ್ರಶ್ನೆ 2:** ಕೆಂಪು ಮತ್ತು ಬಿಳಿ ಪಟ್ಟೆಗಳಿರುವ ಜೀಬ್ರಾ – ಮಕ್ಕಳು ಚಿತ್ರದಲ್ಲಿ ಏನು ತಪ್ಪಾಗಿದೆ ಎಂದು ವಿವರಿಸಬೇಕು. ಬಣ್ಣಗಳು ಪಾಠದಲ್ಲಿ ಜೀಬ್ರಾವನ್ನು ಬಳಸಲಾಗಿದೆ, ಹೀಗಾಗಿ ಅವರು ಇದನ್ನು ಹೇಳಲು ಸಾಧ್ಯವಾಗುತ್ತದೆ. ಅವರಿಗೆ ಹೇಳಲು ಸಾಧ್ಯವಾಗದಿದ್ದರೆ, ಇಂಥದ್ದೇ ಇನ್ನೊಂದು ಪ್ರಾಣಿಯನ್ನು ನೋಡಿದ್ದು ನೆನಪಿದೆಯೇ ಎಂದು ಕೇಳುವುದು. ಅದರ ಬಣ್ಣ ಏನಿತ್ತು?
4. **ಪ್ರಶ್ನೆ 3:** ಮಗುವಿಗೆ ಗಾಯವಾಗಿದೆ ಮತ್ತು ನೀಲಿ ರಕ್ತ ಬರುತ್ತಿದೆ – ಈ ಚಿತ್ರದಲ್ಲಿ ಏನಾಗಿದೆ ಮತ್ತು ಏನು ತಪ್ಪಾಗಿದೆ ಎಂದು ವಿವರಿಸುವಂತೆ ಮಕ್ಕಳಿಗೆ ಹೇಳುವುದು. ಮಗುವಿಗೆ ಏನಾಗಿದೆ ಎಂದು ಮಕ್ಕಳಿಗೆ ಹೇಳಲು ಸಾಧ್ಯವಾಗದಿದ್ದರೆ, ಅಥವಾ ಅವರಿಗೆ ಗೊಂದಲವಿದ್ದರೆ, ಈ ಪ್ರಶ್ನೆಗಳನ್ನು ಕೇಳುವುದು – ನಮಗೆ ಗಾಯವಾದರೆ ಏನಾಗುತ್ತದೆ? ಯಾವ ಬಣ್ಣದ ರಕ್ತ ಬರುತ್ತದೆ? ರಕ್ತ ಯಾವಾಗಲೂ ಕೆಂಪು ಬಣ್ಣವಿರುತ್ತದೆಯೇ? ಅದು ನೀಲಿ ಅಥವಾ ಹಸಿರು ಬಣ್ಣಕ್ಕೆ ಇರುವುದೇ?
5. **ಪ್ರಶ್ನೆ 4:** ವೈದ್ಯರು ಕೇಸರಿ ಉಡುಪು ಹಾಕಿದ್ದಾರೆ (ಸ್ಟೆಥೋಸ್ಕೋಪ್ ಹಾಕಿದ್ದಾರೆ). ನಿಮಗೆ ಕಾಣ್ತಿದೆ ಅಲ್ಲವಾ, ಇವರು ವೈದ್ಯರು. ಇಲ್ಲಿ ಏನು ತಪ್ಪಾಗಿದೆ? ವೈದ್ಯರು ತಪ್ಪು ಸಮವಸ್ತ್ರ ಹಾಕಿದ್ದಾರೆ ಎಂದು ಮಕ್ಕಳು ಗುರುತಿಸುತ್ತಾರೆಯೇ ನೋಡುವುದು. ಮಕ್ಕಳಿಗೆ ಏನು ತಪ್ಪಾಗಿದೆ ಎಂದು ಹೇಳಲು ಸಾಧ್ಯವಾಗದಿದ್ದರೆ, ವೃತ್ತಿಗಳು ಚಾರ್ಟ್‌ನಲ್ಲಿರುವ ವೈದ್ಯರ ಚಿತ್ರವನ್ನು ತೋರಿಸಿ, ಎರಡಕ್ಕೂ ಏನು ವ್ಯತ್ಯಾಸವಿದೆ ಎಂದು ಕೇಳುವುದು. ವೈದ್ಯರು ಬೇರೆ ಬಣ್ಣದ ಸಮವಸ್ತ್ರ ಹಾಕಿದರೆ ಏನು ಆಗುತ್ತದೆ ಎಂದು ಮಕ್ಕಳನ್ನು ಕೇಳುವುದು.
6. **ಪ್ರಶ್ನೆ 5:** ಬಾಸ್ಕೆಟ್ ಬಾಲ್ ಆಟಗಾರರು, ಆದರೆ ಎರಡೂ ಕಡೆಯ ಆಟಗಾರರು ಒಂದೇ ಬಣ್ಣದ ಬಟ್ಟೆ ಹಾಕಿದ್ದಾರೆ. ಮಕ್ಕಳಿಗೆ ಚಿತ್ರವನ್ನು ಗಮನವಿಟ್ಟು ನೋಡಿ, ಏನಾಗುತ್ತಿದೆ ಎಂದು ಆಲೋಚಿಸಲು ಅವಕಾಶನೀಡುವುದು. ಅವರು ಯಾವ ಆಟ ಆಡುತ್ತಿದ್ದಾರೆ? ಈ ಚಿತ್ರದಲ್ಲಿ ಏನು ತಪ್ಪಾಗಿದೆ? ಅವರಿಗೆ ಹೇಳಲು ಸಾಧ್ಯವಾಗದಿದ್ದರೆ, ಹೀಗೆ ಕೇಳುವುದು – ಇಲ್ಲಿ ಎಷ್ಟು ತಂಡಗಳು ಆಟವಾಡುತ್ತಿವೆ? ಅವರು ಯಾವ ತಂಡಕ್ಕೆ ಸೇರಿದ್ದಾರೆ ಎಂದು ನಮಗೆ ಹೇಗೆ ಗೊತ್ತಾಗುತ್ತದೆ? ಎಲ್ಲ ಆಟಗಾರರು ಸರಿಯಾದ ಸಮವಸ್ತ್ರ ಹಾಕಿದ್ದಾರಾ? ಇಲ್ಲವಾದಲ್ಲಿ, ಏನು ತಪ್ಪಾಗಿದೆ? ಎರಡೂ ತಂಡದ ಆಟಗಾರರು ಒಂದೇ ಸಮವಸ್ತ್ರ ಧರಿಸಿದರೆ ಏನಾಗುತ್ತದೆ?

# ಶಿಕ್ಷಕರ ಕೈಪಿಡಿ – 4 ರಿಂದ 5 ವರ್ಷದವರಿಗೆ




Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**

New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

200787